ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 25 ಶನಿವಾರ 2022

ಸಂಪುಟ: 43 | ಸಂಚಿಕೆ: 70 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಮೈಸೂರಲ್ಲಿ ವೈದ್ಯ ದಂಪತಿ ಪುತ್ರನ ಅಪಹರಣ ಆಘಾತ: ಕೆಲವೇ ಗಂಟೆಯಲ್ಲಿ ಸುಖಾಂತ್ಯ

• ಸರಿರಾತ್ರಿಯಲ್ಲಿ ಮೈಸೂರು ಹೊರವಲಯದಲ್ಲಿ ಬಾಲಕನ ಬಿಟ್ಟು ಪರಾರಿಯಾದ ಅಪಹರಣಕಾರರು • ಪೊಲೀಸರ ಕ್ಷಿಪ್ರ ಕಾರ್ಯಾಚರಣೆಗೆ ಬೆಚ್ಚಿದ ದುಷ್ಕರ್ಮಿಗಳು; ನಾಲ್ವರು ಅಪಹರಣಕಾರರ ಬೇಟೆ ಮುಂದುವರೆಸಿರುವ ಮೈಸೂರು ನಗರ ಪೊಲೀಸರು • ಬಾಲಕನ ಬಿಡುಗಡೆಗೆ ಭಾರೀ ಪ್ರಮಾಣದ ಹಣ ನೀಡಲಾಗಿದೆ ಎಂಬ ದಟ್ಟ ವದಂತಿ

ಮೈಸೂರು, ಜೂ. 24(ಎಂಟಿವೈ)– ಮೈಸೂರಿನ ಶ್ರೀರಾಂಪುರಕ್ಕೆ ಹೊಂದಿಕೊಂಡಂತಿರುವ ಬೆಮೆಲ್ ನಗರದಲ್ಲಿ ಗುರುವಾರ ಸಂಜೆ ವೈದ್ಯ ದಂಪತಿಯ 12 ವರ್ಷದ ಪುತ್ರನ ಅಪಹರಣವಾಗಿದ್ದು, ಘಟನೆ ನಡೆದ ಕೇವಲ 5 ಗಂಟೆಯಲ್ಲಿ ವಿದ್ಯಾರ್ಥಿ ಸುರಕ್ಷಿತವಾಗಿ ಪೋಷಕರ ಮಡಿಲು ಸೇರಿದ್ದಾನೆ.

ಬೆಮೆಲ್ ನಗರದಲ್ಲಿ ವಾಸವಿರುವ ವೈದ್ಯ ದಂಪತಿಯ ಪುತ್ರ ಗುರುವಾರ ಸಂಜೆ 7 ಗಂಟೆ ಸುಮಾರಿನಲ್ಲಿ ಮನೆಯ ಬಳಿ ಸೈಕಲ್ ಓಡಿಸುತ್ತಿದ್ದಾಗ ಕಾರಿನಲ್ಲಿ ಬಂದ ನಾಲ್ವರು, ಬಾಲಕನನ್ನು ಅಪಹರಣ ಮಾಡಿದ್ದರು. ಸೈಕಲ್ ರಸ್ತೆ ಬದಿ ಬಿದ್ದಿದ್ದು, ಚಲಿಸುತ್ತಿದ್ದ ಕಾರಿನ ಹಿಂಬಾಗಿಲು ತೆರೆದಿದ್ದು, ಅಪಹೃತರಿಂದ ಪಾರಾಗಲು ಬಾಲಕ ಯತ್ನಿಸುತ್ತಿದ್ದು ಆತನ ಕಾಲುಗಳು ಒದರುತ್ತಿದ್ದ ದೃಶ್ಯವನ್ನು ಕಂಡ ಸ್ಥಳೀಯರೊಬ್ಬರು ಬಾಲಕನ ಅಪಹರಣವಾಗಿದೆ ಎಂದು ತಿಳಿದು ಅಲ್ಲಿ ಬಿದ್ದಿದ್ದ ಸೈಕಲ್ ಗುರುತು ಹಿಡಿದು, ತಕ್ಷಣವೇ ಸಮೀಪದಲ್ಲೇ ಇದ್ದ ವೈದ್ಯ ದಂಪತಿಯ ಮನೆಗೆ ತೆರಳಿ, ವಿಷಯ ತಿಳಿಸಿದ್ದಾರೆ. ಬಾಲಕನ ತಾಯಿ ತಕ್ಷಣ ಧಾವಿಸಿ ರಸ್ತೆಯಲ್ಲಿ ಬಿದ್ದಿದ್ದ ಸೈಕಲ್ ನೋಡಿ ತನ್ನ ಪುತ್ರ ಅಪಹರಣವಾಗಿರುವುದು ಖಚಿತವಾಗುತ್ತಿದ್ದಂತೆ ನಂತರ ವೈದ್ಯ ದಂಪತಿ ಕುವೆಂಪುನಗರ ಠಾಣೆಗೆ ದೂರು ನೀಡಿದ್ದಾರೆ.

ತಕ್ಷಣ ಮೈಸೂರು ನಗರ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ ಹಾಗೂ ಡಿಸಿಪಿ ಪ್ರದೀಪ್ ಗುಂಟಿ ಮಾರ್ಗದರ್ಶನದಲ್ಲಿ ನಗರದ ಎಲ್ಲಾ ಠಾಣೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿ ನಗರಾದ್ಯಂತ ನಾಕಾಬಂದಿ ರಚಿಸಿ ವಾಹನಗಳ ತಪಾಸಣೆಯಲ್ಲಿ ತೊಡಗಿದರು. ಜೊತೆಗೆ ಅಪಹರಣಕಾರರು ನಗರದಿಂದ ಹೊರ ಹೋಗುವುದನ್ನು ತಡೆಯುವ ನಿಟ್ಟಿನಲ್ಲಿ ರಿಂಗ್ ರಸ್ತೆಯಲ್ಲಿ ಪೊಲೀಸ್ ವಾಹನ ಗಸ್ತು ತೀವ್ರಗೊಳಿಸಲಾಯಿತು. ರಿಂಗ್ ರಸ್ತೆಯಲ್ಲಿ ಇರುವ ಎಲ್ಲಾ ಸಂಪರ್ಕ ರಸ್ತೆಗಳನ್ನು ಬ್ಯಾರಿಕೇಡ್‌ಗಳಿಂದ ಬಂದ್ ಮಾಡಿ, ಸಂಪರ್ಕ ರಸ್ತೆ ಮೂಲಕ ನಗರದಿಂದ ಅಪಹರಣಕಾರರ ವಾಹನ ಹೊರ ಹೋಗುವುದಕ್ಕೆ ಅವಕಾಶವಾಗದಂತೆ ಕ್ರಮ ಕೈಗೊಳ್ಳಲಾಯಿತು. ▶ 8ನೇ ಪುಟಕ್ಕೆ

ಅಪಹರಣಕಾರರ ಬಂಧನ?

ಶುಕ್ರವಾರದಂದು ಕಾರ್ಯಾಚರಣೆ ತೀವ್ರಗೊಳಿಸಿದ್ದ ಮೈಸೂರು ನಗರ ಪೊಲೀಸರು ಅಪಹರಣಕಾರರನ್ನು ಬಂಧಿಸಿದ್ದಾರೆ ಎಂದು ನಂಬಲರ್ಹ ಮೂಲಗಳಿಂದ ತಿಳಿದುಬಂದಿದೆ. ಆದರೆ, ಪೊಲೀಸರು ಇದನ್ನು ಖಚಿತಪಡಿಸಿಲ್ಲ.

ಪೊಲೀಸರಿಗೆ ಮಹತ್ವದ ಸುಳಿವು

ಮೈಸೂರು, ಜೂ.24– ಗುರುವಾರ ಸಂಜೆ ಬಾಲಕನ ಅಪಹರಿಸಿದ ಅಪಹರಣಕಾರರ ಬಗ್ಗೆ ಪೊಲೀಸರಿಗೆ ಮಹತ್ವದ ಸುಳಿವು ದೊರೆತಿದೆ ಎಂದು ಹೇಳಲಾಗಿದೆ.

ಅಪಹರಣವಾದ 5 ಗಂಟೆಯಲ್ಲೇ ಬಾಲಕ ಸುರಕ್ಷಿತವಾಗಿ ಪೋಷಕರ ಮಡಿಲು ಸೇರಿದ ನಂತರ ಪೊಲೀಸರು ಅಪಹರಣಕಾರರ ಬಂಧನಕ್ಕಾಗಿ ಕಾರ್ಯತಂತ್ರ ರೂಪಿಸಿದ್ದಾರೆ. ಆಧುನಿಕ ತಂತ್ರಜ್ಞಾನದ ನೆರವಿನೊಂದಿಗೆ ಕಾರ್ಯಾಚರಣೆಗೆ ಇಳಿದಿರುವ ಪೊಲೀಸರು, ಬಾಲಕ ನೀಡಿದ ಮಾಹಿತಿಯನ್ನಾಧರಿಸಿ ಅಪಹರಣಕಾರರು ಸಂಚರಿಸಿರಬಹುದಾದ ▶ 8ನೇ ಪುಟಕ್ಕೆ

ತಮ್ಮ ಬಗ್ಗೆ ಪೋಷಕರು, ಪೊಲೀಸರಿಗೆ ಮಾಹಿತಿ ನೀಡಿದರೆ ಸ್ಕೂಲಿಂದಲೇ ಎತ್ತಾಕಿಕೊಂಡು ಹೋಗಿ ಕೊಲ್ತೇವೆ...

• ಬಾಲಕನಿಗೆ ಅಪಹರಣಕಾರರ ಬೆದರಿಕೆ • ಅಪಹರಣ ಕಾರ್ಯಕ್ಷೇತ್ರ 20 ಕಿಮೀ • ಬಾಲಕನಿಂದ ಮಹತ್ವದ ಮಾಹಿತಿ

ಮೈಸೂರು, ಜೂ.24– ತಮ್ಮ ಗುರುತನ್ನು ಪೋಷಕರಿಗೆ ಅಥವಾ ಪೊಲೀಸರಿಗೆ ತಿಳಿಸಿದರೆ ಶಾಲೆಯಿಂದಲೇ ಎತ್ತಾಕಿಕೊಂಡು ಹೋಗಿ, ಕೊಲೆ ಮಾಡುತ್ತೇವೆ ಎಂದು ಅಪಹರಣಕಾರರು ತನ್ನನ್ನು ಹೆದರಿಸಿದ್ದರು ಎಂದು ಗುರುವಾರ ಸಂಜೆ ಅಪಹರಣಕ್ಕೊಳಗಾಗಿದ್ದ ಬಾಲಕ ತಿಳಿಸಿದ್ದಾನೆ.

ಇಂದು ಬೆಳಗ್ಗೆ ಮೈಸೂರಿನ ಬೆಮೆಲ್ ನಗರದಲ್ಲಿರುವ ತನ್ನ ನಿವಾಸದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಆತ, ನನಗೆ ಆರಂಭದಲ್ಲಿ ಟೆನ್ಷನ್ ಆಗಿತ್ತು. ಆಮೇಲೆ ಅವರ ಜೊತೆ ಮಿಂಗಲ್ ಆಗಿಬಿಟ್ಟೆ, ಹಾಗಾಗಿ ಯಾವುದೇ ಹೆದರಿಕೆ ಇರಲಿಲ್ಲ. ನನಗೆ ಅವರು ಯಾವುದೇ ರೀತಿಯ ತೊಂದರೆ ಕೊಟ್ಟಿಲ್ಲ. ಬಿಸ್ಕೆಟ್, ಚಾಕೊಲೇಟ್ ಮತ್ತು ನೀರನ್ನು ಕೊಟ್ಟರು. ನಾನು ಬೇಡ ಎಂದು ಹೇಳಿಬಿಟ್ಟೆ, ಅಪಹರಣಕಾರರಲ್ಲಿ ಓರ್ವ ಕುಂಟುತ್ತಿದ್ದ ಎಂದು ಬಾಲಕ ತಿಳಿಸಿದ್ದಾನೆ. ನೀಲಿ ಬಣ್ಣದ ಕಾರಿನಲ್ಲಿ ನನ್ನನ್ನು ಅಪಹರಿಸಲಾಗಿತ್ತು. ಕಾರು ಹಳದಿ ಬಣ್ಣದ ನಂಬರ್ ಪ್ಲೇಟ್ ಹೊಂದಿದ್ದು, ಅದರಲ್ಲಿ ಕೆಎ01 ಎಂಬ ಅಂಕಿಯನ್ನು ಮಾತ್ರ ನೋಡಿದೆ. ಉಳಿದ ಅಂಕಿಗಳನ್ನು ನೋಡುವಷ್ಟರಲ್ಲಿ ▶ 8ನೇ ಪುಟಕ್ಕೆ

ಪ್ರಧಾನಿ ಮೋದಿ ಸೇರಿ ಬಿಜೆಪಿ ಉನ್ನತ ನಾಯಕರ ಸಮ್ಮುಖದಲ್ಲಿ ಎನ್‌ಡಿಎ ರಾಷ್ಟ್ರಪತಿ ಅಭ್ಯರ್ಥಿ ದ್ರೌಪದಿ ಮುರ್ಮು ನಾಮಪತ್ರ ಸಲ್ಲಿಕೆ



ನವದೆಹಲಿ: ರಾಷ್ಟ್ರಪತಿ ಚುನಾವಣೆಗೆ ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿಯಾಗಿ ಒಡಿಶಾ ಮೂಲದ ಬುಡಕಟ್ಟು ಜನಾಂಗದ ಮಹಿಳೆ, ಜಾರ್ಖಂಡ್ ಮಾಜಿ ರಾಜ್ಯಪಾಲೆ ದ್ರೌಪದಿ ಮುರ್ಮು ಶುಕ್ರವಾರ ನಾಮಪತ್ರ ಸಲ್ಲಿಸಿದರು.

ಪ್ರಧಾನ ಮಂತ್ರಿ ನರೇಂದ್ರ ಮೋದಿ, ಕೇಂದ್ರ ಸಚಿವ ಸಂಪುಟದ ಉನ್ನತ ಸಚಿವರು, ಬಿಜೆಪಿ ಮತ್ತು ಎನ್‌ಡಿಎ ಮೈತ್ರಿಕೂಟದ ರಾಜ್ಯಗಳ ಮುಖ್ಯಮಂತ್ರಿಗಳ ಸಮ್ಮುಖದಲ್ಲಿ ಇಂದು ಮಧ್ಯಾಹ್ನ ದೆಹಲಿಯ ಸಂಸತ್ತು ಭವನದಲ್ಲಿ ದ್ರೌಪದಿ ಮುರ್ಮು ಅವರು ರಾಷ್ಟ್ರಪತಿ ಹುದ್ದೆಗೆ ತಮ್ಮ ಉಮೇದುವಾರಿಕೆ ಸಲ್ಲಿಸಿದರು.

ಅವರ ಉಮೇದುವಾರಿಕೆಯನ್ನು ಪ್ರಧಾನಿ ನರೇಂದ್ರ ಮೋದಿ ಮೊದಲು ಸೂಚಿಸಿದ್ದಾರೆ. ಮುರ್ಮು ಅವರ ಉಮೇದುವಾರಿಕೆಗೆ ಬಿಜೆಪಿ ನಾಲ್ಕು ಪ್ರತಿಯ ನಾಮಪತ್ರಗಳನ್ನು ಸಿದ್ಧಪಡಿಸಿತ್ತು. ಪ್ರಧಾನಿಯವರು ಮಾತ್ರವಲ್ಲದೆ, ಹಿರಿಯ ಕೇಂದ್ರ ▶ 4ನೇ ಪುಟಕ್ಕೆ

130 ವಿಧಾನಸಭಾ ಕ್ಷೇತ್ರಗಳತ್ತ ಕಾಂಗ್ರೆಸ್ ಚಿತ್ತ

• 224 ಕ್ಷೇತ್ರಗಳ ಗುರಿ ಇದ್ದರೂ ಗೆಲುವಿನ ವಿಶ್ವಾಸವಿರುತ ಕ್ಷೇತ್ರಗಳಿಗೆ ಆದ್ಯತೆ • ಕ್ಷೇತ್ರ ಸಮೀಕ್ಷಾ ವರದಿಗಳನ್ವಯ ಕೆಲ ಮಹತ್ವದ ತೀರ್ಮಾನ

ಬೆಂಗಳೂರು, ಜೂ.24(ಕೆಎಂಶಿ) – ರಾಜ್ಯದಲ್ಲಿ ಅಧಿಕಾರಕ್ಕೆ ಬರಲು ಹವಣಿಸುತ್ತಿರುವ ಕಾಂಗ್ರೆಸ್, ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ 130 ಕ್ಷೇತ್ರಗಳಿಗೆ ಮಾತ್ರ ಹೆಚ್ಚು ಗಮನ ನೀಡಲು ತೀರ್ಮಾನಿಸಿದೆ.



ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರ ಸಹೋದರ ಸಂಸದ ಡಿ.ಕೆ. ಸುರೇಶ್ ಈಗಿನಿಂದಲೇ ಅಭ್ಯರ್ಥಿಗಳ ಆಯ್ಕೆಗೆ ಸಮೀಕ್ಷಾ ಕಾರ್ಯವನ್ನು ಆರಂಭಿಸಿದ್ದಾರೆ. ಶಿವಕುಮಾರ್ 130 ಕ್ಷೇತ್ರಗಳಿಗೆ ಸೀಮಿತವಾಗಿ ಹೆಚ್ಚು ಒತ್ತು ನೀಡಲು ತೀರ್ಮಾನಿಸಿದ್ದರಾದರೂ, ಅವರ ಸಹೋದರ ಮಾತ್ರ ಇನ್ನೂ 224 ಕಡೆಯೂ ಗಮನಹರಿಸಿ ಎನ್ನುತ್ತಿದ್ದಾರೆ.

ಕ್ಷೇತ್ರದಲ್ಲಿ ಯಾರು ಅಭ್ಯರ್ಥಿಯಾಗಬೇಕು, ಪಕ್ಷದ ಪ್ರಭಾವ ಹೇಗಿದೆ, ಕಾಂಗ್ರೆಸ್‌ಗೆ ವಿರುದ್ಧವಾಗಿ ಯಾವ ಪಕ್ಷ ಪ್ರಬಲವಾಗಿದೆ. ಮತದಾರರ ಮನಸ್ಸು ಗೆಲ್ಲಲು ಏನು ಮಾಡಬೇಕೆಂಬ ಬಗ್ಗೆ ಈಗಾಗಲೇ ಎರಡು ಸಮೀಕ್ಷೆಗಳನ್ನು ಮಾಡಿಸಿದ್ದಾರೆ. ಹರಿಯಾಣ ಮೂಲದ ಸಮೀಕ್ಷಾ ಸಂಸ್ಥೆಯೊಂದು ನೀಡಿರುವ ಪ್ರಾಥಮಿಕ ವರದಿಯಿಂದ ಶಿವಕುಮಾರ್ ಅಧೀರರಾಗಿದ್ದರು. ಸಮೀಕ್ಷಾ ಕಾರ್ಯ ಸರಿಯಿಲ್ಲವೆಂದು ಕಾಂಗ್ರೆಸ್ ನಾಯಕ ರಾಹುಲ್‌ಗಾಂಧಿ ಅವರ ಸಲಹೆ ಮೇರೆಗೆ ಪ್ರಖ್ಯಾತ ಸಂಸ್ಥೆಯೊಂದಕ್ಕೆ ಸಮೀಕ್ಷಾ ಕಾರ್ಯ ವಹಿಸಿದ್ದಾರೆ.


ಇದರ ಜೊತೆ ಜೊತೆಯಲ್ಲೇ ಸ್ಥಳೀಯ ಸಂಸ್ಥೆಯೊಂದು ಏಕಕಾಲದಲ್ಲಿ ಸಮೀಕ್ಷೆ ಆರಂಭಿಸಿದೆ. ಅಭ್ಯರ್ಥಿಗಳ ಆಯ್ಕೆ ಕೆಳಹಂತದಿಂದಲೇ ಆಗಬೇಕು. ಅಭ್ಯರ್ಥಿ ಯಾರೆಂದು ನಾವೇ ಅಂತಿಮಗೊಳಿಸುತ್ತೇವೆ ಎಂದು ದೆಹಲಿಯ ವರಿಷ್ಠರು ರಾಜ್ಯ ನಾಯಕರಿಗೆ ಸಂದೇಶ ನೀಡಿದ್ದರೂ, ಸ್ವತಂತ್ರವಾಗಿ ಸಮೀಕ್ಷೆಯನ್ನು ಶಿವಕುಮಾರ್ ಕೈಗೆತ್ತಿಕೊಂಡಿದ್ದಾರೆ.

ರಾಜ್ಯದಲ್ಲಿ ಅಧಿಕಾರಕ್ಕೆ ಬರಲು 113 ಸ್ಥಾನ ಬೇಕು. 130 ಕ್ಷೇತ್ರಗಳಿಗೆ ಸೀಮಿತವಾಗಿ ಹೋರಾಟ ನಡೆಸೋಣ ಎಂದು ಕ್ಷೇತ್ರಗಳ ಪಟ್ಟಿ ನೀಡಿ, ಇತ್ತ ಕಡೆ ಹೆಚ್ಚು ಗಮನ ಹರಿಸುವಂತೆ ದೆಹಲಿ ಮೂಲದ ಸಂಸ್ಥೆಗೆ ತಿಳಿಸಿದ್ದಾರೆ.

ಉಳಿದ 94 ಕ್ಷೇತ್ರಗಳ ಬಗ್ಗೆಯು ಸಮೀಕ್ಷೆಯಾಗಲಿ. ಆದರೆ ಮೊದಲ ಆದ್ಯತೆ ಮತ್ತು ಹೆಚ್ಚು ಒತ್ತು ಕೊಡುವುದು 130 ಕ್ಷೇತ್ರಗಳಿಗೆ ಎಂದಿದ್ದಾರೆ. ದೆಹಲಿ ಮೂಲದ ಸಂಸ್ಥೆ ಬೂತ್ ಮಟ್ಟದಲ್ಲಿ ಸಮೀಕ್ಷಾ ಕಾರ್ಯ ಆರಂಭಿಸಿದೆ. ಸ್ಥಳೀಯ ಕಾಂಗ್ರೆಸ್ ಮುಖಂಡರು ಮತ್ತು ಪದಾಧಿಕಾರಿಗಳಿಗೆ ಈ ಸಂಸ್ಥೆ ಕೆಲವು ಸಲಹೆ ಸೂಚನೆಗಳನ್ನು ನೀಡಿ, ನಾವು ಹೇಳಿದಂತೆ ನಡೆದುಕೊಳ್ಳಬೇಕೆಂದು ಆದೇಶ ಮಾಡುತ್ತಿವೆ. ಕಾಂಗ್ರೆಸ್ ಶಾಸಕರಿಲ್ಲದ ಕ್ಷೇತ್ರಗಳಲ್ಲಿ ಬಿಜೆಪಿ, ಜೆಡಿಎಸ್ ಶಾಸಕರಿದ್ದರೆ ▶ 8ನೇ ಪುಟಕ್ಕೆ

'ಮಹಾ' ರಾಜಕೀಯ ಬಿಕ್ಕಟ್ಟು, ರಾಷ್ಟ್ರಪತಿ ಚುನಾವಣೆ ಹಿನ್ನೆಲೆ ಮತ್ತೆ ಬರಿಗೈಲಿ ಬಂದ ಸಿಎಂ ಬೊಮ್ಮಾಯಿ

ದೆಹಲಿ: ಪಕ್ಷದ ವರಿಷ್ಠರು ರಾಷ್ಟ್ರಪತಿ ಚುನಾವಣೆಯ ವಿಚಾರದಲ್ಲಿ ತಲ್ಲೀನರಾಗಿದ್ದಾರೆ. ಹೀಗಾಗಿ, ಸಚಿವ ಸಂಪುಟ ವಿಸ್ತರಣೆ ಸಂಬಂಧ ವರಿಷ್ಠರನ್ನು ಭೇಟಿಯಾಗುವುದಿಲ್ಲ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸ್ಪಷ್ಟಪಡಿಸಿದರು.



ನವದೆಹಲಿಯಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, ರಾಷ್ಟ್ರಪತಿ ಚುನಾವಣೆಗೆ ನಮ್ಮ ಪಕ್ಷದ ಅಭ್ಯರ್ಥಿಗೆ ಸೂಚಕರಾಗಿ ಸಹಿ ಹಾಕಲು ಪಕ್ಷದ ಎಲ್ಲ ಮುಖ್ಯಮಂತ್ರಿಗಳಿಗೆ ಸೂಚಿಸಿದ್ದಾರೆ. ಆ ಕೆಲಸಕ್ಕೆ ಬಂದಿದ್ದೇನೆ. ಜತೆಗೆ ಯಾವುದೇ ಕೇಂದ್ರ ಸಚಿವರನ್ನು ಭೇಟಿ ಮಾಡುವುದಿಲ್ಲ ಎಂದು. ಸಚಿವ ಸಂಪುಟ ವಿಸ್ತರಣೆಗೆ ಕಾಲ ಕೂಡಿ ಬಂದಾಗ ನಾನೇ ಅದನ್ನು ಅಧಿಕೃತವಾಗಿ ಹೇಳುತ್ತೇನೆ ಎಂದರು. ಕೇಂದ್ರದ ಬಿಜೆಪಿ ನಾಯಕರು ▶ 8ನೇ ಪುಟಕ್ಕೆ

ಜೂನ್ 27ರಿಂದ SSLC ಪೂರಕ ಪರೀಕ್ಷೆ

ಬೆಂಗಳೂರು, ಜೂ.24– ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ 2022ನೇ ಸಾಲಿನ ಎಸ್ಸೆಸ್ಸೆಲ್ಸಿ ಪೂರಕ ಪರೀಕ್ಷೆ ಜೂನ್ 27ರಿಂದ ಜುಲೈ 4ರವರೆಗೆ ನಡೆಯಲಿದೆ. ಪೂರಕ ಪರೀಕ್ಷೆಗೆ ನೋಂದಾಯಿಸಿಕೊಂಡಿರುವ ವಿದ್ಯಾರ್ಥಿಗಳು ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯ ವೆಬ್‌ಸೈಟ್ ಮೂಲಕ ಪ್ರವೇಶ ಪತ್ರವನ್ನು ಡೌನ್ ಲೋಡ್ ಮಾಡಿಕೊಳ್ಳಬಹುದು ಅಥವಾ ಕಾಲೇಜು ಆಡಳಿತ ಮಂಡಳಿ ಪ್ರವೇಶ ಪತ್ರವನ್ನು ನೇರವಾಗಿ ವಿದ್ಯಾರ್ಥಿಗಳಿಗೆ ನೀಡುಬಹುದು. ಮಾಹಿತಿಗೆ ಇಲಾಖೆ ವೆಬ್‌ಸೈಟ್ https://sslc.karnataka.gov.in ಸಂಪರ್ಕಿಸಬಹುದು.

ಸರ್ಕಾರಿ ಭೂಮಿಯ ಅಕ್ರಮ ಸಾಗುವಳಿ ಸಕ್ರಮಕ್ಕೆ ನಿರ್ಧಾರ

ಬೆಂಗಳೂರು, ಜೂ.24(ಕೆಎಂಶಿ)–ಸರ್ಕಾರಿ ಜಮೀನುಗಳಲ್ಲಿ ಅನಧಿಕೃತ ಸಾಗುವಳಿ ಸಕ್ರಮಗೊಳಿಸಲು ಉಳಿಮೆದಾರರು ಅರ್ಜಿ ಸಲ್ಲಿಸಲು ಮತ್ತೊಂದು ವರ್ಷ ಅವಕಾಶ ನೀಡಲಾಗಿದೆ.

ಸರ್ಕಾರ ಈ ಸಂಬಂಧ ಆದೇಶ ಹೊರಡಿಸಿ, ಅನಧಿಕೃತ ಸಾಗುವಳಿಯನ್ನು ಸಕ್ರಮಗೊಳಿಸಲು ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಕಲಂ 94ಎ (4) ರಡಿಯಲ್ಲಿ ನಮೂನೆ 57 ರಲ್ಲಿ ಅರ್ಜಿ ಗಳನ್ನು ಸ್ವೀಕರಿಸಲು 26ನೇ ಮೇ, 2023 ರವರೆಗೂ ವಿಸ್ತರಿಸಲಾಗಿದೆ.

ಮಗನಿಗೆ ಎಸ್‌ಐ ಹುದ್ದೆ ಕೊಡಿಸುವುದಾಗಿ ರೈತನಿಗೆ 30.25 ಲಕ್ಷ ವಂಚನೆ

• ಮುಖ್ಯಮಂತ್ರಿ ಬೊಮ್ಮಾಯಿ, ಬಿ.ವೈ. ವಿಜಯೇಂದ್ರ ಆಪ್ತನೆಂದು ಹೇಳಿ ಮೋಸ • ಇದ್ದ 2 ಎಕರೆಯಲ್ಲಿ ಒಂದೂವರೆ ಎಕರೆ ಭೂಮಿ ಮಾರಿ ಸಾಲಸೋಲ ಮಾಡಿ ಹಣ ಹೊಂದಾಣಿಕೆ • ಮಂಡ್ಯ ಎಸ್ಪಿಗೆ ದೂರು ನೀಡಿದ ರೈತ ನಿಂಗರಾಜು; ಪರಿಶೀಲನೆ ನಂತರ ಎಫ್‌ಐಆರ್

ಶ್ರೀರಂಗಪಟ್ಟಣ, ಜೂ. 24(ವಿನಯ್ ಕಾರೇಕುರ)– ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಮಾಜಿ ಸಿಎಂ ಯಡಿಯೂರಪ್ಪ ಅವರ ಪುತ್ರ ವಿಜಯೇಂದ್ರ ಅವರ ಹೆಸರನ್ನು ಹೇಳಿ, ನಿಮ್ಮ ಮಗನಿಗೆ ಸಬ್ ಇನ್ಸ್‌ಪೆಕ್ಟರ್ ಹುದ್ದೆ ಕೊಡಿಸುವುದಾಗಿ ನಂಬಿಸಿ ವ್ಯಕ್ತಿಯೋರ್ವ, ರೈತನಿಗೆ 30.25 ಲಕ್ಷ ರೂ. ವಂಚಿಸಿರುವುದು ಬೆಳಕಿಗೆ ಬಂದಿದೆ.

ಶ್ರೀರಂಗಪಟ್ಟಣ ತಾಲೂಕು ಗಾಮನಹಳ್ಳಿ ಗ್ರಾಮದ ರೈತ ನಿಂಗರಾಜು ವಂಚನೆಗೊಳಗಾದವರಾಗಿದ್ದು, ಕೋಲಾರದ ಮಂಜುನಾಥ್ ಅಲಿಯಾಸ್ ಅಕ್ಷಯ್ ಎಂಬಾತನೇ ರೈತನನ್ನು ವಂಚಿಸಿದವನಾಗಿದ್ದಾನೆ. ರೈತ ನಿಂಗರಾಜುಗೆ ಪರಿಚಯಸ್ಥನಾಗಿರುವ ಕೋಲಾರ ಮೂಲದವನಾಗಿದ್ದು, ಚನ್ನಪಟ್ಟಣ ಬಿಜೆಪಿ ವಕ್ತಾರನಾಗಿದ್ದ ಸುರೇಶ್ ಎಂಬಾತ ರೈತನಿಗೆ ಮಂಜುನಾಥ್‌ನನ್ನು ಪರಿಚಯ ಮಾಡಿ, ನಿಮ್ಮ ಮಗನಿಗೆ ಇವರು ಸಬ್ ಇನ್ಸ್‌ಪೆಕ್ಟರ್ ▶ 4ನೇ ಪುಟಕ್ಕೆ

> ರೈತ ನಿಂಗರಾಜು ಅವರು ದೂರು ಸಲ್ಲಿಸಿದ್ದು, ಸಬ್‌ಇನ್ಸ್‌ಪೆಕ್ಟರ್ ಹುದ್ದೆ ನೇಮಕಾತಿ ಪ್ರಕರಣವನ್ನು ಸಿಐಡಿ ತನಿಖೆ ನಡೆಸುತ್ತಿದೆ. ಇದೀಗ ನಿಂಗರಾಜು ನೀಡಿರುವ ದೂರಿನ ಬಗ್ಗೆಯೂ ಸಿಐಡಿಯೇ ತನಿಖೆ ನಡೆಸಬೇಕೇ ಅಥವಾ ಮಂಡ್ಯ ಜಿಲ್ಲಾ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಬೇಕೇ ಎಂಬುದರ ಬಗ್ಗೆ ಸ್ಪಷ್ಟನೆ ಪಡೆಯಬೇಕಾಗಿದೆ. ಈ ಪ್ರಕರಣವನ್ನು ಸಿಐಡಿಯೇ ತನಿಖೆ ನಡೆಸುವುದಾದರೆ ನಿಂಗರಾಜು ಅವರ ದೂರನ್ನು ಅವರಿಗೆ ವರ್ಗಾವಣೆ ಮಾಡಲಾಗುವುದು. ಒಂದು ವೇಳೆ ನಾವೇ ತನಿಖೆ ನಡೆಸಬಹುದಾದರೆ ಇಲ್ಲಿಯೇ ಎಫ್‌ಐಆರ್ ದಾಖಲಿಸಲಾಗುತ್ತದೆ.
>
> – ಯತೀಶ್, ಮಂಡ್ಯ ಜಿಲ್ಲಾ ಎಸ್ಪಿ.

ವಿದ್ಯುತ್ ಕಂಬಕ್ಕೆ ತ್ರಿಚಕ್ರ ಸ್ಕೂಟರ್ ಡಿಕ್ಕಿ: ಇಬ್ಬರ ಸಾವು

ಸರಗೂರು, ಜೂ. 24(ನಾಗೇಶ್)– ವಿಕಲಚೇತನ ಚಾಲನೆ ಮಾಡುತ್ತಿದ್ದ ವಾಹನ ನಿಯಂತ್ರಣ ತಪ್ಪಿ ರಸ್ತೆ ಬದಿಯ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಸಾವನ್ನಪ್ಪಿ, ಮತ್ತೊಬ್ಬರು ಗಾಯಗೊಂಡಿರುವ ಘಟನೆ ಇಲ್ಲಿಗೆ ಸಮೀಪದ ಶಾಂತಿನಗರ ಬಳಿ ಇಂದು ಸಂಜೆ ಸಂಭವಿಸಿದೆ.

ಸಮೀಪದ ಕಲ್ಲಹಳ್ಳಿ ಹಾಡಿಯ ವಾಸಿ ನಾಗಮ್ಮ ಮತ್ತು ವಿಜಯೇಂದ್ರ ದುರಂತದಲ್ಲಿ ಸಾವನ್ನಪ್ಪಿದ್ದು, ತೀವ್ರವಾಗಿ ಗಾಯಗೊಂಡಿರುವ ವಿಕಲಚೇತನ ಕಾಳ(55) ಅವರನ್ನು ವಿವೇಕಾನಂದ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಕಲ್ಲಹಳ್ಳಿ ನಿವಾಸಿ ಕಾಳ ವಿಕಲಚೇತನರಾಗಿದ್ದು, ಎನ್. ಬೇಗೂರು ಬಳಿಯ ಮಾಳಹಾಡಿಯ ಯುವತಿಯನ್ನು ವಿವಾಹವಾಗಿದ್ದು, ಪತ್ನಿ ಮನೆಯಲ್ಲಿಯೇ ನೆಲೆಸಿದ್ದಾರೆ. ಇಂದು ಮೂರು ಚಕ್ರದ ಸ್ಕೂಟರ್‌ನಲ್ಲಿ ಕಲ್ಲಹಳ್ಳಿಗೆ ತೆರಳಿದ್ದರೆನ್ನಲಾಗಿದೆ. ಈ ವೇಳೆ ಅದೇ ಹಾಡಿಯ ನಾಗಮ್ಮ ಮತ್ತು ವಿಜಯೇಂದ್ರರನ್ನು ಕರೆದುಕೊಂಡು ಸಮೀಪದ ಸೀಗೆವಾಡಿಯಲ್ಲಿ ▶ 8ನೇ ಪುಟಕ್ಕೆ

ಮೈಸೂರು ಮಿತ್ರ

ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಎಂಎಲ್‌ಸಿ ಡಾ.ಡಿ.ತಿಮ್ಮಯ್ಯರ ಕಚೇರಿ ಆರಂಭ

ಮಾಜಿ ಸಿಎಂ ಸಿದ್ದರಾಮಯ್ಯ ಉದ್ಘಾಟನೆ



ಮೈಸೂರು,ಜೂ.24 (ಆರ್‌ಕೆಬಿ)– ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ವಿಧಾನ ಪರಿಷತ್ ಸದಸ್ಯ ಡಾ.ಡಿ. ತಿಮ್ಮಯ್ಯ ಅವರ ಕಚೇರಿಯನ್ನು ಮಾಜಿ ಮುಖ್ಯಮಂತ್ರಿ, ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಶುಕ್ರವಾರ ಉದ್ಘಾಟಿಸಿದರು.

ಜಲದರ್ಶಿನಿ ಅತಿಥಿಗೃಹದ ಹೊಸ ಕಟ್ಟಡದ ನೆಲ ಅಂತಸ್ತಿನ ಎಡ ಭಾಗದಲ್ಲಿರುವ ಕೊಠಡಿಯಲ್ಲಿ ಡಾ.ಡಿ.ತಿಮ್ಮಯ್ಯ ಅವರ ಕಚೇರಿ ತೆರೆಯಲಾಗಿದ್ದು, ಈ ಸಂದರ್ಭದಲ್ಲಿ ಮಾಜಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಮಾಜಿ ಶಾಸಕರಾದ ವಾಸು, ಎಂ.ಕೆ.ಸೋಮಶೇಖರ್, ಮಾಜಿ ಸಂಸದ ಕಾಗಲವಾಡಿ ಎಂ.ಶಿವಣ್ಣ, ಜಿಪಂ ಮಾಜಿ ಅಧ್ಯಕ್ಷರಾದ ಬಿ.ಎಂ.ರಾಮು, ಕೆ.ಮರೀಗೌಡ, ಕಾಂಗ್ರೆಸ್ ಗ್ರಾಮಾಂತರ ಜಿಲ್ಲಾಧ್ಯಕ್ಷ ಬಿ.ಜೆ. ವಿಜಯಕುಮಾರ್, ನಗರಾಧ್ಯಕ್ಷ ಆರ್.ಮೂರ್ತಿ ಇನ್ನಿತರ ಮುಖಂಡರು ಉಪಸ್ಥಿತರಿದ್ದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ವಿಧಾನ ಪರಿಷತ್ ಸದಸ್ಯ ಡಾ.ಡಿ. ತಿಮ್ಮಯ್ಯ, ಸಾರ್ವಜನಿಕರ ಹಿತದೃಷ್ಟಿಯಿಂದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸೂಚನೆಯಂತೆ ಇಲ್ಲಿ ಕಚೇರಿ ತೆರೆಯಲಾಗಿದೆ. ಅವರೇ ಖುದ್ದು ಕಚೇರಿಯನ್ನು ಉದ್ಘಾಟಿಸಿ ಶುಭ ಹಾರೈಸಿದ್ದಾರೆ. ಸಾರ್ವಜನಿಕರು ಮಂಗಳವಾರ, ಬುಧವಾರ ಹೊರತುಪಡಿಸಿ ಉಳಿದ ದಿನಗಳಲ್ಲಿ ಬೆಳಗ್ಗೆ 11ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಕಚೇರಿಗೆ ಭೇಟಿ ನೀಡಿ ತಮ್ಮ ಕುಂದುಕೊರತೆ, ಅಹವಾಲುಗಳನ್ನು ಸಲ್ಲಿಸಬಹುದಾಗಿದೆ ಎಂದು ತಿಳಿಸಿದರು.

ಅಗ್ನಿಪಥ್ ಯೋಜನೆಯಡಿ ಅಗ್ನಿವೀರ್ ವಾಯು ಪ್ರವೇಶಕ್ಕೆ ಅರ್ಜಿ ಆಹ್ವಾನ

ಮೈಸೂರು, ಜೂ.24– ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಯ ವತಿಯಿಂದ ಭಾರತೀಯ ವಾಯುದಳದಲ್ಲಿ ಅಗ್ನಿಪಥ್ ಯೋಜನೆಯಡಿ "ಅಗ್ನಿವೀರ್" ವಾಯು ಪ್ರವೇಶಕ್ಕೆ ಭಾರತೀಯ: ಅರ್ಹ ಅವಿವಾಹಿತ ಪುರುಷ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಆಯ್ಕೆ ಪರೀಕ್ಷೆಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಜಿಲ್ಲೆಯ ಪುರುಷ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ. ವಯೋಮಿತಿ ಹದಿನೇಳೂವರೆ ವರ್ಷದಿಂದ 23 ವರ್ಷದೊಳಗಿರಬೇಕು. (29–12–1999 ರಿಂದ 29–06–2005 ರ ಒಳಗೆ ಜನಿಸಿದವರಾಗಿರಬೇಕು) ವಿದ್ಯಾರ್ಹತೆ: ಪಿಯುಸಿ ತೇರ್ಗಡೆ ಹೊಂದಿರಬೇಕು. ಹಾಗೂ ಪಿಯುಸಿಯಲ್ಲಿ ಗಣಿತ, ಭೌತಶಾಸ್ತ್ರ, ಇಂಗ್ಲೀಷ್ ವಿಷಯಗಳಲ್ಲಿ ಕನಿಷ್ಠ 50 ಅಂಕ ಪಡೆದಿರಬೇಕು. 'ಇಂಗ್ಲೀಷ್‌ನಲ್ಲಿ ಗರಿಷ್ಠ 50 ಅಂಕಗಳೊಂದಿಗೆ ತೇರ್ಗಡೆ ಅಥವಾ 3 ವರ್ಷದ ಡಿಪ್ಲೋಮದಲ್ಲಿ ತೇರ್ಗಡೆ ಹೊಂದಿರಬೇಕು ಅದರಲ್ಲಿ 50 ಅಂಕಗಳೊಂದಿಗೆ ತೇರ್ಗಡೆ ಹೊಂದಿರಬೇಕು, ಎತ್ತರ: 1525 ಸೆಂ.ಮಿ, ತೂಕ, ಎತ್ತರಕ್ಕೆ ಅನುಗುಣವಾಗಿ ಇರಹಕ್ಕದ್ದು, ಅರ್ಜಿ ಶುಲ್ಕ 250 ರೂ ಗಳು ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸಲು ಜು.5 ಕೊನೆ ದಿನಾಂಕ. ವೆಬ್‌ಸೈಟ್ http://agnipathvayu.cdac.in ನಲ್ಲಿ ಅರ್ಜಿ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರು, ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ, ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಆವರಣ, ಎಸ್.ಆರ್. ಮೋದಲ್ಲಾ ಮೈಸೂರು–11 ಅವರನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಿ ಮಾಹಿತಿಯನ್ನು ಪಡೆಯಬಹುದಾಗಿದೆ. ಕಚೇರಿ ದೂರವಾಣಿ ಸಂಖ್ಯೆ 0821–2489972 ಅನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ಸಹಾಯಕ ನಿರ್ದೇಶಕರಾದ ಡಿ.ರಾಣಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಧಾನಿಗೆ ಬರೆದ ಪತ್ರಕ್ಕೆ 13 ತಿಂಗಳ ನಂತರ ಉತ್ತರ

ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ



ಮೈಸೂರು, ಜೂ.24(ಜಿಎ)– 40 ಪರ್ಸೆಂಟ್ ಕಮಿಷನ್ ವಿಚಾರವಾಗಿ ಪ್ರಧಾನ ಮಂತ್ರಿಗಳಿಗೆ ತಾವು ಬರೆದ ದೂರು ಪತ್ರಕ್ಕೆ 13 ತಿಂಗಳ ನಂತರ ಉತ್ತರ ಬಂದಿದೆ ಎಂದು ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ. ಕೆಂಪಣ್ಣ ತಿಳಿಸಿದರು.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಮೈಸೂರು ಜಿಲ್ಲಾ ಗುತ್ತಿಗೆದಾರರ ಸಂಘವನ್ನು ಉದ್ಘಾಟಿಸಿ ಮಾತನಾಡುತ್ತಿದ್ದ ಅವರು, ನಾವೆಲ್ಲರೂ ಒಗ್ಗೂಡಿದರೆ ಏನು ಬೇಕಾದರೂ ಸಾಧಿಸಬಹುದು. ಅನೇಕ ಕಡೆಗಳಲ್ಲಿ ಇಂಜಿನಿಯರ್‌ಗಳು ಏಜೆಂಟ್‌ಗಳಾಗಿದ್ದು, ಚೀಫ್ ಇಂಜಿನಿಯರ್‌ಗಳ ಮಕ್ಕಳು ಕೆಲಸಗಳನ್ನು ಮಾಡುತ್ತಾರೆ. ನಾವು ಒಗ್ಗಟ್ಟಾದರೆ ಅವರನೆಲ್ಲ ಒದ್ದು ಓಡಿಸಬಹುದು ಎಂದರು.

ಮೈಸೂರು ವಿಶ್ವ ಮಟ್ಟದಲ್ಲಿ ಪ್ರಸಿದ್ಧಿ ಹೊಂದಿದೆ. ಆದರೆ ಇಲ್ಲಿನ ಗುತ್ತಿಗೆದಾರರು ಮಾತ್ರ ಹಿಂದುಳಿದಿದ್ದಾರೆ. ಮುಡಾದಲ್ಲಿಯೇ ಅನೇಕ ಕೆಲಸಗಳ ಗುತ್ತಿಗೆ ದೊರೆಯುತ್ತದೆ. ಅವುಗಳನ್ನು ಉತ್ತಮವಾಗಿ ಮಾಡಿ ಎಂದು ಸಲಹೆ ನೀಡಿದರು.


ಭಾರತದ ಯಾವುದೇ ಮೂಲೆಗೆ ತೆರಳಿ 40 ಪರ್ಸೆಂಟ್ ಕಮಿಷನ್ ಪಡೆಯುವ ರಾಜ್ಯ ಯಾವುದು ಎಂದರೆ ಕರ್ನಾಟಕ ಎಂಬ ಮಾತುಗಳು ಕೇಳಿಬರುತ್ತಿತ್ತು. ಈ ವಿಚಾರವಾಗಿ ಈ ಹಿಂದೆ ಮುಖ್ಯಮಂತ್ರಿಯಾಗಿದ್ದ ಯಡಿಯೂರಪ್ಪ ಅವರಿಗೆ ಪತ್ರ ಬರೆದಿದ್ದೆ. ಅದರಿಂದ ಏನು ಪ್ರಯೋಜನವಾಗಲಿಲ್ಲ. ನಂತರ ಪ್ರಧಾನ ಮಂತ್ರಿಗಳಿಗೂ ಪತ್ರ ಬರೆಯಲಾಗಿತ್ತು ಅಲ್ಲಿಂದಲೂ ತಕ್ಷಣ ಉತ್ತರ ಬರಲಿಲ್ಲ. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಪ್ರತಿಭಟನೆ ಮಾಡಿದ್ದೆವು ಈ ವೇಳೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕರೆದು ಯಾವುದೇ ಪ್ರತಿಭಟನೆ ಮಾಡಬೇಡಿ ಎಲ್ಲವನ್ನು ಸರಿಪಡಿಸೋಣ ಎಂದು ಹೇಳಿದ ಕಾರಣದಿಂದ ಪ್ರತಿಭಟನೆಯನ್ನು ಕೈಬಿಡಲಾಗಿತ್ತು ಎಂದರು

ಪ್ರಧಾನ ಮಂತ್ರಿಗಳಿಗೆ ಬರೆದ ಪತ್ರಕ್ಕೆ ಒಂದು ವರ್ಷ ಒಂದು ತಿಂಗಳ ನಂತರ ಉತ್ತರ ಬಂದಿದೆ. ಪ್ರಧಾನ ಮಂತ್ರಿಗಳ ಕಚೇರಿಯಿಂದ ಬಂದಿರುವ ಪತ್ರದಲ್ಲಿ ನಮ್ಮ ಕಚೇರಿಯಿಂದ ಒಬ್ಬರು ಅಧಿಕಾರಿ 10 ದಿನಗಳ ಒಳಗೆ ನಿಮ್ಮನ್ನು ಭೇಟಿ ಮಾಡಲಿದ್ದಾರೆ ಈ ವೇಳೆ ನಿಮ್ಮ ಎಲ್ಲಾ ಸಮಸ್ಯೆಗಳನ್ನು ಅವರಿಗೆ ತಿಳಿಸಿ ಎಂದು ಹೇಳಲಾಗಿದೆ. ಹೋರಾಟದ ಮೂಲಕ ಏನು ಬೇಕಾದರೂ ಸಾಧಿಸಬಹುದು ಎಂಬುದಕ್ಕೆ ನಮ್ಮ ರಾಜ್ಯ ಸಂಘ ಮಾಡಿ ತೋರಿಸಿದೆ ಎಂದು ತಿಳಿಸಿದರು.

ಇದೇ ವೇಳೆ ಮೈಸೂರಿನ ಗುತ್ತಿಗೆದಾರರು ವಿವಿಧ ಇಲಾಖೆಗಳಿಂದ ಆಗುತ್ತಿರುವ ಎಲ್ಲಾ ಸಮಸ್ಯೆಗಳ ಕುರಿತು ರಾಜ್ಯ ಅಧ್ಯಕ್ಷರ ಗಮನಕ್ಕೆ ತಂದರು.

ಕಾರ್ಯಕ್ರಮದಲ್ಲಿ ರಾಜ್ಯ ಗುತ್ತಿಗೆದಾರರ ಸಂಘದ ಪ್ರಧಾನ ಕಾರ್ಯದರ್ಶಿ ಬಿ.ಎಂ. ರವೀಂದ್ರ,ಮೈಸೂರು ಜಿಲ್ಲಾ ಗುತ್ತಿಗೆದಾರರ ಸಂಘದ ಅಧ್ಯಕ್ಷ ಎ.ಜಿ. ಸುರೇಶ್, ಗೌರವಾಧ್ಯಕ್ಷ ಜಿ. ಅಶೋಕ್, ಕಾರ್ಯಾಧ್ಯಕ್ಷ ಸಿ.ಡಿ. ಕೃಷ್ಣ, ಪ್ರಧಾನ ಕಾರ್ಯದರ್ಶಿ ಕೆ.ರವಿ ಮತ್ತು ಖಜಾಂಚಿ ಎನ್.ಎನ್. ಮಹದೇವಸ್ವಾಮಿ ಸೇರಿದಂತೆ ಮತ್ತಿತರರಿದ್ದರು.

ಎಂ.ಬಾಬು ನಿಧನ



ಮೈಸೂರು, ಜೂ.24– ಮೈಸೂರು ಟಿ.ಕೆ.ಲೇಔಟ್ ನಿವಾಸಿ ಹಾಗೂ ಆಟೋ ಚಾಲಕ ಎಂ.ಬಾಬು (72) ಅವರು ಇಂದು ಸಂಜೆ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಮೃತರು ಪತ್ನಿ ಪುಟ್ಟತಾಯಮ್ಮ, ಪುತ್ರ ಶಿವಕುಮಾರ್, ಪುತ್ರಿಯರಾದ ಭವ್ಯ, ಅಶ್ವಿನಿ, ಅಳಿಯಂದಿರು, ಸೊಸೆ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧುವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ (ಶನಿವಾರ) ಬೆಳಗ್ಗೆ 11–30 ಗಂಟೆಗೆ ಕೆ.ಜಿ.ಕೊಪ್ಪಲು ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅಲೆಮಾರಿ, ಅರೆ ಅಲೆಮಾರಿ ಜನಸಂಖ್ಯೆ ದಾಖಲಿಸಲು ಶೀಘ್ರ ಸಮೀಕ್ಷೆ

- ಈ ಸಮುದಾಯದ ಅಭಿವೃದ್ಧಿ ನಿಗಮದ ಅಧ್ಯಕ್ಷ ಕೆ.ರವೀಂದ್ರ ಶೆಟ್ಟಿ ಮಾಹಿತಿ
- ಸಮುದಾಯದ ವಸತಿ ರಹಿತರಿಗೆ ಸೂರು ಕಲ್ಪಿಸಲು ಕ್ರಿಯಾಯೋಜನೆ



ಮೈಸೂರು,ಜೂ.24(ಎಂಟಿವೈ)– ರಾಜ್ಯದಲ್ಲಿರುವ ಅಲೆಮಾರಿ ಮತ್ತು ಅರೆ ಅಲೆಮಾರಿ ಸಮುದಾಯದ ನಿಖರ ಜನಸಂಖ್ಯೆ ದಾಖಲಿಸಲು ಶೀಘ್ರದಲ್ಲೇ ರಾಜ್ಯಾದ್ಯಂತ ಸಮೀಕ್ಷೆ ನಡೆಸಲಾಗುತ್ತಿದೆ ಎಂದು ಕರ್ನಾಟಕ ಅಲೆಮಾರಿ ಮತ್ತು ಅರೆ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಕೆ.ರವೀಂದ್ರ ಶೆಟ್ಟಿ ತಿಳಿಸಿದ್ದಾರೆ.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಲೆಮಾರಿ ಹಾಗೂ ಅರೆ ಅಲೆಮಾರಿ ಸಮುದಾಯದಲ್ಲಿ 46 ಜಾತಿಗಳಿವೆ. ರಾಜ್ಯದಲ್ಲಿ ಈ ಸಮುದಾಯಕ್ಕೆ ಸೇರಿದ 29 ಲಕ್ಷ ಜನಸಂಖ್ಯೆ ಇರುವುದಾಗಿ ಅಂದಾಜಿಸಲಾಗಿದೆ. ಆದರೆ, ಈ ಸಮುದಾಯದ ಸಂಘ–ಸಂಸ್ಥೆಗಳು ನೀಡಿರುವ ಮಾಹಿತಿಯಂತೆ ಜನಸಂಖ್ಯೆ 75 ಲಕ್ಷದಷ್ಟು ಇದೆ ಎಂದಿದ್ದಾರೆ. ಆದ್ದರಿಂದ ಖಚಿತ ಮಾಹಿತಿ ಪಡೆದುಕೊಳ್ಳಲು ಸಮೀಕ್ಷೆ ನಡೆಸಲಾಗುತ್ತಿದೆ. ಮೈಸೂರು ಜಿಲ್ಲೆಯಲ್ಲಿ 9,645 ಜನಸಂಖ್ಯೆ ಇದೆ. ಆದರೆ, ಎಷ್ಟು ಕುಟುಂಬಗಳಿವೆ ಎಂಬುದರ ಕುರಿತು ಮಾಹಿತಿ ಸಂಗ್ರಹಿಸಲು ಸೂಚಿಸಲಾಗಿದೆ ಎಂದರು.


ಈ ಸಮುದಾಯದ ಶೇ.40ರಷ್ಟು ಜನರು ವಸತಿ ರಹಿತರು. ಇವರೆಲ್ಲ ಬಯಲು ಜಾಗದಲ್ಲಿ ಟೆಂಟ್‌ನಲ್ಲಿ ಮತ್ತು ಬಾಡಿಗೆ ಮನೆಗಳಲ್ಲಿ ಜೀವನ ಸಾಗಿಸುತ್ತಿದ್ದಾರೆ. ಇವರಿಗೆ ಶಾಶ್ವತವಾದ ಸೂರು ಕಲ್ಪಿಸಬೇಕಾಗಿದೆ. ಅದಕ್ಕಾಗಿ, ಕೇಂದ್ರ, ರಾಜ್ಯ ಸರ್ಕಾರದ ವಿವಿಧ ವಸತಿ ಯೋಜನೆಯಡಿ ಮನೆ ಕೊಡಿಸಲು ಕ್ರಮ ಕೈಗೊಳ್ಳಲಾಗಿದೆ. ಆದ್ದರಿಂದ ಈ ಜನಾಂಗದ ವಸತಿರಹಿತ ಕುಟುಂಬಗಳ ಪಟ್ಟಿ ಮಾಡಲು ಆಯಾ ಪಿಡಿಒಗಳಿಗೆ ಸೂಚಿಸಿದ್ದು, ಮನೆ ಹಂಚಿಕೆಯಲ್ಲಿ ಇವರಿಗೆ ಆದ್ಯತೆ ನೀಡಲು ತಿಳಿಸಲಾಗಿದೆ. ವಸತಿ ರಹಿತರ ಸಮೀಕ್ಷೆ ಕೂಡ ಮಾಡಲಾಗುತ್ತಿದೆ. ಈ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದು ತಿಳಿಸಿದರು.

2020ರಲ್ಲಿ ಸ್ಥಾಪನೆಗೊಂಡಿರುವ ಈ ನಿಗಮಕ್ಕೆ 2021–22ನೇ ಸಾಲಿನಲ್ಲಿ 12.29 ಕೋಟಿ ರೂ. ಅನುದಾನ ನೀಡಲಾಗಿತ್ತು. ಇದರಲ್ಲಿ 2.02 ಕೋಟಿ ರೂ. ಉಳಿದಿದೆ. ಈ ಸಲ 16 ಕೋಟಿ ರೂ. ನೀಡಿದ್ದು, ಎರಡನ್ನೂ ಸೇರಿಸಿ 18 ಕೋಟಿ ರೂ.ವೊತ್ತದ ಕ್ರಿಯಾಯೋಜನೆ ರೂಪಿಸಿ ಫಲಾನುಭವಿಗಳಿಗೆ ಸೌಲಭ್ಯಗಳನ್ನು ಕಲ್ಪಿಸಲಾಗುವುದು ಎಂದರು.

ಅಲೆಮಾರಿ ಸಮುದಾಯದ ಸಾಹಿತ್ಯ ಮತ್ತು ಸಾಂಸ್ಕೃತಿಕ ಕಲಾ ಉತ್ಸವವನ್ನು ಮುಂದಿನ 2 ತಿಂಗಳಲ್ಲಿ ಬೆಂಗಳೂರಿನ ರವೀಂದ್ರ ಕಲಾಕೇಂದ್ರದಲ್ಲಿ ಆಯೋಜಿಸಲು ನಿರ್ಧರಿಸಲಾಗಿದೆ. ಪ್ರತಿ ಜಿಲ್ಲೆಯಿಂದ 2 ತಂಡಗಳನ್ನು ಕರೆಸಿ, ಅಲೆಮಾರಿಗಳ ಸಂಸ್ಕೃತಿ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಿಕೊಡಲಾಗುವುದು. ಜತೆಗೆ, ಈ ಜನಾಂಗದ ಕಲೆ ಮತ್ತು ಸಾಂಸ್ಕೃತಿಯನ್ನು ದಾಖಲಿಸಲು ಕ್ರಮ ವಹಿಸಲಾಗುವುದು ಎಂದರು.

ನಿಗಮದ ವತಿಯಿಂದ ಜಿಲ್ಲೆಯಲ್ಲಿ ಸ್ವಯಂ ಉದ್ಯೋಗ ನೇರ ಸಾಲ ಯೋಜನೆಯಡಿ 42 ಫಲಾನುಭವಿಗಳಿಗೆ ತಲಾ 50 ಸಾವಿರ ರೂಪಾಯಿಯಂತೆ 21 ಲಕ್ಷ ಸಾಲದೊಂದಿಗೆ ಸಹಾಯಧನ ಕಲ್ಪಿಸಲಾಗಿದೆ. ಗಂಗಾ ಕಲ್ಯಾಣ ಯೋಜನೆಯಡಿ 3 ಜನ ಫಲಾನುಭವಿಗಳಿಗೆ ತಲಾ 1.5 ಲಕ್ಷ ರೂ. ಸಹಾಯಧನ ವಿತರಿಸಲಾಗಿದೆ. ಕಿರು ಸಾಲ ಯೋಜನೆಯಡಿ 22 ಫಲಾನುಭವಿಗಳಿಗೆ 4.40 ಲಕ್ಷ ರೂ. ಸಾಲ ಮತ್ತು ಸಹಾಯಧನ ಬಿಡುಗಡೆ ಮಾಡಲಾಗಿದೆ. ಅರಿವು ಶೈಕ್ಷಣಿಕ ಸಾಲ ಯೋಜನೆಯಡಿ ಒಬ್ಬ ವಿದ್ಯಾರ್ಥಿಯ 4 ವರ್ಷದ ಇಂಜಿನಿಯರಿಂಗ್ ವ್ಯಾಸಂಗಕ್ಕೆ 3.70 ಲಕ್ಷ ರೂ. ಮಂಜೂರು ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ನಿಗಮದ ಸದಸ್ಯ ಟಿ. ಮಂಜುನಾಥ್, ಅಲೆಮಾರಿ ಮತ್ತು ಅರೆ ಅಲೆಮಾರಿ ಒಕ್ಕೂಟದ ಕಾರ್ಯದರ್ಶಿ ಶಿವಾನಂದ ಭಟ್, ಡಿದೇವರಾಜ ಅರಸು ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕಿ ಎಚ್.ಎಂ.ಶೋಭಾ ಇದ್ದರು.



ಶುಕ್ರವಾರ ಹುಟ್ಟುಹಬ್ಬ ಆಚರಿಸಿಕೊಂಡ ದೇವರಾಜ ಮಾರುಕಟ್ಟೆ ಯುವ ಬ್ರಿಗೇಡ್ ಅಧ್ಯಕ್ಷ ಬಿ. ಸಂದೀಪ್ ಅವರನ್ನು ಮುಖಂಡರುಗಳಾದ ಸಂದೇಶ್, ಜಗ್ಗಣ್ಣ, ರಾಮರಾಜ್, ಸ್ವಾಮಿಗೌಡ ಮತ್ತಿತರರು ಅಭಿನಂದಿಸಿದರು.

ಮೈಸೂರಲ್ಲಿ ಶಾಂಕರ ಸ್ಮೃತಿ ಕಾರ್ಯಕ್ರಮ

ಮೈಸೂರು, ಜೂ.24– ಮೈಸೂರು ಜಿಲ್ಲೆ, ತಿ.ನರಸೀಪುರ ತಾಲೂಕು ತಲಕಾಡಿನ ಶುಕಶಂಕರ ಪೀಠದಲ್ಲಿರುವ ಭಾಗವತೀಯ ಜಗದ್ಗುರು ಶ್ರೀಬಾಲಕೃಷ್ಣಾನಂದ ಮಹಾಸಂಸ್ಥಾನಂ ವತಿಯಿಂದ ಜು.2ರಂದು ಮೈಸೂರಿನ ಜಯನಗರದಲ್ಲಿರುವ ಶ್ರೀರಾಮಮಂದಿರದಲ್ಲಿ ಶಾಂಕರ ಸ್ಮೃತಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. ತಲಕಾಡಿನ ಶ್ರೀಬಾಲಕೃಷ್ಣಾನಂದ ಮಹಾಸಂಸ್ಥಾನಂನ ಶುಕಪೀಠದ ಪೀಠಾಧಿಪತಿಗಳಾದ ಶ್ರೀ ಶ್ರೀ ಶ್ರೀ ಗೋವಿಂದಾನಂದ ಸರಸ್ವತಿ ಮಹಾಸ್ವಾಮಿಗಳು ದಿವ್ಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುವರು. ಶ್ರೀ ಅರ್ಜುನ ಅವಧೂತರು ಮತ್ತು ಶ್ರೀರಂಗಪಟ್ಟಣದ ಶಾಶ್ವತಿ ಧಾರ್ಮಿಕ ಕ್ರಿಯಾ ಸಮಿತಿಯ ವೇದಬ್ರಹ್ಮ ಶ್ರೀಭಾನುಪ್ರಕಾಶ್ ಶರ್ಮಾ ಅವರು ಉಪಸ್ಥಿತರಿರುವರು. ಅಂದು ಸಂಜೆ 4 ಗಂಟೆಗೆ ಪೂರ್ಣಕುಂಭ ಸ್ವಾಗತದೊಂದಿಗೆ ಆರಂಭವಾಗುವ ಕಾರ್ಯಕ್ರಮದಲ್ಲಿ ಧೂಳಿ ಪಾದಪೂಜೆ, ಸಭಾ ಕಾರ್ಯಕ್ರಮ, ಸಂಸ್ಥಾನ ಪೂಜೆ, ಮಹಾ ಮಂಗಳಾರತಿ ನಡೆಯಲಿದ್ದು, ಸಂಕಲ್ಪ ಸೇವೆ, ಭಿಕ್ಷಾವಂದನೆ, ವಸ್ತ್ರ ಸಮರ್ಪಣೆ ಸರ್ವ ಸೇವೆ ಸೇರಿದಂತೆ ವಿವಿಧ ಸೇವೆಗಳು ಜರುಗಲಿವೆ. ಕಾರ್ಯಕ್ರಮದಲ್ಲಿ ವಿಶೇಷವಾಗಿ ಶ್ರೀಗುವಣಾಷ್ಟಕ, ಗಣೇಶ ಪಂಚಕ, ಕನಕದಾಸರ ಸ್ತೋತ್ರ ಸಾಧನ ಪಂಚಕ ಮತ್ತು ತೋಟಕಾಷ್ಟಕ ಸ್ತೋತ್ರಗಳ ಪಾರಾಯಣ ನಡೆಯಲಿದ್ದು, ಮಾಹಿತಿಗಾಗಿ ಮೊ: 6362328434, 9480166072, 9449307165 ಮೂಲಕ ಸಂಪರ್ಕಿಸಲು ಮಹಾಸಂಸ್ಥಾನಂನ ಪ್ರಕಟಣೆ ತಿಳಿಸಿದೆ.

ಕಣ್ಣು ಕಾಣದ, ಕಿವಿ ಕೇಳದ ದಪ್ಪ ಚರ್ಮದ ಸರ್ಕಾರ

ರಾಜ್ಯ ಸರ್ಕಾರದ ವಿರುದ್ಧ ಹರಿಹಾಯ್ದ ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ

ಪಠ್ಯ ಪುಸ್ತಕದಲ್ಲಿ ಕೋಮುವಾದದ ಅಫೀಮು ಸೇರಿಸುವ ಉದ್ದೇಶ; ಆರೋಪ

ಮೈಸೂರು, ಜೂ.24(ಆರ್‌ಕೆಬಿ)– ಪರಿಷ್ಕೃತ ಪಠ್ಯಪುಸ್ತಕ ವಾಪಸ್ ಪಡೆಯುವುದಿಲ್ಲ ಎಂಬ ಸರ್ಕಾರದ ನಿಲುವನ್ನು ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಖಂಡಿಸಿದ್ದಾರೆ. ಇದು ಕಣ್ಣು ಕಾಣದ, ಕಿವಿ ಕೇಳಿಸದ ದಪ್ಪ ಚರ್ಮದ ಸರ್ಕಾರ ಎಂದು ರಾಜ್ಯ ಸರ್ಕಾರದ ವಿರುದ್ಧ ಅವರು ಹರಿಹಾಯ್ದರು. ಮೈಸೂರಿನ ಜಲದರ್ಶಿನಿ ಅತಿಥಿಗೃಹದ ಅವರಣದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಪಠ್ಯ ಪುಸ್ತಕಗಳಲ್ಲಿ ಕೋಮುವಾದದ ಅಫೀಮನ್ನು ಸೇರಿಸಿ ಮಕ್ಕಳಲ್ಲಿ ಕೋಮವಾದ ಬೆಳೆಸುವ ದುರುದ್ದೇಶ ಇದರಲ್ಲಿದೆ. ಹೀಗಾಗಿಯೇ ಈ ಸರ್ಕಾರ ಯಾರ ಮಾತನ್ನು ಕೇಳುತ್ತಿಲ್ಲ. ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್, ಜಗಜ್ಯೋತಿ ಬಸವಣ್ಣ, ರಾಷ್ಟ್ರಕವಿ ಕುವೆಂಪು, ಕನಕದಾಸರು ಸೇರಿದಂತೆ ಯಾರ ಬಗ್ಗೆಯೂ ಕಿಂಚಿತ್ತೂ ಗೌರವ ಇಲ್ಲ ಎಂಬುದು ಪಠ್ಯಪುಸ್ತಕ ಪರಿಷ್ಕರಣೆ ಮೂಲಕ ಮತ್ತೆ ಸಾಬೀತಾಗಿದೆ ಎಂದು ಸರ್ಕಾರದ ಧೋರಣೆಯನ್ನು ಖಂಡಿಸಿದರು.

ಜಾತಿ ನೋಡಿ ಸ್ಥಾನ ಕೊಡುವುದು ಸಂವಿಧಾನಕ್ಕೆ ಮಾಡುವ ಅಪಮಾನ: ರಾಷ್ಟ್ರಪತಿ ಹುದ್ದೆಗೆ ದ್ರೌಪದಿ ಮುರ್ಮು ಬಿಜೆಪಿ ಅಭ್ಯರ್ಥಿ ಆಯ್ಕೆ ವಿಚಾರ ಕುರಿತು ಪ್ರತಿಕ್ರಿಯಿಸಿದ ಡಾ.ಹೆಚ್.ಸಿ.ಮಹದೇವಪ್ಪ ರಾಷ್ಟ್ರಪತಿ, ಪ್ರಧಾನಿ, ಮುಖ್ಯಮಂತ್ರಿ ಹುದ್ದೆಗಳನ್ನು ಜಾತಿಯಿಂದ ನೋಡುವುದು ದೊಡ್ಡ ತಪ್ಪು. ದ್ರೌಪದಿ ಮುರ್ಮು ಬಿಜೆಪಿಯಲ್ಲಿ ಹಲವು ಘಟಕಗಳಲ್ಲಿ ಕೆಲಸ ಮಾಡಿದವರು. ಅವರಿಗೆ ಜಾತಿ ನೋಡಿ ಸ್ಥಾನ ಕೊಡುವುದು ಸಂವಿಧಾನಕ್ಕೆ ಅವರು ಮಾಡುವ ಅಪಮಾನ. ಇದು ಸಾಮಾಜಿಕ ನ್ಯಾಯದ ಸಂಕೇತವಲ್ಲ. ಅವರ ಕಾರ್ಯ ವೈಖರಿ ನೋಡಿ ಸ್ಥಾನ ಕೊಡಬೇಕೇ ಹೊರತು, ಅವರ ಜಾತಿ ನಮೂದಿಸುತ್ತಾ ಸಂವಿದಾನಕ್ಕೆ ಅಗೌರವ ತೋರುತ್ತಿದೆ ಎಂದು ಬಿಜೆಪಿ ಧೋರಣೆಯನ್ನು ಖಂಡಿಸಿದರು.

ಅಭಿವೃದ್ಧಿ ಮಾಡಿದ್ದರೆ ತಾನೇ ಚರ್ಚೆ ಮಾಡುವುದು

ಪ್ರತಾಪ್‌ಸಿಂಹರದ್ದು ಬರೀ ಬೊಗಳೆ




ಮೈಸೂರು, ಜೂ.24– ಅಭಿವೃದ್ಧಿ ಮಾಡಿದ್ದರೆ ತಾನೇ ಚರ್ಚೆ ಮಾಡುವುದು. ಏನೂ ಕೆಲಸ ಮಾಡದೇ ಬರಿ ಬೊಗಳೆ ಬಿಟ್ಟುಕೊಂಡು ಓಡಾಡುತ್ತಿದ್ದಾರೆ. ಅಂಥವರ ಜೊತೆ ಎಂತಹ ಚರ್ಚೆ ಮಾಡುವುದು ಎಂದು ಡಾ.ಹೆಚ್.ಸಿ.ಮಹದೇವಪ್ಪ ಸಂಸದ ಪ್ರತಾಪ್‌ಸಿಂಹ ವಿರುದ್ಧ ಕಿಡಿಕಾರಿದರು. ಮೈಸೂರಿನ ಅಭಿವೃದ್ಧಿ ಬಗ್ಗೆ ಚರ್ಚೆಗೆ ಸಿದ್ದರಾಮಯ್ಯ ಹಾಗೂ ಮಹಾದೇವಪ್ಪ ಬರಲಿ ಎಂಬ ಪ್ರತಾಪ್ ಸಿಂಹ ಹೇಳಿಕೆ ಕುರಿತು ಪ್ರತಿಕ್ರಿಯಿಸಿದ ಅವರು, ನಾವು ಮಾಡಿರುವ ಅಭಿವೃದ್ಧಿಗಳೇ ಕಣ್ಣಿಗೆ ಕಾಣುತ್ತಿದೆ. ಅವರು ಏನಾದರೂ ಅಭಿವೃದ್ಧಿ ಮಾಡಿದ್ದರೆ ತಾನೇ ಚರ್ಚೆ ಮಾಡೋದು. ಸುಮ್ಮನೆ ಕೆಲಸಕ್ಕೆ ಬಾರದ ಮಾತುಗಳನ್ನು ಆಡುತ್ತಾ ಕುಳಿತಿದ್ದಾರೆ. ನಾವು ಜಿಲ್ಲಾಸ್ಪತ್ರೆ ಕಟ್ಟದಿದ್ದರೆ ಕೋವಿಡ್ ಸಂದರ್ಭದಲ್ಲಿ ರೋಗಿಗಳನ್ನು ಎಲ್ಲಿ ಮಲಗಿಸುತ್ತಿದ್ದರು. ಇಂತಹ ನೂರು ಕೆಲಸ ಮಾಡಿದ್ದೇವೆ ಎಂದು ಪ್ರತಾಪ್‌ಸಿಂಹಗೆ ತಿರುಗೇಟು ನೀಡಿದರು.

ಪ್ರತ್ಯೇಕ ರಾಜ್ಯ ಏಕೆ ಬೇಕು? ಕತ್ತಿ ವಿರುದ್ಧ ಆಕ್ರೋಶ: ಪ್ರತ್ಯೇಕ ರಾಜ್ಯದ ಹೇಳಿಕೆ ನೀಡಿರುವ ಸಚಿವ ಉಮೇಶ್ ಕತ್ತಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ಮಾಜಿ ಸಚಿವ ಮಹದೇವಪ್ಪ ಉಮೇಶ್ ಕತ್ತಿಗೇಕೆ ಪ್ರತ್ಯೇಕ ರಾಜ್ಯ ಬೇಕು? ಮಾಡಲು ಕೆಲಸವಿಲ್ಲದೆ ಇಂತಹ ಹೇಳಿಕೆಗಳನ್ನು ನೀಡುತ್ತಾರೆ. ಅರಣ್ಯ ಇಲಾಖೆಯಂತಹ ಬಹುಮುಖ್ಯ ಖಾತೆ ಇದ್ದರೂ ಕೆಲಸ ಇಲ್ಲದವರಂತೆ ಇದ್ದಾರೆ. ಮುಖ್ಯಮಂತ್ರಿ ಆಗುವ ಆಸೆ ಇದ್ದರೆ ಇಲ್ಲಿಯೇ ಆಗಲಿ. ಅದಕ್ಕೇಕೆ ಪ್ರತ್ಯೇಕ ರಾಜ್ಯ ಬೇಕು ಎಂದು ಹರಿಹಾಯ್ದರು.

ಉತ್ತರ ಕರ್ನಾಟಕ ಅಭಿವೃದ್ಧಿ ಆಗಲಿಲ್ಲ ಅಂದ್ರೆ ಅದಕ್ಕೆ ಹೊಣೆ ಯಾರು? ಅಂದಿನಿಂದಲೂ ಅಧಿಕಾರದಲ್ಲಿರುವ ನೀವೇ ಏನೂ ಆಗಿಲ್ಲ ಎಂದರೆ ಹೇಗೆ? ಏನೇನು ಅಭಿವೃದ್ಧಿ ಆಗಿದೆ, ಯಾವುದು ಆಗಿಲ್ಲ ಎಂಬ ಪಟ್ಟಿ ಅವರ ಬಳಿ ಇದೆಯಲ್ಲ ನೋಡಿಕೊಳ್ಳಬಾರದೇಕೆ ಎಂದು ಪ್ರಶ್ನಿಸಿದರು. ಲಕ್ಷಾಂತರ ಜನರ ಹೋರಾಟದ ಫಲವಾಗಿ ಸೃಷ್ಟಿಯಾಗಿರುವ ಅಖಂಡ ಕರ್ನಾಟಕವನ್ನು ಒಡೆಯುವ ಹೇಳಿಕೆಯನ್ನು ಪದೇಪದೆ ನೀಡುವುದು ಬೇಡ. ಚುನಾವಣೆ ಹತ್ತಿರ ಬಂದಾಗ ಇಂತಹ ಬೇಜವಾಬ್ದಾರಿ ಹೇಳಿಕೆಗಳನ್ನು ನೀಡುತ್ತಿದ್ದಾರೆ ಎಂದು ಉಮೇಶ್ ಕತ್ತಿ ವಿರುದ್ಧ ಗುಡುಗಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

25.06.2022 ಶನಿವಾರ, ಮಳೆ ನಕ್ಷತ್ರ : ಆರ್ದ್ರೆ 22.06.2022 ರಿಂದ 05.07.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಕೃಷ್ಣ ಪಕ್ಷ
ತಿಥಿ: ದ್ವಾದಶಿ, ನಕ್ಷತ್ರ : ಭರಣಿ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಭವದ ಬಯಲಿಗರು–ವಚನಕಾರರ ಪರಿಚಯಾತ್ಮಕ ಕಾರ್ಯಕ್ರಮ, ಲೇಖನ ಮತ್ತು ಪ್ರಸ್ತುತಿ– ಮೈಸೂರು ಉಮೇಶ್, 6.40 ಹಾಡು ಹೇಳಿದ ಕಥೆ, ಪ್ರಸ್ತುತಿ–ಡಾ. ಮೈಸೂರು ಉಮೇಶ್, 9.00 ರಾಗಲಹರಿ–ಕರ್ನಾಟಕ ಶಾಸ್ತ್ರೀಯ ಸಂಗೀತದ ರಾಗಗಳ ಚಿತ್ತಾರ, 9.30 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ "ಸ್ವಾತಂತ್ರ್ಯ ಚಳುವಳಿಯ ಪಯಣ–ಆಕಾಶವಾಣಿಯೊಂದಿಗೆ, 10.00 ಕೋವಿಲಡಿ ಆರ್. ಕಲಾ – ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.45 ಜನಪದಗೀತೆ–ನಿಂಗಮ್ಮ ಮತ್ತು ತಂಡ, 1.20 ಭಾವಗೀತೆ–ಗೀತಾ ಸತ್ಯಮೂರ್ತಿ, 3.35 ಮಕ್ಕಳ ಮಂಟಪ–ಮುಖಾಮುಖಿ–ನಂದಗೋಕುಲ, ಪ್ರಸ್ತುತಿ– ಕೆ.ಬಿ.ಮೀನಾ, 4.30 ನೆನಪಿನಂಗಳ –ಹಿರಿಯ ಕಾನೂನು ತಜ್ಞರಾದ ಡಾ.ಸಿ.ಕೆ.ಎನ್.ರಾಜಾ ಅವರೊಂದಿಗೆ ನಿ.ಗಿರಿಗೌಡ ಹಾಗೂ ಶಿವಾನಂದ ಭಾರತಿ ನಡೆಸಿದ್ದ ಸಂವಾದ, ಪ್ರಸ್ತುತಿ– ಎಸ್. ಲಕ್ಷ್ಮೀನಾರಾಯಣ, 6.50 ಕೃಷಿರಂಗ–ಕಿಸಾನ್‌ವಾಣಿ, ತೋರಣ ಹೂರಣ– ಸಾಪ್ತಾಹಿಕ ಸರಣಿ ಕಾರ್ಯಕ್ರಮ, 9.00 ಲಾಕ್‌ಡೌನ್–ಕಥಾನಾಟಕ. ಲಾಕ್‌ಡೌನ್ ಕಥೆಗಳನ್ನಾಧರಿಸಿದ ಸರಣಿ– "ಹಸಿವು", ನಿರ್ಮಾಣ– ಪ್ರಭುಸ್ವಾಮಿ ಮಳಿಮಠ್, 9.30 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ಅನ್ವರ್ ಹುಸೈನ್–ಸಂತೂರ್ ವಾದನ, 11.00 ಸವಿನೆನಪು

■ **ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು :** ಅಂತಾರಾಷ್ಟ್ರೀಯ ಯೋಗ ದಿನ ಆಚರಣೆ, ಮುಖ್ಯ ಅತಿಥಿಗಳು : ಮೈಸೂರು ಡಿಸ್ಟ್ರಿಕ್ಟ್ ಯೋಗ ಸ್ಪೋರ್ಟ್ಸ್ ಫೌಂಡೇಷನ್ ಅಧ್ಯಕ್ಷ ಗಣೇಶ್ ಕುಮಾರ್, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಡಾ. ಡಿ. ರವಿ, ಸ್ಥಳ : ಕಾಲೇಜು ಮೈದಾನ, ಬೆಳಗ್ಗೆ 7ಕ್ಕೆ.

■ **ವಿದ್ಯಾವರ್ಧಕ ಸಂಘ, ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು :** ಬೆಳಗ್ಗೆ 9.30ಕ್ಕೆ ಕಲಾ ಸಂಭ್ರಮ–2022, ರಾಜ್ಯ ಮಟ್ಟದ ಅಂತರ ಕಾಲೇಜುಗಳ ಕಲಾ ಉತ್ಸವ, ಉದ್ಘಾಟನೆ : ಉಪ ಪೊಲೀಸ್ ಆಯುಕ್ತರಾದ ಎಂ.ಎಸ್. ಗೀತಾ, ಮುಖ್ಯ ಅತಿಥಿಗಳು : ಚಲನಚಿತ್ರ ನಟ ಚಂದನ್ ಆಚಾರ್, ಸಂಘದ ಕಾರ್ಯದರ್ಶಿ ಪಿ. ವಿಶ್ವನಾಥ್, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಬೆಳಗ್ಗೆ 10ಕ್ಕೆ ರಾಜ್ಯ ಮಟ್ಟದ ಅಂತರ ಕಾಲೇಜು ಚರ್ಚಾ ಸ್ಪರ್ಧೆ, ಅಧ್ಯಕ್ಷತೆ : ಉಪನ್ಯಾಸಕ ಬಿ. ಗೋವಿಂದೇಗೌಡ, ಸ್ಥಳ: ಪಿ.ಎಂ. ಚಿಕ್ಕಬೋರಯ್ಯ ಸಭಾಂಗಣ, ಕಾಲೇಜು ಆವರಣ.

■ **ಎಂ.ಎ.ಎಸ್.ವಿ.ಎಸ್. ಗುರುಕುಲ ಪಿಯು ಕಾಲೇಜು :** ವಿದ್ಯಾರ್ಥಿನಿಲಯದ ಪ್ರಥಮ ಪಿಯುಸಿ ವಿದ್ಯಾರ್ಥಿಗಳ ಸ್ವಾಗತ ಹಾಗೂ ಗಣ್ಯರಿಗೆ ಸನ್ಮಾನ ಸಮಾರಂಭ, ಅಧ್ಯಕ್ಷತೆ : ಮಲ್ಲಾಡಿಹಳ್ಳಿ ಅನಾಥ ಸೇವಾಶ್ರಮ ವಿಶ್ವಸ್ಥ ಸಮಿತಿ ಕಾರ್ಯದರ್ಶಿ ಪ್ರೊ. ಕೆ.ಇ. ರಾಧಾಕೃಷ್ಣ, ಮುಖ್ಯ ಅತಿಥಿಗಳು : ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಹೇಶ್ ಜೋಷಿ, ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಡಿ.ಕೆ. ಶ್ರೀನಿವಾಸಮೂರ್ತಿ, ಸ್ಥಳ: ಕಾಲೇಜು ಆವರಣ, ಕುವೆಂಪುನಗರ, ಬೆಳಗ್ಗೆ 10.30ಕ್ಕೆ.

■ **ಮೈರಾ ಸ್ಕೂಲ್ ಆಫ್ ಬ್ಯುಸಿನೆಸ್ :** ಘಟಿಕೋತ್ಸವ ಸಮಾರಂಭ, ಪ್ರಾಸ್ತಾವಿಕ ನುಡಿ : ಟಾಟಾ ಅಂಡ್ ಸನ್ಸ್ ನಿರ್ದೇಶಕ ಭಾಸ್ಕರ್ ಭಟ್, ಮುಖ್ಯ ಅತಿಥಿಗಳು : ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಸ್ಥಳ: ಅಥೆನಾ ಸಭಾಂಗಣ, ಮೈರಾ ಸ್ಕೂಲ್ ಆಫ್ ಬ್ಯುಸಿನೆಸ್, ಬೆಳಗ್ಗೆ 11ಕ್ಕೆ.

■ **ಕರ್ನಾಟಕ ರಾಜ್ಯ ಕಾಯಕ ಸಮಾಜಗಳ ಒಕ್ಕೂಟ :** ಚಿಂತನ–ಮಂಥನ ಸಭೆ, ಉದ್ಘಾಟನೆ : ವಿಧಾನ ಪರಿಷತ್ ಸದಸ್ಯ ಡಿ. ತಿಮ್ಮಯ್ಯ, ಪ್ರಧಾನ ಭಾಷಣ : ಪ್ರೊ. ಮಹೇಶ್‌ಚಂದ್ರ ಗುರು, ವಿಷಯ ಮಂಡನೆ : ಸಾಹಿತಿ ದೀಪಕ್, ಚರ್ಚೆಗೆ ಚಾಲನೆ : ಭಗವಾನ್ ಮತ್ತು ಪಿ.ವಿ. ನಂಜರಾಜೇ ಅರಸ್, ಪ್ರಾಸ್ತಾವಿಕ ನುಡಿ : ಕೆ.ಸಿ. ಪುಟ್ಟಸಿದ್ದಶೆಟ್ಟಿ, ಮುಖ್ಯ ಅತಿಥಿಗಳು : ಶಾಂತರಾಜ್, ಸ್ಥಳ: ಜಲದರ್ಶಿನಿ, ಬೆಳಗ್ಗೆ 11ಕ್ಕೆ.

■ **ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ :** ಬೇಸಿಗೆ ಮೇಳ–2022, ದಸರಾ ವಸ್ತುಪ್ರದರ್ಶನ ಮೈದಾನ, ಮಧ್ಯಾಹ್ನ 3.30ರಿಂದ ರಾತ್ರಿ 9 ಗಂಟೆವರೆಗೆ.

■ **ಶ್ರೀ ಕುದೇರು ಮಠ, ಶ್ರೀ ತೋಂಟದಾರ್ಯ ವಿದ್ಯಾಸಂಸ್ಥೆ :** ಶ್ರೀ ಗುರುಮಲ್ಲೇಶ್ವರ ಮಹಾಪ್ರಭುಗಳವರ 123ನೇ ಪ್ರಮಥರ ಗಣಾರಾಧನೆ ಮತ್ತು ಲಿಂಗೈಕ್ಯ ಶ್ರೀ ಗುರುಲಿಂಗಸ್ವಾಮಿಗಳವರ 31ನೇ ವಾರ್ಷಿಕ ಗಣಾರಾಧನಾ ಮಹೋತ್ಸವ, ಶ್ರೀ ಮನ್ನಿರಂಜನ ಮಹಾತ್ಮ ಶ್ರೀ ಗುರುಮಲ್ಲೇಶ್ವರರ ಮೂರ್ತಿಗೆ ಹಾಗೂ ಶ್ರೀ ಗುರುಲಿಂಗಸ್ವಾಮಿಗಳವರ ಗದ್ದುಗೆಗೆ ಮಹಾರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ, ಮಹಾಮಂಗಳಾರತಿ, ಸ್ಥಳ: ಶ್ರೀ ಕುದೇರು ಮಠ, ಸಂಜೆ 4ಕ್ಕೆ

■ **ಸಹಕಾರ ಭಾರತಿ ಕರ್ನಾಟಕ, ಮೈಸೂರು ಜಿಲ್ಲೆ :** ರಾಜ್ಯ ಮಹಿಳಾ ಅಭ್ಯಾಸ ವರ್ಗ, ಉದ್ಘಾಟನೆ : ಮುಜರಾಯಿ ಸಚಿವೆ ಶಶಿಕಲಾ ಜೊಲ್ಲೆ, ಮುಖ್ಯ ಅತಿಥಿಗಳು : ಮುಡಾ ಅಧ್ಯಕ್ಷ ಹೆಚ್.ವಿ. ರಾಜೀವ್, ಮಾಜಿ ಸಚಿವೆ ಲೀಲಾದೇವಿ ಆರ್. ಪ್ರಸಾದ್, ಅಧ್ಯಕ್ಷತೆ : ರಾಜ್ಯಾಧ್ಯಕ್ಷ ರಾಜಶೇಖರ್ ಶೀಲವಂತ್, ಸ್ಥಳ: ಜ್ಞಾನ ಸರೋವರ, ಹುಣಸೂರು ರಸ್ತೆ, ಲಿಂಗದೇವರಕೊಪ್ಪಲು, ಸಂಜೆ 4.30ಕ್ಕೆ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ವಿದ್ವಾನ್ ಡಾ. ಬಿ.ನಾ. ವಿಜಯೇಂದ್ರಚಾರ್ಯರಿಂದ 'ಶ್ರೀ ಮಹಾಭಾರತದ ಉದ್ಯೋಗ ಪರ್ವ' ಕುರಿತು ವಿಶೇಷ ಪ್ರವಚನ, ಸ್ಥಳ: ಶ್ರೀ ರಾಯರ ಮಠ, ಜಯಲಕ್ಷ್ಮೀಪುರಂ, ಸಂಜೆ 5 ರಿಂದ.

■ **ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕರಾರಸಾ ಸಂಸ್ಥೆ, ಕನ್ನಡ ಕ್ರಿಯಾ ಸಮಿತಿ, ಡಾ. ವಿಷ್ಣು ಸೇನಾ ಸಮಿತಿ:** ಖ್ಯಾತ ಸಾಹಿತಿಗಳ ಹತ್ತು ಪುಸ್ತಕಗಳ ಮರು ಬಿಡುಗಡೆ ಸಮಾರಂಭ, ಉದ್ಘಾಟನೆ : ಕನ್ನಡ ಸಂಸ್ಕೃತಿ ಚಿಂತಕ ಪ್ರೊ. ಕೃಷ್ಣೇಗೌಡ, ಅಧ್ಯಕ್ಷತೆ : ಹಿರಿಯ ಪತ್ರಕರ್ತ ವಿಶ್ವೇಶ್ವರ ಭಟ್, ಮುಖ್ಯ ಅತಿಥಿಗಳು : ಚಲನಚಿತ್ರ ನಟ ಮಂಡ್ಯ ರಮೇಶ್, ಲೇಖಕ ಗಣೇಶ್ ಕಾಸರಗೋಡು, ಲೇಖಕರಾದ ರಂಗಸ್ವಾಮಿ ಮೂಕನಹಳ್ಳಿ, ಕುಸುಮ ಆಯರಹಳ್ಳಿ, ಸ್ಥಳ: ನಟನ ರಂಗಶಾಲೆ, ಸಂಜೆ 5ಕ್ಕೆ.

■ **ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್ :** ವಿಶೇಷ ಸಂಗೀತ ಕಾರ್ಯಕ್ರಮ, ಖ್ಯಾತ ಮಲೆಯಾಳಂ ಚಲನಚಿತ್ರ ಹಿನ್ನೆಲೆ ಗಾಯಕ ಎಂ.ಕೆ. ಶಂಕರನ್ ನಂಬೂದಿರಿ ಅವರಿಂದ ಗಾಯನ, ಮೈಸೂರು ಎಂ. ಸುಮಂತ್– ವಯೋಲಿನ್, ಪ್ರೊ. ಪೂವಲೂರು ಶ್ರೀನಿವಾಸನ್–ಮೃದಂಗ, ಪ್ರೊ.ಜಿ.ಎಸ್. ರಾಮಾನುಜಂ – ಘಟಂ, ಸ್ಥಳ: ನವಜ್ಯೋತಿ ಸಭಾಂಗಣ, ಜೆಎಸ್‌ಎಸ್ ಮಹಿಳಾ ಕಾಲೇಜು, ಸರಸ್ವತಿಪುರಂ, ಸಂಜೆ 6ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ವಿಪ್ರಾನಂದ ಅವರಿಂದ ಉಪನಿಷತ್ತುಗಳ ಸಾರ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

ಚಿಕ್ಕ ಅಂಕನಹಳ್ಳಿಯಲ್ಲಿಂದು

■ **ಭೀಮಾ ಜ್ಯುವೆಲ್ಸ್, ಕಾವೇರಿ ಆಸ್ಪತ್ರೆ :** ಉಚಿತ ಆರೋಗ್ಯ ತಪಾಸಣಾ ಶಿಬಿರ, ಸ್ಥಳ: ಅಂಗನವಾಡಿ ಕೇಂದ್ರ, ಚಿಕ್ಕ ಅಂಕನಹಳ್ಳಿ, ಬೆಳಗ್ಗೆ 10 ರಿಂದ.

ರಾಜವಂಶಸ್ಥ ಯದುವೀರ್‌ರಿಂದ ಮೈಸೂರು ಸ್ಪೋರ್ಟ್ಸ್ ಕ್ಲಬ್ ಅತಿಥಿಗೃಹ ಉದ್ಘಾಟನೆ



ಮೈಸೂರು, ಜೂ.24(ಎಂಕೆ)– ಮೈಸೂರಿನ ಎಂಜಿ ರಸ್ತೆಯಲ್ಲಿರುವ ಶ್ರೀ ಕಂಠೀರವ ನರಸಿಂಹರಾಜ ಸ್ಪೋರ್ಟ್ಸ್ ಕ್ಲಬ್‌ನ(ಮೈಸೂರು ಸ್ಪೋರ್ಟ್ಸ್ ಕ್ಲಬ್) 9 ಕೊಠಡಿಗಳುಳ್ಳ ನೂತನ ಅತಿಥಿಗೃಹ ಕಟ್ಟಡವನ್ನು ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಶುಕ್ರವಾರ ಉದ್ಘಾಟಿಸಿದರು. ಬಳಿಕ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಮ್ಮ ಪೂರ್ವಿಕರಾದ ಶ್ರೀ ಕಂಠೀರವ ನರಸಿಂಹರಾಜ ಒಡೆಯರ್ ಅವರು ಹಲವು ವರ್ಷಗಳ ಕಾಲ ಈ ಕ್ಲಬ್‌ನ ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. ಹಾಗೆಯೇ ಬಾಲ್ಯದಲ್ಲಿ ನಾನು ಆಗಾಗ ನಮ್ಮ ಕುಟುಂಬದವರ ಜತೆ ಕ್ಲಬ್‌ಗೆ ಬಂದು ಸಮಯ ಕಳೆಯುತ್ತಿದ್ದೆ ಎಂದು ಬಾಲ್ಯದ ನೆನಪುಗಳನ್ನು ಹಂಚಿಕೊಂಡರು.

ಮೈಸೂರಿನ ಪರಂಪರೆಯನ್ನು ಕಾಪಾಡಿಕೊಂಡು ಮುನ್ನಡೆಸುವುದು ನಮ್ಮ ಕರ್ತವ್ಯವಾಗಿದೆ. ಕೆಎನ್ಎಸ್ ಕ್ಲಬ್‌ನ ನೂತನ ಅತಿಥಿ ಗೃಹ ಕಟ್ಟಡ ಉದ್ಘಾಟನೆಗೆ ಆಹ್ವಾನಿಸಿದ್ದಕ್ಕೆ ಸಂತೋಷವಾಗಿದೆಂದು ಹೇಳಿ, ಕ್ಲಬ್‌ನ ಎಲ್ಲ ಸದಸ್ಯರಿಗೆ ಧನ್ಯವಾದ ತಿಳಿಸಿದರು.

ಇದೇ ವೇಳೆ ಕ್ಲಬ್‌ನ ಉದ್ಯೋಗಿಗಳು, ನೂತನ ಕಟ್ಟಡ ನಿರ್ಮಾಣಕ್ಕೆ ಶ್ರಮಿಸಿದ ಸದಸ್ಯರನ್ನು ಅಭಿನಂದಿಸಲಾಯಿತು. ಶ್ರೀ ಕಂಠೀರವ ನರಸಿಂಹರಾಜ ಸ್ಪೋರ್ಟ್ಸ್ ಕ್ಲಬ್‌ನ ಅಧ್ಯಕ್ಷ ಸಂಜಯ್ ಕೆ.ಶೆಟ್ಟಿ, ಗೌರವ ಕಾರ್ಯದರ್ಶಿ ಟಿ.ಹೆಚ್.ಸಂಜಯ್ ಅರಸ್, ಉಪಾಧ್ಯಕ್ಷ ಆರ್.ಅಜಯ್ ಕುಮಾರ್ ಸಿಂಗ್, ಖಜಾಂಚಿ ಸುನೀಲ್ ಎಲ್.ಬಾಳಿಗ, ಸದಸ್ಯರಾದ ಎ.ಎಸ್.ಬಾಲು, ಎಸ್.ಅದಿತ್ಯ, ಅಶ್ವಿನಿ ಆರ್.ಪಾಳೇಗಾರ್, ಎಂ.ರಾಜೇಂದ್ರ ಕುಮಾರ್, ವಿ.ಸುನೀಲ್, ವೈ.ಬಿ.ಗಣೇಶ್, ಕೆ.ಪಿ.ಚೆನ್ನಪ್ಪ ಮತ್ತಿತರರು ಉಪಸ್ಥಿತರಿದ್ದರು.

ಮಂಡ್ಯದ 5 ರೂ. ವೈದ್ಯ ಡಾ. ಶಂಕರೇಗೌಡ ಗುಣಮುಖ

ಆಸ್ಪತ್ರೆಯಿಂದ ಬಿಡುಗಡೆ

ಬೆಂಗಳೂರು, ಜೂ.24(ಕೆಎಂಶಿ)– ಹೃದಯಾಘಾತಕ್ಕೆ ಒಳಗಾಗಿ ಫೋರ್ಟಿಸ್ ಆಸ್ಪತ್ರೆಗೆ ದಾಖಲಾಗಿದ್ದ ಮಂಡ್ಯದ 5 ರೂಪಾಯಿ ವೈದ್ಯರೆಂದು ಖ್ಯಾತಿ ಹೊಂದಿರುವ ಡಾ. ಶಂಕರೇಗೌಡ ಅವರನ್ನು ಇಂದು ಫೋರ್ಟಿಸ್ ಆಸ್ಪತ್ರೆಯಿಂದ ಡಿಸ್‌ಚಾರ್ಜ್ ಮಾಡಲಾಯಿತು.



ಈ ಕುರಿತು ಶುಕ್ರವಾರ ಫೋರ್ಟಿಸ್ ಆಸ್ಪತ್ರೆಯಲ್ಲಿ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಡಾ. ಶಂಕರೇಗೌಡ, ಒಂದು ತಿಂಗಳ ಹಿಂದೆ ಹೃದಯದಲ್ಲಿ ರಕ್ತದ ನಾಳಗಳು ಬ್ಲಾಕ್ ಆಗಿದ್ದ ಕಾರಣ ಹೃದಯಾಘಾತ ಸಂಭವಿಸಿತ್ತು. ಕೂಡಲೇ ಮೈಸೂರಿನಲ್ಲಿರುವ ಆಸ್ಪತ್ರೆಗೆ ದಾಖಲಾದೆ.

ಆದರೆ ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ಫೋರ್ಟಿಸ್ ಆಸ್ಪತ್ರೆಗೆ ವರ್ಗಾವಣೆ ಮಾಡಿದರು. ಇಲ್ಲಿನ ಚಿಕಿತ್ಸಾ ವಿಧಾನದಿಂದ ನನ್ನ ಆರೋಗ್ಯದಲ್ಲಿ ಚೇತರಿಕೆ ಕಂಡು ಬಂದಿದೆ. ಡಾ. ವಿವೇಕ್ ಜವಳಿ ಅವರ ತಂಡ ವಿಶೇಷ ಕಾಳಜಿ ವಹಿಸಿ ನನಗೆ ಚಿಕಿತ್ಸೆ ನೀಡಿದರು.

ನನ್ನ ಆರೋಗ್ಯದ ಬಗ್ಗೆ ಕಾಳಜಿ ವಹಿಸಿದ ಇಲ್ಲಿನ ವೈದ್ಯರಿಗೆ ಧನ್ಯವಾದಗಳು. ಪ್ರತಿಯೊಬ್ಬರು ಹೆಚ್ಚಿನ ಕಾಳಜಿಯಿಂದ ಚಿಕಿತ್ಸೆ ನೀಡಿದ್ದಾರೆ. ಜೊತೆಗೆ ನನ್ನ ಆರೋಗ್ಯದ ಸುಧಾರಣೆಗೆ ಕಾಳಜಿ ವಹಿಸಿದ ಪ್ರತಿಯೊಬ್ಬರಿಗೂ ನಾನು ಋಣಿ. ಸದ್ಯ ನಾನು ಸಂಪೂರ್ಣವಾಗಿ ಗುಣವಾಗಿದ್ದು, ವೈದ್ಯರ ಸಲಹೆ ಮೇರೆಗೆ 6 ವಾರಗಳ ವಿಶ್ರಾಂತಿ ಪಡೆದು ಬಳಿಕ, ಹಿಂದಿನಂತೆ 5 ರೂಪಾಯಿ ಚಿಕಿತ್ಸೆ ಮುಂದುವರೆಸುವೆ.

ಕಳೆದ 42 ವರ್ಷದಿಂದ ಮಂಡ್ಯದಲ್ಲಿ ಉಚಿತವಾಗಿ ಚಿಕಿತ್ಸೆ ನೀಡುತ್ತಾ ಬಂದಿದ್ದು ನನಗೆ ಆತ್ಮತೃಪ್ತಿ ನೀಡಿದೆ. ಮುಂದೆಯೂ ಕೂಡ ಈ ವೃತ್ತಿ ಮುಂದುವರೆಸಿಕೊಂಡು ಹೋಗಲಿದ್ದೇನೆ.

ಕೇವಲ ವೈದ್ಯನಲ್ಲದೇ ಕೃಷಿಕನಾಗಿಯೂ ನಾನು ದುಡಿದ್ದೇನೆ. 2010 ರಲ್ಲಿ ಜಿಲ್ಲಾ ಪಂಚಾಯತ್ ಚುನಾವಣೆಯಲ್ಲಿ ಗೆಲುವು ಸಾಧಿಸಿದ್ದೆ. ರಾಜಕೀಯಕ್ಕೆ ಕಾಲಿಟ್ಟ ಮೇಲೂ ಜನರಿಗೆ ಉಚಿತವಾಗಿ ಚಿಕಿತ್ಸೆ ನೀಡುವ ಕಸುಬು ಬಿಡಲಿಲ್ಲ. ಹಾರ್ಟ್ ಅಟ್ಯಾಕ್‌ಗೂ ಮುನ್ನ ನಾನು 200 ಜನರಿಗೆ ಚಿಕಿತ್ಸೆ ನೀಡಿದ್ದೆ ಅದು ಸಂತೋಷ ನೀಡಿದೆ. ಹೃದಯ ತಜ್ಞ ಡಾ. ವಿವೇಕ್ ಜಾವಳಿ ಮತ್ತಿತರರು ಈ ವೇಳೆ ಉಪಸ್ಥಿತರಿದ್ದರು.

ಪಾಲಿಕೆ ಸದಸ್ಯ ಶ್ರೀಧರ್‌ರಿಂದ ಯೋಗ ಮಂಟಪ ಉದ್ಘಾಟನೆ



ಮೈಸೂರು, ಜೂ.24(ಎಂಕೆ)– ಅಂತರರಾಷ್ಟ್ರೀಯ ಯೋಗ ದಿನದ ಅಂಗವಾಗಿ ಮೈಸೂರಿನ ವಾರ್ಡ್ ನಂ.3ರ ವ್ಯಾಪ್ತಿಯ ಮಹದೇಶ್ವರ ಬಡಾವಣೆ(ವಿಜಯನಗರ ರೈಲ್ವೆ ಬಡಾವಣೆ)ಯಲ್ಲಿ ನಿರ್ಮಿಸಿರುವ ನೂತನ 'ಯೋಗ ಮಂಟಪ'ವನ್ನು ಪಾಲಿಕೆ ಸದಸ್ಯ ಕೆ.ವಿ.ಶ್ರೀಧರ್ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಆರೋಗ್ಯಕರ ಜೀವನಕ್ಕೆ ಯೋಗ ಬಹಳ ಮುಖ್ಯವಾಗಿದ್ದು, ಇವತ್ತಿನ ದಿನಗಳಲ್ಲಿ ಆರೋಗ್ಯದ ದೃಷ್ಟಿಯಿಂದ ಅತ್ಯಂತ ಅವಶ್ಯವಾಗಿ ಪ್ರತಿಯೊಬ್ಬರು ಯೋಗಾಭ್ಯಾಸ ಮಾಡಬೇಕಾಗಿದೆ. ನಾವು ಪ್ರತಿನಿತ್ಯ ಯೋಗ ಮಾಡುತ್ತಿದ್ದರೆ ನಮ್ಮ ಮಕ್ಕಳು ಕೂಡ ನಮ್ಮೊಂದಿಗೆ ಬೆರೆತು ಯೋಗಾಭ್ಯಾಸ ಮಾಡುತ್ತಿದ್ದಾರೆ. ಇದರಿಂದ ಅವರ ಆರೋಗ್ಯವೂ ಉತ್ತಮವಾಗುತ್ತದೆ ಎಂದು ಹೇಳಿದರು. ನಗರಪಾಲಿಕೆ ಮಾಜಿ ಸದಸ್ಯ ಕೆ.ವಿ.ಮಲ್ಲೇಶ್, ಮುಖಂಡರಾದ ನರಸಿಂಹಯ್ಯ, ಮಧುಸೂಧನ್ ಶಶಿಕುಮಾರ್, ದೇವಯ್ಯ, ಕಲಾವತಿ ಗುರು ದತ್, ಪೂರ್ಣಿಮಾ ಮತ್ತಿತರರು ಉಪಸ್ಥಿತರಿದ್ದರು.

ನಾಳೆ 'ಅಯೋಧ್ಯ ಕಾಂಡ' ಪ್ರದರ್ಶನ

ಮೈಸೂರು, ಜೂ. 24– ವಾಲ್ಮೀಕಿ ರಾಮಾಯಣ ಆಧಾರಿತ ನಾಟಕ 'ಅಯೋಧ್ಯ ಕಾಂಡ' ನಾಟಕವು ಜೂ. 26ರ ಭಾನುವಾರ ಸಂಜೆ 7 ಗಂಟೆಗೆ ಮೈಸೂರಿನ ಕುವೆಂಪುನಗರದಲ್ಲಿರುವ ಗಾನಭಾರತಿ ಸಭಾಂಗಣದಲ್ಲಿ ಪ್ರದರ್ಶನಗೊಳ್ಳಲಿದೆ.

ಈ ನಾಟಕವನ್ನು ಹಿರಿಯ ರಂಗನಿರ್ದೇಶಕ ಪ್ರಸನ್ನ ರಚಿಸಿ, ನಿರ್ದೇಶಿಸಿದ್ದು, ಅನುಶೆಟ್ಟಿ ಸಂಗೀತ ಸಂಯೋಜಿಸಿದ್ದಾರೆ, ವಸ್ತ್ರಾಲಂಕಾರ ನಂದಿನಿ.ಕೆ.ಆರ್ ಹಾಗೂ ಪ್ರಸಾದನ ಬಿ.ಎಮ್. ರಾಮಚಂದ್ರ ನಿರ್ವಹಿಸಲಿದ್ದಾರೆ. ಮುಖ್ಯ ಪಾತ್ರದಲ್ಲಿ ರಂಗಾಯಣದ ಹಿರಿಯ ನಟರಾದ ಪ್ರಶಾಂತ್ ಹಿರೇಮಠ್, ರಾಷ್ಟ್ರೀಯ ನಾಟಕ ಶಾಲೆಯ ಪದವೀಧರೆ ಸಿ.ಆರ್, ಮುನ್ನ, ರಾಜಲಕ್ಷ್ಮೀ ಹಾಗೂ ವಿಶ್ವಾಸ್ ಅಭಿನಯಿಸಲಿದ್ದಾರೆ.

ಜೂನ್ ತಿಂಗಳ ಈ ಪ್ರದರ್ಶನಗಳು ನಾಟಕದ ಮರು ಪ್ರದರ್ಶನವಾಗಿದ್ದು, ಮೇ ತಿಂಗಳಲ್ಲಿ ನಾಲ್ಕು ಯಶಸ್ವಿ ಪ್ರದರ್ಶನಗಳನ್ನು ಕಂಡಿದೆ. ಇದೊಂದು ಸಂಗೀತಮಯ ನಾಟಕವಾಗಿದೆ. ನಾಡಿನ ಹಲವು ಲೇಖಕರು, ರಂಗಕರ್ಮಿಗಳು ಹಾಗೂ ಸಂಗೀತ ವಿಮರ್ಶಕರು ನಾಟಕ ಕುರಿತು ಈಗಾಗಲೇ ಒಳ್ಳೆಯ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ 9590259095 (ಬಿ.ರಾಜೇಶ್)

ಕೊರಗಜ್ಜನ ಪೂಜೆ



ಮೈಸೂರು, ಜೂ. 24– ಮೈಸೂರಿನ ಡಿ ಅರಸು ರಸ್ತೆಯಲ್ಲಿ ಇರುವ. ಶ್ರೀ ಶಕ್ತಿ ಬಿಸಿಲು ಮಾರಮ್ಮನ ದೇವಸ್ಥಾನ ವತಿಯಿಂದ ಪುತ್ತೂರಿನ ಪ್ರಸಿದ್ಧ ಕಾರ್ಣಿಕ ಮಂಜುನಾಥ್ ಅವರಿಂದ ಕೊರಗಜ್ಜನ ಪೂಜಾ ವಿಧಿವಿಧಾನಗಳು (ನಾಳೆ) ಶನಿವಾರ ನೇರವೇರಲಿದೆ ಎಂದು ದೇವಸ್ಥಾನ ಕಾರ್ಯದರ್ಶಿ ಮೈ.ಕಾ. ಪ್ರೇಮ್ ಕುಮಾರ್ ತಿಳಿಸಿದ್ದಾರೆ. ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ: 9342188601

ಮೈಸೂರಲ್ಲಿ ವಿವಿಧ ಸಂಘಟನೆಗಳಿಂದ ಪ್ರತ್ಯೇಕ ಪ್ರತಿಭಟನೆ

ಮೈಸೂರು,ಜೂ.24 (ಆರ್‌ಕೆಬಿ)– ಅಗ್ನಿಪಥ್ ಸೇನಾ ನೇಮಕಾತಿ ಯೋಜನೆ ಕೈಬಿಡಿ, ವಿದ್ಯುತ್ ದರ ಏರಿಕೆ ವಾಪಸ್ ಪಡೆಯಿರಿ, ಕರ್ನಾಟಕ ವಿಭಜನೆ ಸೊಲ್ಲೆತ್ತಿರುವ ಸಚಿವ ಉಮೇಶ್ ಕತ್ತಿ ರಾಜೀನಾಮೆ ನೀಡಲಿ, ರೋಹಿತ್ ಚಕ್ರತೀರ್ಥ ನೇತೃತ್ವದ ಪಠ್ಯ ಪರಿಷ್ಕರಣೆ ಕೈಬಿಡಿ ಎಂದು ಆಗ್ರಹಿಸಿ ವಿವಿಧ ಸಂಘಟನೆಗಳು ಶುಕ್ರವಾರ ಮೈಸೂರಿನಲ್ಲಿ ಪ್ರತ್ಯೇಕ ಪ್ರತಿಭಟನೆ ನಡೆಸಿದವು.

ಅಗ್ನಿಪಥ್ ಯೋಜನೆಗೆ ರೈತರ ವಿರೋಧ



ಸಂಯುಕ್ತ ಹೋರಾಟ– ಕರ್ನಾಟಕ ಮೈಸೂರು ಜಿಲ್ಲಾ ಸಮಿತಿ ಸದಸ್ಯರು ಶುಕ್ರವಾರ ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಬಳಿ ಜಮಾಯಿಸಿ, ಕೇಂದ್ರ ಸರ್ಕಾರ ಅಗ್ನಿಪಥ್ ಯೋಜನೆ ಮೂಲಕ ಜೈ ಜವಾನ್– ಜೈ ಕಿಸಾನ್ ಘೋಷಣೆಯ ಸ್ಫೂರ್ತಿಯನ್ನು ಧ್ವಂಸ ಮಾಡಲು ನಡೆಸಿರುವ ಹುನ್ನಾರವಾಗಿದೆ. ಕೂಡಲೇ ಈ ಯೋಜನೆಯನ್ನು ಕೈಬಿಡಬೇಕು ಎಂದು ಆಗ್ರಹಿಸಿ, ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ಕೇಂದ್ರದ ಅಗ್ನಿಪಥ್ ಸೇನಾ ನೇಮಕಾತಿ ವಿರೋಧಿಸಿ ಸಂಯುಕ್ತ ಹೋರಾಟ ಸಮಿತಿ ನೀಡಿರುವ ದೇಶವ್ಯಾಪಿ ಪ್ರತಿಭಟನೆಯನ್ನು ಬೆಂಬಲಿಸಿ, ಸಂಯುಕ್ತ ಹೋರಾಟ ಸಮಿತಿ ಜಿಲ್ಲಾ ಘಟಕದ ಸದಸ್ಯರು ಕೇಂದ್ರ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಮುಖಂಡರು, ಸರ್ಕಾರ ದೇಶದ ಭವಿಷ್ಯದ ಜೊತೆ ಚೆಲ್ಲಾಟವಾಡುತ್ತಿದೆ. ದೇಶದ ಭದ್ರತೆ ಹಾಗೂ ನಿರುದ್ಯೋಗಿ ಯುವಕರ ಹಾಗೂ ರೈತ ಕುಟುಂಬಗಳ ಕನಸಿಗೆ ಕಲ್ಲು ಹಾಕುತ್ತಿದೆ. ಬಹುತೇಕ ರೈತರು ರೈತಾಪಿ ಕುಟುಂಬದಿಂದ ಬಂದವರು, ಸೈನ್ಯದಲ್ಲಿ ತೊಡಗಿಸಿಕೊಂಡಿದ್ದಾರೆ ಎಂದರೆ ಇದು ಲಕ್ಷಾಂತರ ರೈತ ಕುಟುಂಬಗಳ ಹೆಮ್ಮೆ ಹಾಗೂ ಆರ್ಥಿಕ ಭದ್ರತೆಯ ದ್ಯೋತಕವಾಗಿದೆ. ಶ್ರೇಣಿಯೂ ಇಲ್ಲ.. ಪಿಂಚಣಿಯೂ ಇಲ್ಲ. ಎಂಬ ಯೋಜನೆ ಆರಂಭಿಸಿರುವ ಮೋದಿ ನಿರ್ಧಾರ ಇಡೀ ದೇಶವೇ ತಲೆ ತಗ್ಗಿಸುವಂತೆ ಮಾಡಿದೆ ಎಂದು ಆರೋಪಿಸಿದರು.

ಪ್ರತಿಭಟನೆಯಲ್ಲಿ ರೈತ ಮುಖಂಡರಾದ ಆಲಗೂಡು ಶಿವಕುಮಾರ್, ಸರಗೂರು ನಟರಾಜು, ಪಿ.ಮರಂಕಯ್ಯ, ಮಂಡಕಳ್ಳಿ ಮಹೇಶ್, ಬೆಂಕಿಪುರ ಚಿಕ್ಕಣ್ಣ, ಕಲ್ಲಹಳ್ಳಿ ಕುಮಾರ್, ಯಾಚೇನಹಳ್ಳಿ ಸೋಮಶೇಖರ್, ಉಮೇಶ್, ಕಿರಗಸೂರು ರಜಿನಿ, ಆಲಗೂಡು ನಾಗರಾಜು, ಶಿವಂಯೋಗಿ, ಮಹದೇವನಾಯ್ಕ, ಉಗ್ರನರಸಿಂಹೇಗೌಡ ಇನ್ನಿತರರು ಭಾಗವಹಿಸಿದ್ದರು.

ಪರಿಷ್ಕೃತ ಪಠ್ಯ ರದ್ದಿಗೆ ಆಗ್ರಹಿಸಿ ದಸಂಸ ಪ್ರತಿಭಟನೆ



ರೋಹಿತ್ ಚಕ್ರತೀರ್ಥರ ನೇತೃತ್ವದ ಪಠ್ಯಪುಸ್ತಕ ಪರಿಷ್ಕರಣೆ ಸಮಿತಿಯಿಂದ ಸಿದ್ಧವಾಗಿರುವ ಪರಿಷ್ಕೃತ ಪಠ್ಯಪುಸ್ತಕಗಳನ್ನು ರದ್ದುಗೊಳಿಸಿ, ಬರಗೂರು ರಾಮಚಂದ್ರಪ್ಪ ಅಧ್ಯಕ್ಷತೆಯಲ್ಲಿ ಪರಿಷ್ಕರಣೆಗೊಂಡಿರುವ ಪಠ್ಯಪುಸ್ತಕಗಳನ್ನು ಶಾಲೆಗಳಿಗೆ ಒದಗಿಸಬೇಕು ಎಂದು ಆಗ್ರಹಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಸದಸ್ಯರು ಶುಕ್ರವಾರ ಮೈಸೂರು ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಿದರು.

ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದ ಪ್ರತಿಭಟನಾಕಾರರು, ಶಿಕ್ಷಣ ತಜ್ಞರಲ್ಲದ ರೋಹಿತ್ ಚಕ್ರತೀರ್ಥ ಅಧ್ಯಕ್ಷತೆಯಲ್ಲಿ ಪರಿಷ್ಕರಣೆಗೊಂಡಿರುವ ಪಠ್ಯ ಪುಸ್ತಕವನ್ನು ಮಕ್ಕಳಿಗೆ ವಿತರಿಸಿದರೆ, ರಾಜ್ಯಾದ್ಯಂತ ಉಗ್ರ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಇದೇ ವೇಳೆ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳಿಗೆ ಕಾಯ್ದಿರಿಸಿರುವ ಎಸ್‌ಇಪಿ/ಟಿಎಸ್‌ಪಿ ಹಣದ ದುರುಪಯೋಗ ತಡೆಗಟ್ಟಬೇಕು. ಕಾಯಿದೆಯಲ್ಲಿರುವ ದಲಿತ ವಿರೋಧಿ ಸೆಕ್ಷನ್ 7(ಡಿ) ರದ್ದುಪಡಿಸಬೇಕು. ಮಲೆನಾಡು ಭಾಗದಲ್ಲಿ ಕಾಫಿ ಪ್ಲಾಂಟರ್‌ಗಳು ಅಕ್ರಮವಾಗಿ ಒತ್ತುವರಿ ಮಾಡಿರುವ ಭೂಮಿಯನ್ನು ತೆರವುಗೊಳಿಸಿ, ಭೂಹೀನರಿಗೆ ನೀಡಬೇಕು. ಯಾವುದೇ ಕಾರಣಕ್ಕೂ ಭೂ ಮಾಲೀಕರಿಗೆ ಗುತ್ತಿಗೆ ನೀಡಬಾರದು ಎಂದು ಆಗ್ರಹಿಸಿದರು.

ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ ವರದಿಯಂತೆ ಪರಿಶಿಷ್ಟ ಜಾತಿ, ವರ್ಗಗಳ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಪ್ರಮಾಣ ಹೆಚ್ಚಿಸಬೇಕು. ಪರಿಶಿಷ್ಟರ ಮೇಲಿನ ನಿರಂತರ ದೌರ್ಜನ್ಯ ನಿಯಂತ್ರಿಸಲು ವಿಫಲವಾಗುತ್ತಿರುವ ಪೊಲೀಸ್ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಬೇಕು. ರಾಜ್ಯಾದ್ಯಂತ ಪೌರ ಕಾರ್ಮಿಕರನ್ನು ಖಾಯಂಗೊಳಿಸಬೇಕು ಎಂಬ ಇತ್ಯಾದಿ ಬೇಡಿಕೆ ಸೇರಿದಂತೆ ಇನ್ನಿತರ ಬೇಡಿಕೆ ಈಡೇರಿಸಲು ಆಗ್ರಹಿಸಿ, ಜಿಲ್ಲಾಧಿಕಾರಿ ಕಚೇರಿಗೆ ಮನವಿ ಪತ್ರ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ಸಮಿತಿಯ ಜಿಲ್ಲಾ ಪ್ರಧಾನ ಸಂಚಾಲಕ ಸೋಮಣ್ಣ ಬನ್ನಳ್ಳಿ, ಮಹಿಳಾ ಘಟಕದ ವಿಭಾಗೀಯ ಸಂಚಾಲಕಿ ಪುಟ್ಟಲಕ್ಷ್ಮಮ್ಮ, ಜಿಲ್ಲಾ ಸಂಘಟನಾ ಸಂಚಾಲಕ ದೊಡ್ಡಸಿದ್ದು ಹಾದನೂರು, ಚಾ.ಶಿವಕುಮಾರ್, ಜಿಲ್ಲಾ ಮಹಿಳಾ ಸಂಚಾಲಕಿ ವಸಂತ ಹೊನ್ನೇನಹಳ್ಳಿ ಇತರರು ಇದ್ದರು.

ಔಷಧೀಯ ಸಸ್ಯಗಳ ಸಂರಕ್ಷಣೆ ನಮ್ಮ ಹೊಣೆ

ಪ್ರಧಾನ ಅರಣ್ಯ ಸಂರಕ್ಷಣಾಧಿಕಾರಿ ಮಧು ಶರ್ಮಾ ಅಭಿಮತ



ಮೈಸೂರು, ಜೂ.24(ಆರ್‌ಕೆಬಿ)– ನಶಿಸಿ ಹೋಗುತ್ತಿರುವ ಔಷಧೀಯ ಸಸ್ಯಗಳನ್ನು ಉಳಿಸುವ ಜವಾಬ್ದಾರಿ ನಮ್ಮೆಲರ ಮೇಲಿದೆ ಎಂದು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮಧು ಶರ್ಮಾ ಇಂದಿಲ್ಲಿ ತಿಳಿಸಿದರು.

ಕರ್ನಾಟಕ ರಾಜ್ಯ ಔಷಧಿ ಗಿಡ ಮೂಲಿಕಾ ಪ್ರಾಧಿಕಾರ, ಕರ್ನಾಟಕ ಜೀವ ವೈವಿಧ್ಯ ಮಂಡಳಿ ಮತ್ತು ಮೈಸೂರು ವಿಶ್ವವಿದ್ಯಾನಿಲಯದ ಸಸ್ಯಶಾಸ್ತ್ರ ಅಧ್ಯಯನ ವಿಭಾಗ ಶುಕ್ರವಾರ ಆಯೋಜಿಸಿದ್ದ ಮೂರನೇ ವಿಭಾಗೀಯ ಸಮನ್ವಯ ಕಾರ್ಯಾಗಾರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಕೈಗಾರಿಕಾ ಕ್ರಾಂತಿಯ ಪರಿಣಾಮ ಇಂದು ಹೆಚ್ಚಿನ ಸಸ್ಯಗಳು ಬೆಳೆಯಲು ಉತ್ತಮ ವಾತಾವರಣ ಇಲ್ಲವಾಗಿದೆ. ಹೆಚ್ಚಿನ ಪ್ರಯೋಜನ ಇರುವ ಔಷಧೀಯ ಸಸ್ಯಗಳು ನಶಿಸಿ ಹೋಗದಂತೆ ಅವುಗಳನ್ನು ಸಂರಕ್ಷಿಸಿ, ಬೆಳೆಸುವ ಅಗತ್ಯವಿದೆ ಎಂದು ಹೇಳಿದರು.

ವಿಶ್ರಾಂತ ಕುಲಪತಿ ಪ್ರೊ.ಎಸ್. ಆರ್. ನಿರಂಜನ ಮಾತನಾಡಿ, ಸಸ್ಯಗಳ ಸಂರಕ್ಷಣೆಗೆ ಅಧ್ಯಯನ ಮಾಡಲು ಅಥವಾ ಕಾರ್ಯಕ್ರಮ ಆಯೋಜಿಸಲು ವಿಶ್ವ ವಿದ್ಯಾನಿಲಯಗಳಲ್ಲಿ ಅನುದಾನವೇ ಇಲ್ಲದಂತಾಗಿದೆ. ಸರ್ಕಾರ ಇದಕ್ಕೆ ಹೆಚ್ಚಿನ ಅನುದಾನ ನೀಡಬೇಕು ಎಂದು ಸಲಹೆ ನೀಡಿದರು.

ಮೈಸೂರು ವಿವಿ ಕುಲಸಚಿವ ಪ್ರೊ.ಆರ್. ಶಿವಪ್ಪ ಮಾತನಾಡಿ, ಹಳ್ಳಿ ವಾತಾವರಣದಲ್ಲಿ ಬೆಳೆದವರಿಗೆ ಔಷಧೀಯ ಗುಣ ಇರುವ ಸಸ್ಯಗಳ ಪರಿಚಯ ಇರುತ್ತದೆ. ಈಗಿನ ಪೀಳಿಗೆಗೆ ಅವುಗಳ ಪರಿಚಯವೇ ಇಲ್ಲವಾಗಿದೆ. ಪಟ್ಟಣದ ಮಕ್ಕಳಿಗೆ ಯಾವ ಗಿಡ ಯಾವ ಹಣ್ಣು ನೀಡುತ್ತದೆ, ಹೇಗೆ ಬೆಳೆಯುತ್ತದೆ ಎಂಬ ಮಾಹಿತಿಯೇ ಇಲ್ಲ. ಹಾಗಾಗಿ ಮಕ್ಕಳಿಗೆ ಔಷಧೀಯ ಸಸ್ಯಗಳ ಬಗ್ಗೆ ಪರಿಚಯ ಮಾಡಿಕೊಡುವ ಕೆಲಸ ಆಗಬೇಕು ಎಂದು ತಿಳಿಸಿದರು.

ಸಸ್ಯಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷ ಡಾ.ಕೆ.ಎನ್.ಅಮೃತೇಶ್ ಮಾತನಾಡಿ, ನಮಗೇ ಗೊತ್ತಿಲ್ಲದ ಔಷಧೀಯ ಗುಣವುಳ್ಳ ನೂರಾರು ಪ್ರಭೇಧ ಸಸ್ಯಗಳಿದ್ದು, ಅವುಗಳ ಡಾಟಾ ಸಂಗ್ರಹ ಮಾಡುವ ಕೆಲಸ ಆಗಬೇಕಾಗಿದೆ ಎಂದು ಸಲಹೆ ನೀಡಿದರು.

ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಅನಿತ ಎಸ್.ಅರೇಕಲ್, ಜಿ.ಎ.ಸುದರ್ಶನ್, ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರದ ಸಹಾಯಕ ನಿರ್ದೇಶಕ ಡಾ.ಲಕ್ಷ್ಮೀನಾರಾಯಣ ಶೆಣೈ ಇನ್ನಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಉಚಿತ ಕಣ್ಣಿನ ತಪಾಸಣಾ ಶಿಬಿರ

ಮೈಸೂರು, ಜೂ. 24– ಮೈಸೂರು ಮೂಲದ ಡಿಜಿಟಲ್ ಮಾರ್ಕೆಟಿಂಗ್ ಕಂಪನಿ ಥಿಯರೆಮ್ಸ್ ತನ್ನ ಸಿಎಸ್‌ಆರ್ ಉಪಕ್ರಮದ ಅಂಗವಾಗಿ ಮೈಸೂರಿನಾದ್ಯಂತ ಉಚಿತ ಕಣ್ಣಿನ ತಪಾಸಣೆಯನ್ನು ಆಯೋಜಿಸಲು ವಿಷನ್‌ಸ್ಪ್ರಿಂಗ್‌ನೊಂದಿಗೆ ಒಪ್ಪಂದ ಮಾಡಿಕೊಂಡಿದೆ. ಉಚಿತ ಕಣ್ಣಿನ ತಪಾಸಣಾ ಶಿಬಿರವನ್ನು ಜೂನ್ 26 ರಂದು ಬೆಳಗ್ಗೆ 10 ರಿಂದ ಸಂಜೆ 4 ಗಂಟೆಯವರೆಗೆ ಕೆಸರೆ (ಬೆಲವತ್ತ)ಯಲ್ಲಿ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ ಮೊ. 8310845715 ಸಂಪರ್ಕಿಸಬಹುದು.

ವಿದ್ಯುತ್ ದರ ಏರಿಕೆ ಕೈಬಿಡಲು ಆಗ್ರಹಿಸಿ ಸಿಪಿಐ(ಎಂ) ಒತ್ತಾಯ



ಪ್ರತಿ ಯೂನಿಟ್ ವಿದ್ಯುತ್ ದರವನ್ನು 10 ಪೈಸೆಯಿಂದ 20 ಪೈಸೆಗೆ ಹಾಗೂ ವಾಣಿಜ್ಯ ಬಳಕೆಯ ವಿದ್ಯುತ್ ದರ 15 ಪೈಸೆಯಿಂದ 25 ಪೈಸೆಗೆ ಹೆಚ್ಚಳ ಮಾಡಿ ಜನಸಾಮಾನ್ಯರ ಮೇಲೆ ಮತ್ತೊಂದು ಹೊರೆಯನ್ನು ಹೇರಲು ಮುಂದಾಗಿರುವ ವಿದ್ಯುತ್ ಕಂಪನಿಗಳ ಕ್ರಮವನ್ನು ವಿರೋಧಿಸಿ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಮೈಸೂರು ಜಿಲ್ಲಾ ಸಮಿತಿಯ ಕಾರ್ಯಕರ್ತರು ಶುಕ್ರವಾರ ಮೈಸೂರಿನ ವಿ.ವಿ.ಮೊಹಲ್ಲಾದ ಸೆಸ್ಕ್ ವಿಭಾಗೀಯ ಕಚೇರಿಯ ಎದುರು ಪ್ರತಿಭಟನೆ ನಡೆಸಿದರು.

ಕಳೆದ 2009ರಿಂದ 2022ರ ಇಂದಿನವರೆಗೆ ಪ್ರತಿ ಯೂನಿಟ್ ವಿದ್ಯುತ್ ದರವನ್ನು 2.70ರೂ.ಗಳಷ್ಟು ಹೆಚ್ಚಿಸಲಾಗಿದೆ. ಈ ಬೆಲೆ ಏರಿಕೆಯು ಎಲ್ಲಾ ಮನೆಗಳ ಬಿಲ್‌ಗಳನ್ನು ಹೆಚ್ಚಿಸಲಿದೆ. ವಾಣಿಜ್ಯ ಬಳಕೆಯ ವಿದ್ಯುತ್ ಬೆಲೆಗಳ ಏರಿಕೆಯಿಂದ ಸಣ್ಣ ಕೈಗಾರಿಕೆಗಳು ಮುಚ್ಚುವಂತಹ ಪರಿಸ್ಥಿತಿಗೆ ತಂದೊಡ್ಡಲಿದೆ. ಜನಸಾಮಾನ್ಯರ ಮೇಲೆ ಬೆಲೆ ಏರಿಕೆಯ ಮತ್ತೊಂದು ಹೊರೆಯನ್ನು ಹೇರಲಿದೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು. ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು. ಕೂಡಲೇ ಹೆಚ್ಚಳ ಮಾಡಲಾಗಿರುವ ವಿದ್ಯುತ್ ದರವನ್ನು ಕೈಬಿಡಬೇಕು ಎಂದು ಮುಖ್ಯಮಂತ್ರಿಗಳಿಗೆ ಬರೆದ ಮನವಿ ಪತ್ರವನ್ನು ವಿಭಾಗೀಯ ಕಚೇರಿಯ ಕಾರ್ಯನಿರ್ವಾಹಕ ಅಭಿಯಂತರರಿಗೆ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ಸಿಪಿಐ(ಎಂ) ಮೈಸೂರು ಜಿಲ್ಲಾ ಕಾರ್ಯದರ್ಶಿ ಜಗದೀಶ್ ಸೂರ್ಯ, ಸದಸ್ಯರಾದ ಕೆಬಸವರಾಜ್, ಜಿ.ಜಯರಾಂ, ಲ.ಜಗನ್ನಾಥ್, ನಗರ ಕಾರ್ಯದರ್ಶಿ ರಾಜೇಂದ್ರ ಬಲರಾಂ, ಕೃಷ್ಣಮೂರ್ತಿ, ಅಣ್ಣಪ್ಪ, ಟಿ.ಎಸ್.ವಿಜಯಕುಮಾರ್, ಯತೀಶ್, ಸಿದ್ದಯ್ಯ, ಚಂದ್ರಶೇಖರ್, ಈಶ್ವರ್, ಟಿ.ಎನ್.ರಾಜು, ಕುಮಾರ್ ಇನ್ನಿತರರು ಉಪಸ್ಥಿತರಿದ್ದರು.

ರಾಜ್ಯ ವಿಭಜಿಸುವ ಕತ್ತಿ ಹೇಳಿಕೆಗೆ ಮೈಸೂರಲ್ಲಿ ಆಕ್ರೋಶ



ಮೈಸೂರು, ಜೂ.24– ರಾಜ್ಯವನ್ನು ವಿಭಜಿಸುವ ಸಚಿವ ಉಮೇಶ್ ಕತ್ತಿ ಅವರ ಹೇಳಿಕೆಯನ್ನು ಖಂಡಿಸಿ ಮೈಸೂರು ಕನ್ನಡ ವೇದಿಕೆ ಕಾರ್ಯಕರ್ತರು ಶುಕ್ರವಾರ ಮೈಸೂರು ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು. ಉಮೇಶ್ ಕತ್ತಿಯವರು ಹೇಳಿಕೆ ನೀಡುವ ಮುನ್ನ ಕರ್ನಾಟಕದ ಏಕೀಕರಣಕ್ಕೆ ಧ್ವನಿ ಎತ್ತಿದ ಆಲೂರು ವೆಂಕಟರಾಯರು, ಮ.ರಾಮಮೂರ್ತಿ, ಗೋಕಾಕ್ ಚಳವಳಿಯಲ್ಲಿ ಮುಂಚೂಣಿಯಲ್ಲಿದ್ದ ಡಾ.ರಾಜ್‌ಕುಮಾರ್ ಅವರು ನೆನಪಿಗೆ ಬರಲಿಲ್ಲವೇ? ಎಂದು ಪ್ರಶ್ನಿಸಿ, ಕತ್ತಿ ವಿರುದ್ಧ ಘೋಷಣೆ ಕೂಗಿದರು.

ಉತ್ತರ ಕರ್ನಾಟಕದ ಅಭಿವೃದ್ಧಿಗೆ ಕೋಟ್ಯಂತರ ರೂ. ಅನುದಾನ ನೀಡಿದ್ದರೂ ಅದನ್ನು ಸಮರ್ಥವಾಗಿ ಬಳಸಿಕೊಳ್ಳಲು ವಿಫಲವಾಗಿರುವ ಅಲ್ಲಿನ ಜನಪ್ರತಿನಿಧಿಗಳು ಕಾರಣವೇ ಹೊರತು ಸರ್ಕಾರವಲ್ಲ. ಉತ್ತರ ಕರ್ನಾಟಕದಿಂದ ಸಾಕಷ್ಟು ಮಂತ್ರಿಗಳಾಗಿದ್ದರೂ, ಉತ್ತರ ಕರ್ನಾಟಕದ ಭಾಗದ ಅಭಿವೃದ್ಧಿಗೆ ಅವರು ನೀಡಿರುವ ಕೊಡುಗೆ ಏನು? ಉತ್ತರ ಕರ್ನಾಟಕದವರು ಮಂತ್ರಿಗಳಾದರೆ ತಮ್ಮ ಕ್ಷೇತ್ರಗಳಿಗೆ ಭೇಟಿ ನೀಡದೇ ಬೆಂಗಳೂರಿನಲ್ಲೇ ವಾಸ ಮಾಡುತ್ತಾರೆಂಬ ಮಾತುಗಳು ಉತ್ತರ ಕರ್ನಾಟಕದ ಜನರಿಂಲೇ ವ್ಯಕ್ತವಾಗಿದೆ. ಹೀಗಿದ್ದೂ ಉಮೇಶ್ ಕತ್ತಿ ಇಂತಹ ಅಖಂಡ ಕರ್ನಾಟಕವನ್ನು ಒಡೆಯುವ ಹೇಳಿಕೆ ಖಂಡನೀಯ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಸರ್ಕಾರ ಉಮೇಶ್ ಕತ್ತಿಯಂತಹ ಕನ್ನಡ ವಿರೋಧಿ ವ್ಯಕ್ತಿಗಳನ್ನು ರಾಜ್ಯದಿಂದ ಗಡಿಪಾರು ಮಾಡಬೇಕು. ಅವರನ್ನು ಸಚಿವ ಸ್ಥಾನದಿಂದ ವಜಾ ಮಾಡಬೇಕು ಎಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ವೇದಿಕೆ ಜಿಲ್ಲಾಧ್ಯಕ್ಷ ಎಸ್.ಬಾಲಕೃಷ್ಣ, ಪದಾಧಿಕಾರಿಗಳಾದ ನಾಲಾಬೀದಿ ರವಿ, ಬೋಗಾದಿ ಸಿದ್ದೇಗೌಡ, ಪ್ಯಾಲೇಸ್ ಬಾಬು, ಮಹದೇವಸ್ವಾಮಿ, ಗೋಪಿ, ಸುನೀಲ್, ಬೀಡಾ ಬಾಬು, ಎಲ್‌ಐಸಿ ಸಿದ್ದಪ್ಪ, ಪೂರ್ಣಿಮಾ ಇನ್ನಿತರರು ಭಾಗವಹಿಸಿದ್ದರು.

ಕೆಎಎಸ್, ಪಿಎಸ್‌ಐ ಪರೀಕ್ಷೆಗೆ ಉಚಿತ ಕಾರ್ಯಾಗಾರ

ಮೈಸೂರು : ಗ್ಲೋಬಲ್ ಕಾಂಪಿಟೇಟಿವ್ ಅಕಾಡೆಮಿಯ ವತಿಯಿಂದ ಕೆಎಎಸ್ ಹಾಗೂ ಪಿಎಸ್‌ಐ ಸ್ಪರ್ಧಾತ್ಮಕ ಪರೀಕ್ಷೆಗಳ ಕುರಿತು ಒಂದು ದಿನದ ಉಚಿತ ಕಾರ್ಯಾಗಾರ ಜೂ. 26 ರಂದು ಬೆಳಗ್ಗೆ 10–30 ಕ್ಕೆ ಕುವೆಂಪುನಗರದ ಅಪೊಲೊ ಆಸ್ಪತ್ರೆಯ ಎದುರಿನ ಅಕಾಡೆಮಿಯ ಸಭಾಂಗಣದಲ್ಲಿ ನಡೆಯಲಿದೆ.

ಕಾರ್ಯಾಗಾರವನ್ನು ಡಿವೈ.ಎಸ್.ಪಿ. ಎಂ. ಮಹೇಂದ್ರ ಉದ್ಘಾಟಿಸಲಿದ್ದು, ಕರ್ನಾಟಕ ಪೊಲೀಸ್ ಅಕಾಡೆಮಿಯ ಡಿವೈಎಸ್‌ಪಿ ಎನ್. ರಘು ಅಧ್ಯಕ್ಷತೆ ವಹಿಸುವರು. ಆರಕ್ಷಕ ನಿರೀಕ್ಷಕ ಸಿ.ಎಂ. ರವೀಂದ್ರ ಉಪನ್ಯಾಸ ನೀಡುವರು. ಸಾಹಿತಿ ಟಿ. ಸತೀಶ್ ಜವರೇಗೌಡ, ಕೂಡಲಸಂಗಮ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ಎ.ಈ. ರಘು ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳುವರು. ಈ ತರಬೇತಿ ಕಾರ್ಯಾಗಾರದಲ್ಲಿ 60 ಮಂದಿಗೆ ಮಾತ್ರ ಅವಕಾಶವಿದ್ದು, ಉಚಿತ ಪ್ರವೇಶವಿರುತ್ತದೆ. ತಜ್ಞ ಸಂಪನ್ಮೂಲ ವ್ಯಕ್ತಿಗಳು ತರಗತಿ ತೆಗೆದುಕೊಳ್ಳಲಿದ್ದು, ಪ್ರತಿ ಬುಧವಾರ ಮತ್ತು ಭಾನುವಾರ ಓಎಂಆರ್ ಸಹಿತ ಎರಡು ಅಣಕ ಪರೀಕ್ಷೆಗಳು ನಡೆಯಲಿವೆ. ಸುಸಜ್ಜಿತ ಗ್ರಂಥಾಲಯವಿದ್ದು 24/7 ಓದಿಗೆ ಲಭ್ಯವಿದೆ. ಆಸಕ್ತರು ದೂರವಾಣಿ ಸಂಖ್ಯೆ 8073783591, 9686166528, 0821 – 4247843 ಸಂಪರ್ಕಿಸಬಹುದು.

ಸಂಚಾರ ನಿಯಮ ಉಲ್ಲಂಘಿಸಿದ್ದೀರಾ.....!

ಮೆಸೇಜ್ ಬಂದ ತಕ್ಷಣ ದಂಡ ಕಟ್ಟಿ : ಕಾನೂನು ಕ್ರಮದಿಂದ ಪಾರಾಗಿ

ಮೈಸೂರು, ಜೂ.24(ಜಿಎ)– ಸಂಚಾರ ನಿಯಮ ಉಲ್ಲಂಘಿಸಿದ್ದೀರಾ? ನಿಮ್ಮ ಮನೆಗೆ ನೋಟಿಸ್‌ಗೂ ಮೊದಲು ಬರಲಿದೆ ಎಸ್‌ಎಂಎಸ್...!

ಸಂಚಾರ ನಿಯಮ ಉಲ್ಲಂಘನೆಯ ಬಾಕಿ ದಂಡವನ್ನು ಲೋಕ ಅದಾಲತ್‌ನಲ್ಲಿ ಕಟ್ಟಿ ಇತ್ಯರ್ಥ ಮಾಡಿಕೊಳ್ಳುವಂತೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ವತಿಯಿಂದ ತಮ್ಮ ಮೊಬೈಲ್‌ಗೆ ಮೆಸೇಜ್ ಬರಲಿದೆ. ಮೆಸೇಜ್ ಬಂದ ವಾರದೊಳಗೆ ದಂಡ ಕಟ್ಟದಿದ್ದರೇ ಕಾನೂನು ಸೇವೆಗಳ ಪ್ರಾಧಿಕಾರ ಕಠಿಣ ಕ್ರಮಕ್ಕೆ ಮುಂದಾಗಿದೆ.



2019, 20 ಮತ್ತು 21ನೇ ಸಾಲಿನ ಬಾಕಿ ಉಳಿದಿರುವ ಕೊಟ್ಯಾಂತರ ರೂ., ದಂಡ ವಸೂಲಿಗೆ ರಾಜ್ಯ ಪೊಲೀಸ್ ಇಲಾಖೆ ಹಾಗೂ ಆಯಾ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಗಳು ಮುಂದಾಗಿದ್ದು, ಸಂಚಾರ ನಿಯಮ ಉಲ್ಲಂಘಿಸಿದವರ ಮೊಬೈಲ್ ನಂಬರ್‌ಗೆ ಎಸ್‌ಎಂಎಸ್ ಕಳುಹಿಸುವ ಮೂಲಕ ದಂಡ ಪಾವತಿ ಮಾಡುವಂತೆ ಎಚ್ಚರಿಕೆಯ ಸಂದೇಶ ನೀಡಲಾಗುತ್ತಿದೆ.

ಹೆಲ್ಮೆಟ್ ಧರಿಸದಿರುವುದು. ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುವುದು. ಅತೀ ವೇಗ, ತ್ರಿಬಲ್ ರೈಡಿಂಗ್, ಸೀಟ್ ಬೆಲ್ಟ್ ಹಾಕದಿರುವುದು, ಒನ್ ವೇ ಸಂಚಾರ, ಸಿಗ್ನಲ್ ಜಂಪ್, ಡ್ರೈವಿಂಗ್ ಲೈಸೆನ್ಸ್ ಹಾಗೂ ವಾಹನ ಚಾಲನಾ ಪರವಾನಗಿ ಇಲ್ಲದೆ ವಾಹನ ಚಲಾಯಿಸುವುದು. ಹೆಡ್‌ಲೈಟ್ ಅನುಚಿತ ಬಳಕೆ. ನೋ ಪಾರ್ಕಿಂಗ್ ಸ್ಥಳದಲ್ಲಿ ವಾಹನ ನಿಲ್ಲಿಸುವುದು ಸೇರಿದಂತೆ ಇನ್ನಿತರ ಸಂಚಾರ ನಿಯಮ ಉಲ್ಲಂಘಿಸಿ, ದಂಡ ಕಟ್ಟದೆ ಬಾಕಿ ಉಳಿಸಿಕೊಂಡಿದ್ದವರಿಗೆ ಜೂ.21ರಿಂದ ಸಂದೇಶ ರವಾನೆಯಾಗುತ್ತಿದೆ. ಮೈಸೂರು ನಗರದಲ್ಲಿಯೇ ಸಾಕಷ್ಟು ಜನರಿಗೆ ಎಸ್‌ಎಂಎಸ್ ಕಳುಹಿಸಲಾಗಿದ್ದು, ನಿಯಮ ಉಲ್ಲಂಘನೆಯ ಪೂರ್ಣ ಮಾಹಿತಿ ಪಡೆಯಲು ಅನುಕೂಲವಾಗುವಂತೆ ವೆಬ್‌ಸೈಟ್ ಲಿಂಕ್, ವಾಹನದ ಸಂಖ್ಯೆ ಹಾಗೂ ದಂಡದ ಮೊತ್ತವನ್ನು ತಿಳಿಸಲಾಗಿದೆ.

ವೆಬ್‌ಸೈಟ್ ಲಿಂಕ್ ಮೇಲೆ ಕ್ಲಿಕ್ ಮಾಡಿದರೆ, ಲೋಕ ಅದಾಲತ್ ವೆಬ್‌ಸೈಟ್ ಓಪನ್ ಆಗಲಿದ್ದು, ನಿಯಮ ಉಲ್ಲಂಘನೆಯಾದ ಸ್ಥಳದ ಮಾಹಿತಿ ಸೇರಿದಂತೆ ದಂಡ ಪಾವತಿ ಕುರಿತು ಸಂಪೂರ್ಣ ಮಾಹಿತಿ ತೆರೆದುಕೊಳ್ಳಲಿದೆ. ಅಲ್ಲದೆ ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ನೋಟಿಸ್ ಓದಲು ಅವಕಾಶ ಮಾಡಿಕೊಡಲಾಗಿದೆ.



ಸಂಚಾರ ನಿಯಮ ಉಲ್ಲಂಘನೆ ಮಾಡಿದವರ ಮನೆಗೆ ನೋಟಿಸ್ ಕಳುಹಿಸುವ ಜೊತೆಗೆ ಹೊಸದಾಗಿ ಅವರ ಮೊಬೈಲ್ ನಂಬರ್‌ಗಳಿಗೆ ಎಸ್‌ಎಂಎಸ್ ಕಳುಹಿಸುವ ಮೂಲಕ ದಂಡ ಪಾವತಿ ಮಾಡುವಂತೆ ಎಚ್ಚರಿಸಲಾಗುತ್ತಿದೆ. ಪೊಲೀಸ್ ಇಲಾಖೆ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ವತಿಯಿಂದ ಬಾಕಿ ಉಳಿದಿರುವ ಕೊಟ್ಯಾಂತರ ರೂ. ದಂಡವನ್ನು ಹೊಸ ಮಾದರಿಯಲ್ಲಿ ವಸೂಲಿ ಮಾಡಲಾಗುತ್ತಿದೆ. - ಎಂ.ಎಸ್. ಗೀತಾ ಪ್ರಸನ್ನ, ಡಿಸಿಪಿ

ಆನ್‌ಲೈನ್ ಮತ್ತು ಆಫ್‌ಲೈನ್‌ನಲ್ಲಿ ಅವಕಾಶ: ಸಂಚಾರ ನಿಯಮ ಉಲ್ಲಂಘನೆಯ ದಂಡವನ್ನು ಆನ್‌ಲೈನ್ ಹಾಗೂ ಆಫ್‌ಲೈನ್ ಮೂಲಕವೂ ಪಾವತಿ ಮಾಡಬಹುದಾಗಿದೆ. ಕರ್ನಾಟಕ ಓನ್ ಸೇವಾ ಕೇಂದ್ರಗಳಲ್ಲಿ ಆನ್‌ಲೈನ್ ಮೂಲಕ ದಂಡ ಪಾವತಿಗೆ ಅವಕಾಶ ನೀಡಿದ್ದರೆ, ಆಫ್‌ಲೈನ್‌ನಲ್ಲಿ ಲೋಕ ಅದಾಲತ್ ಅಥವಾ ಹತ್ತಿರದ ಪೊಲೀಸ್ ಠಾಣೆಯಲ್ಲಿ ದಂಡ ಕಟ್ಟಲು ಅವಕಾಶ ಮಾಡಿಕೊಡಲಾಗಿದೆ.

ಕಾನೂನು ಕ್ರಮ: ಮೊಬೈಲ್‌ಗೆ ದಂಡ ಪಾವತಿ ಕುರಿತ ಎಸ್‌ಎಂಎಸ್ ಬಂದ ವಾರದೊಳಗೆ ಪಾವತಿ ಮಾಡದಿದ್ದರೆ ನೋಟಿಸ್ ಜಾರಿ ಮಾಡಲಾಗುವುದು. ನೋಟಿಸ್‌ಗೂ ಸ್ಪಂದಿಸದಿದ್ದರೆ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಮೆಸೇಜ್‌ನಲ್ಲಿಯೇ ಎಚ್ಚರಿಸಲಾಗುವುದು.

ತಿಂಗಳ ಹಿಂದೆ ಯೋಜನೆ ಜಾರಿ: ಎಸ್‌ಎಂಎಸ್ ಮೂಲಕ ಎಚ್ಚರಿಕೆಯ ಸಂದೇಶ ನೀಡಿ ಸಂಚಾರ ನಿಯಮ ಉಲ್ಲಂಘನೆಯ ದಂಡ ವಸೂಲಿಗಾಗಿ ರೂಪಿಸಿರುವ ಯೋಜನೆ ತಿಂಗಳ ಹಿಂದೆಯೇ ಜಾರಿಗೆ ಬಂದಿದ್ದು, ಜೂ.21ರಿಂದ ಅಧಿಕೃತವಾಗಿ ನಿಯಮ ಉಲ್ಲಂಘಿಸಿದವರಿಗೆ ಮೆಸೇಜ್ ರವಾನೆಯಾಗುತ್ತಿದೆ. ಈಗಾಗಲೇ ಮೆಸೇಜ್ ನೋಡಿದ ಹಲವು ದಂಡ ಪಾವತಿ ಮಾಡಲು ಮುಂದಾಗಿದ್ದಾರೆ ಎಂದು ಮೈಸೂರು ನಗರ ಉಪ ಪೊಲೀಸ್ ಆಯುಕ್ತೆ ಗೀತಾ ಪ್ರಸನ್ನ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ನಕ್ಕರೆ ಅದೇ ಸ್ವರ್ಗ

ಪ್ರಯಾಣಿಕನೋರ್ವ : (ಹಿಂದಿನಿಂದ ರೈಲು ಹತ್ತಲು ಓಡಿ ಬರುತ್ತಿದ್ದ ಇಬ್ಬರಲ್ಲಿ ಓರ್ವರನ್ನು ರೈಲಿನ ಬಾಗಿಲಿನಲ್ಲಿ ನಿಂತು ಎಳೆದುಕೊಂಡ ಥ್ಯಾಂಕ್ಸ್ ಹೇಳುವ ಬದಲು ಕೋಪಿಸಿಕೊಂಡಾಗ) ''ಯಾಕೆ ಕೋಪ?''
ಅವರು : ''ಅಯ್ಯೋ... ರೈಲಿಗೆ ಹೋಗಬೇಕಾಗಿದ್ದು ನನ್ನ ಜೊತೆಗಿದ್ದವ ಸ್ವಾಮಿ, ನಾನು ಕಳಿಸೋಕೆ ಬಂದವನು!''

ಮೈಸೂರು ಮಿತ್ರ
ಶನಿವಾರ, 25 ಜೂನ್ 2022
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಒಳ್ಳೆಯದನ್ನು ಮಾಡಬೇಕೆಂದರೆ ಅದಕ್ಕೆ ಅಧಿಕಾರ ಸ್ಥಾನವೇ ಸಿಗಬೇಕೆಂದಿಲ್ಲ. ಪ್ರೀತಿ ಇದ್ದರೆ ಸಾಕು. –ಅನುಭವ ನುಡಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಮೀನಿನ ಮರಿಗೆ ಈಜು ಕಲಿಸಿದಂತೆ

ನಿಮ್ಮ ಪತ್ರಗಳು

ದ್ರೌಪದಿ ಮುರ್ಮು ಆಯ್ಕೆ ಸ್ವಾಗತಾರ್ಹ

ಮಾನ್ಯರೆ,



ಮುಂಬರುವ ರಾಷ್ಟ್ರಪತಿ ಚುನಾವಣೆಯಲ್ಲಿ ಆಡಳಿತಾರೂಡ ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿಯಾಗಿ ಬುಡಕಟ್ಟು ಸಮುದಾಯದ ನಾಯಕಿ ಹಾಗೂ ಜಾರ್ಖಂಡ್ ರಾಜ್ಯದ ಮಾಜಿ ರಾಜ್ಯಪಾಲೆ ಶ್ರೀಮತಿ ದ್ರೌಪದಿ ಮುರ್ಮು ಆಯ್ಕೆಗೊಂಡಿರುವುದು ಸ್ವಾಗತಾರ್ಹ. ಈ ಹುದ್ದೆಗೆ ಇನ್ಫೋಸಿಸ್ ಫೌಂಡೇಷನ್ ಅಧ್ಯಕ್ಷೆ ಡಾ.ಸುಧಾಮೂರ್ತಿ, ಹಾಲಿ ಉಪ ರಾಷ್ಟ್ರಪತಿ ವೆಂಕಯ್ಯ ನಾಯ್ಡು ಸೇರಿದಂತೆ ಹಲವರ ಹೆಸರುಗಳು ಕೇಳಿ ಬರುತ್ತಿದ್ದರೂ ಸಹ, ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ನೇತೃತ್ವದ ಭಾರತೀಯ ಜನತಾ ಪಕ್ಷದ ಸಂಸದೀಯ ಮಂಡಳಿ ಶ್ರೀಮತಿ ದ್ರೌಪದಿ ಮುರ್ಮು ಅವರ ಹೆಸರನ್ನು ಅಂತಿಮಗೊಳಿಸುವುರೊಂದಿಗೆ ಎಲ್ಲಾ ಊಹಾಪೋಹಗಳಿಗೂ ತೆರೆ ಎಳೆದಿದೆ. ಇದೊಂದು ಅಚ್ಚರಿಯ ಆಯ್ಕೆ ಎನ್ನಬಹುದು.

ಶ್ರೀಮತಿ ದ್ರೌಪದಿ ಮುರ್ಮು ಬುಡಕಟ್ಟು ಸಮುದಾಯಗಳ ನಾಯಕಿಯಾಗಿ ಆ ಜನಾಂಗಗಳ ಅಭಿವೃದ್ಧಿಗೆ ಸಾಕಷ್ಟು ಶ್ರಮಿಸಿದ್ದಾರೆ. ಜೊತೆಗೆ ರಾಜಕೀಯದಲ್ಲೂ ಸಾಕಷ್ಟು ಪಳಗಿರುವ ಶ್ರೀಮತಿ ಮುರ್ಮು, 2015 ರಿಂದ 2021 ರವರೆಗೆ ಜಾರ್ಖಂಡ್ ರಾಜ್ಯದ ರಾಜ್ಯಪಾಲೆಯಾಗಿ ಕಾರ್ಯ ನಿರ್ವಹಿಸಿದ್ದಾರೆ.

ಆ ರಾಜ್ಯದಲ್ಲಿ ರಾಜ್ಯಪಾಲೆಯಾಗಿ ಐದು ವರ್ಷಗಳ ಅವಧಿಯನ್ನು ಮುಗಿಸಿದ ಮೊದಲ ರಾಜ್ಯಪಾಲೆ ಎಂಬ ಹೆಗ್ಗಳಿಕೆ ಅವರದು. ಅದಕ್ಕಿಂತ ಮುಂಚೆ ಅಂದರೆ, 2000–2002 ಅವಧಿಯಲ್ಲಿ ಅವರು ಒರಿಸ್ಸಾ (ಒಡಿಸ್ಸಾ) ರಾಜ್ಯದಲ್ಲಿ ಬಿಜೆಪಿ–ಬಿಜೆಡಿ ಮೈತ್ರಿಕೂಟದ ಸರ್ಕಾರದಲ್ಲಿ ಸಚಿವೆಯಾಗಿ ಕೆಲಸ ಮಾಡಿದ್ದಾರೆ. 2007 ರಲ್ಲಿ ಶ್ರೇಷ್ಠ ಶಾಸಕಿ ಎಂಬ ಪ್ರಶಸ್ತಿಯನ್ನು ಒರಿಸ್ಸಾ ವಿಧಾನ ಸಭೆಯ ಸದಸ್ಯರಿಂದ ಪಡೆದಿದ್ದಾರೆ. 64 ವರ್ಷದ ಉತ್ಸಾಹಶೀಲ ಮುರ್ಮು, ರಾಷ್ಟ್ರಪತಿ ಹುದ್ದೆಗೆ ಆಯ್ಕೆಗೊಳ್ಳಲಿರುವ ಮೊದಲ ಬುಡಕಟ್ಟು ಜನಾಂಗದ ಮಹಿಳೆ ಎಂಬ ಕೀರ್ತಿಗೂ ಪಾತ್ರರಾಗಲಿದ್ದಾರೆ. ವಿರೋಧ ಪಕ್ಷಗಳು ಈಗಾಗಲೇ ಮಾಜಿ ಕೇಂದ್ರ ಸಚಿವ ಯಶ್ವಂತ್ ಸಿನ್ಹಾ ಅವರನ್ನು ರಾಷ್ಟ್ರಪತಿ ಹುದ್ದೆಗೆ ತಮ್ಮ ಅಭ್ಯರ್ಥಿಯಾಗಿ ಘೋಷಿಸಿರುವುದರಿಂದ, ಸರ್ವ ಸಮ್ಮತವಾದ ಆಯ್ಕೆಗೆ ಅವಕಾಶವಿಲ್ಲ. ಆದರೆ, ರಾಷ್ಟ್ರಪತಿಯಂತಹ ಸಾಂವಿಧಾನಿಕ ಹುದ್ದೆಗೆ ಅವಿರೋಧವಾಗಿ ಆಯ್ಕೆಯಾದರೆ ಒಳ್ಳೆಯದು. ಉಪ ರಾಷ್ಟ್ರಪತಿ ಹುದ್ದೆಯನ್ನು ಪ್ರತಿ ಪಕ್ಷಗಳಿಗೆ ಬಿಟ್ಟುಕೊಟ್ಟು ರಾಷ್ಟ್ರಪತಿ ಹುದ್ದೆಗೆ ಅವಿರೋಧ ಆಯ್ಕೆಗೆ ಆಡಳಿತಾರೂಢ ಎನ್‌ಡಿಎ ಪ್ರಯತ್ನಿಸಬಹುದು. ಇದೊಂದು ಸತ್ ಸಂಪ್ರದಾಯವಾಗಲಿದೆ. ಈ ನಿಟ್ಟಿನಲ್ಲಿ ಆಡಳಿತ ಮತ್ತು ಪ್ರತಿ ಪಕ್ಷಗಳು ಚರ್ಚೆ ನಡೆಸಬೇಕಾಗಿದೆ.

–ಡಾ. ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಅಗ್ನಿ ಶಾಮಕ ದಳದ ಕಚೇರಿಗೆ ಕಾಯಕಲ್ಪ ಯಾವಾಗ?



ಮಾನ್ಯರೆ,

ಮೈಸೂರಿನ ಸರಸ್ವತಿಪುರಂನಲ್ಲಿರುವ ಅಗ್ನಿ ಶಾಮಕ ದಳದ ಕಛೇರಿಯ ಕೆಲವು ಭಾಗ ಕುಸಿದು ನಾಲ್ಕು ವರ್ಷಗಳೇ ಆಯಿತು. ಇದುವರೆಗೂ ಇದನ್ನು ದುರಸ್ಥಿಪಡಿಸಬೇಕು ಎಂಬ ಬದ್ಧತೆ ಆಗಲಿ, ಇಚ್ಛಾ ಶಕ್ತಿಯಾಗಲಿ ಸಂಬಂಧಪಟ್ಟ ಯಾವ ಅಧಿಕಾರಿಗಳು ಮತ್ತು ರಾಜಕಾರಣಿಗಳಿಗೆ ಇದ್ದಂತೆ ಕಾಣುತ್ತಿಲ್ಲ. ಅವರು ಯಾವಾಗಲೂ ಅನ್ಯ ಮಾರ್ಗದಲ್ಲಿ ಹೇಗೆ ಹಣ ಹೊಡೆಯಬಹುದು ಎಂಬ ಸಂಶೋಧನೆಯಲ್ಲಿ ತೊಡಗಿರುತ್ತಾರೆ. ಇದು ನಮ್ಮ ಸರ್ಕಾರದ ಆಡಳಿತ ವೈಖರಿಗೆ ಹಿಡಿದ ಕೈಗನ್ನಡಿಯಂತಿದೆ.

–ವಿ. ಕೇಶವಮೂರ್ತಿ, ಜ್ಯೋತಿಷ್ಯ ವಿದ್ವಾಂಸ, ಮೈಸೂರು.

ಹುಣಸೂರಿನಲ್ಲಿ ಇಂಟರ್‌ನೆಟ್ ಇಲ್ಲದೆ ಗ್ರಾಹಕರ ಪರದಾಟ

ಮಾನ್ಯರೆ,




ಬಿಎಸ್‌ಎನ್‌ಎಲ್ ನಿರ್ಲಕ್ಷತನದಿಂದ ತಾಲೂಕಿನಲ್ಲಿ ಕೆಲವು ಕಡೆ ಕಳೆದ ಒಂದು ವಾರದಿಂದ ಇಂಟರ್‌ನೆಟ್ ಸೌಲಭ್ಯ ವಿಲ್ಲದೆ ಗ್ರಾಹಕರು ಪರದಾಡುವಂತಾಗಿದೆ.

ಬಿಎಸ್‌ಎನ್‌ಎಲ್ ಖಾಸಗಿಯವರಿಗೆ ಪ್ರಾಂಚೈಸಿ ಕೊಟ್ಟಾಗಿನಿಂದ ದೂರವಾಣಿ ಮತ್ತು ನೇಟ್ ಸೌಲಭ್ಯಗಳನ್ನು ಗ್ರಾಹಕರಿಗೆ ನೀಡುವಲ್ಲಿ ವಿಫಲವಾಗಿದೆ. ಗ್ರಾಹಕರಿಗೆ ಸೌಲಭ್ಯ ನೀಡಲು ವಿಫಲವಾಗಿದ್ದರೂ ಮಾಸಿಕ ಬಿಲ್ ವಸೂಲಿ ಮಾಡುವಲ್ಲಿ ಬಿಎಸ್‌ಎನ್‌ಎಲ್ ಮುಂದಾಗಿದೆ. ಸಮಸ್ಯೆ ಬಗ್ಗೆ ಸ್ಥಳೀಯ ಬಿಎಸ್‌ಎನ್‌ಎಲ್ ಅಧಿಕಾರಿಗಳಿಗೆ ತಿಳಿಸಿದರೆ ಮೈಸೂರಿನತ್ತ ಕೈ ತೋರಿಸುತ್ತಾರೆ. ಜೊತೆಗೆ ನಾವು ಏನು ಮಾಡಲು ಸಾಧ್ಯವಿಲ್ಲ ನಿಮ್ಮಲ್ಲಿ ಸಮಸ್ಯೆ ಇದೆ ಸರಿಮಾಡಿಕೊಳ್ಳಿ ಎಂದು ಉಡಾಫೆ ಉತ್ತರ ನೀಡುತ್ತಾರೆ.

ಈ ಸಮಸ್ಯೆಯಿಂದಾಗಿ ಕಳೆದ ಒಂದು ವಾರದಿಂದ ಗ್ರಾಹಕರಿಗೆ ಸಾಕಷ್ಟು ಸಮಸ್ಯೆಗಳ ಹಾಗೂ ತೊಂದರೆಗಳ ಜೊತೆಗೆ ಗ್ರಾಹಕರ ವ್ಯವಹಾರಗಳಲ್ಲಿ ಸಾವಿರಾರು ರೂಪಾಯಿ ನಷ್ಟ ಉಂಟಾಗಿದೆ. ಇದಕ್ಕೆ ಯಾರು ಹೊಣೆ ಎಂಬುದೆ ಗ್ರಾಹಕರ ಪ್ರಶ್ನೆಯಾಗಿದೆ.

ಅದರಲ್ಲೂ ಸೇತುವೆ, ಆರ್.ಟಿ.ಓ ಕಛೇರಿ, ಮತ್ತು ಕೆ.ಹೆಚ್.ಬಿ ಕಾಲೋನಿಗಳ ವ್ಯಾಪ್ತಿಯಲ್ಲಿ ಕಳೆದ ಒಂದು ವಾರದಿಂದ ಇಂಟರ್‌ನೇಟ್ ಇಲ್ಲದೆ ವಾಣಿಜ್ಯ ವ್ಯವಹಾರಗಳಿಗೆ ತೊಡಕುಂಟಾಗಿ ಪರದಾಡುವಂತಾಗಿತ್ತು. ಈ ರೀತಿ ಸಮಸ್ಯೆಗಳು ಪದೆ ಪದೆ ಉದ್ಭವಿಸುತ್ತಿದ್ದರೆ ಬಿಎಸ್‌ಎನ್‌ಎಲ್ ತೊರೆದು ಬೇರೆ ನೆಟ್‌ವರ್ಕ್ ಅಶ್ರಯಿಸಬೇಕಾಗುತ್ತದೆ ಎಂದು ಬಿಎಸ್‌ಎನ್‌ಎಲ್ ಗ್ರಾಹಕರು ತಿಳಿಸುತ್ತಾರೆ. ಬಿಎಸ್‌ಎನ್‌ಎಲ್ ಅಧಿಕಾರಿಗಳು ಇದರ ಬಗ್ಗೆ ಗಮನಹರಿಸಿ ಗ್ರಾಹಕರ ಸಮಸ್ಯೆಯನ್ನು ಪರಿಹರಿಸಲು ಮುಂದಾಗಬೇಕೆಂದು ಮನವಿ.

–ಬಿಎಸ್‌ಎನ್‌ಎಲ್ ಗ್ರಾಹಕರು, ಹುಣಸೂರು.



ಕಾರ್ಕಳ ಆನಂದಭಟ್
ಮೊ.7676554198

ದಿಕ್ಕುದೆಸೆ

'ಅಗ್ನಿಪಥ್' ಯುವಜನರನ್ನು ಮಾಡಲಿದೆ ದೇಶಭಕ್ತ

ದೇಶದ ರಕ್ಷಣಾ ಪಡೆಗೆ ಯುವ ರಕ್ತ, ಹೊಸ ಉತ್ಸಾಹ ನೀಡಲು ಸೇನೆಯಲ್ಲಿ ನಾಲ್ಕು ವರ್ಷಗಳ ಅವಧಿಗೆ ಸೇವೆ ಸಲ್ಲಿಸಲು ಯುವಕರಿಗೆ ಅವಕಾಶ ನೀಡುವ ಮಹತ್ವದ 'ಅಗ್ನಿಪಥ್' ನೇಮಕಾತಿ ಯೋಜನೆಗೆ ಇತ್ತೀಚೆಗೆ ಕೇಂದ್ರ ಸರಕಾರ ಅನುಮೋದನೆ ನೀಡಿತು. ಈ ಮೂಲಕ ದೇಶದ ಯುವಜನಾಂಗದಲ್ಲಿ ಸೇನಾ ಶಿಸ್ತು ದೇಶಭಕ್ತಿಯೊಂದಿಗೆ ಶ್ರೇಷ್ಠ ನಾಗರಿಕರನ್ನಾಗಿ ಮಾಡುವ ಯೋಜನೆ ಜಾರಿಯಾಗಲಿದೆ. ಈ ಯೋಜನೆಯನ್ವಯ ದೇಶದ ಬಹುಪಾಲು ಯುವಕರಿಗೆ ಸೇನೆಯಲ್ಲಿ ನಿಗದಿತ ನಾಲ್ಕು ವರ್ಷಗಳ ಕಾಲ ಸೇವೆ ಸಲ್ಲಿಸುವ ಅವಕಾಶವಿರುತ್ತದೆ. ಈ ಯೋಜನೆಯಲ್ಲಿ ಸೇರಲು ವಯೋಮಿತಿ 17.5 ಯಿಂದ 21 ವರ್ಷಗಳಾಗಿದ್ದು, ಸೇನೆಯ ಮೂರು ವಿಭಾಗಕ್ಕೆ ಸೇರ್ಪಡೆಯಾಗಬಹುದು. ಕೇಂದ್ರೀಕೃತ ಆನ್‌ಲೈನ್ ವ್ಯವಸ್ಥೆಯಲ್ಲಿ ಮಾನ್ಯತೆ ಪಡೆದ ಐಟಿಐನಂತಹ ಸಂಸ್ಥೆಗಳಲ್ಲಿ ಸೇನಾ ನೇಮಕಾತಿ ರ್‍ಯಾಲಿಗಳನ್ನು, ಕ್ಯಾಂಪಸ್ ಸಂದರ್ಶನಗಳನ್ನು ನಡೆಸಿ ಆಯ್ಕೆ ಮಾಡಲಾಗುವುದು. ದೇಶದ ಎಲ್ಲಾ ವರ್ಗಗಳಿಂದ ಬರುವ ಯುವಕರಲ್ಲಿ ಅರ್ಹರನ್ನು ಪರಿಗಣಿಸಲಾಗುವುದು. ವೈದ್ಯಕೀಯ ಅರ್ಹತೆ ಮತ್ತು ಕಠಿಣ ತರಬೇತಿಗೆ ಸೇನಾ ಮಾನದಂಡವನ್ನು ಅನುಸರಿಸಲಾಗುವುದು. ಸಂಪೂರ್ಣ ಆಯ್ಕೆ ಪ್ರಕ್ರಿಯೆಯನ್ನು ಸಶಸ್ತ್ರ ಪಡೆಗಳ ಅಧಿಕಾರಿಗಳೇ ನಡೆಸುತ್ತಾರೆ. ಅಗ್ನಿವೀರರಿಗೆ ವಿಶಿಷ್ಟ ಶ್ರೇಣಿ (Rank) ನೀಡಲಾಗುತ್ತದೆ. ನಾಲ್ಕು ವರ್ಷಗಳಲ್ಲಿ ಅತ್ಯುತ್ತಮ ಸಾಧನೆ ತೋರಿದ ಶೇ 25ರಷ್ಟು ಅಗ್ನಿವೀರರನ್ನು ಮಂದಿನ ಹದಿನೈದು ವರ್ಷಗಳ ಅವಧಿಗೆ ನಿಯಮಿತ ಸೇನೆಗೆ ಭರ್ತಿ ಮಾಡಲಾಗುವುದು. ಈ ಎಲ್ಲಾ ಆಯ್ಕೆ ಪ್ರಕ್ರಿಯೆಗಳು ಪಾರದರ್ಶಕ ಮತ್ತು ಅರ್ಹತಾ ಆಧಾರಿತವಾಗಿರುತ್ತದೆ.

ಸರಕಾರದ ಈ ಐತಿಹಾಸಿಕ ಉಪಕ್ರಮವು (Initiate) ಯುವಜನರಲ್ಲಿ ದೇಶಭಕ್ತಿ ಜಾಗೃತಗೊಳಿಸಿ ದೇಶಕ್ಕಾಗಿ ಸೇನಾ ಸಮವಸ್ತ್ರ ಧರಿಸಲು ಅಭಿಮಾನಪಡುವವರಿಗೆ ಸಂಕ್ಷಿಪ್ತ ಅವಧಿಗೆ ದೇಶಸೇವೆ ಮಾಡಲು ಅವಕಾಶ ನೀಡುತ್ತದೆ. ಇನ್ನೊಂದು ನಿಟ್ಟಿನಲ್ಲಿ ಭಾರತೀಯ ಸೇನೆಯ ಸರಾಸರಿ ವಯೋಮಾನ ಹೆಚ್ಚುತ್ತಿದ್ದು, ಶೇ. 60ಕ್ಕಿಂತ ಹೆಚ್ಚು ಸೈನಿಕರ ವಯಸ್ಸು ಮೂವತ್ತು ವರ್ಷ ಮೀರುತ್ತಿದ್ದು, ಸೇನೆಯ ಸಾಮರ್ಥ್ಯ, ಕ್ಷಮತೆ ಮತ್ತು ಭವಿಷ್ಯದಲ್ಲಿ ದೇಶದ ರಕ್ಷಣೆಯ ದೃಷ್ಟಿಯಿಂದ ಒಳ್ಳೆಯ ಬೆಳವಣಿಗೆಯಲ್ಲ. ಈ ದೃಷ್ಟಿಯಿಂದ ಅಗ್ನಿಪಥ್ ಅತ್ಯಂತ ಸೂಕ್ತ ಯೋಜನೆಯಾಗಿದೆ. ಭಾರತೀಯ ಸೇನೆ 1978 ರಲ್ಲಿ ಈಗಿನದಕ್ಕಿಂತ ಹೆಚ್ಚು ತಾರುಣ್ಯದಿಂದಿತ್ತು. ಆಗಿನ ಸೇನೆಯಲ್ಲಿ ಶೇ. 72.6 ಸೈನಿಕರು ಮತ್ತು 1.6% ರಷ್ಟು ಅಧಿಕಾರಿಗಳು ಹದಿಹರೆಯದವರಾಗಿದ್ದರು. ಪ್ರಸ್ತುತ ಸಿಪಾಯಿಗಳ ಪ್ರಮಾಣ ಶೇ.40ಕ್ಕಿಂತ ಕಡಿಮೆಯಾಗಿದೆ. ಇದು ಅಪೇಕ್ಷಿತ ಅನುಪಾತದಲ್ಲಿಲ್ಲ. ಕಠಿಣ ಹವಾಮಾನವಿರುವ ಅತ್ಯಂತ ಎತ್ತರದ ಪರ್ವತೀಯ ಪ್ರದೇಶಗಳು, ಅತೀ ಹೆಚ್ಚು ತಾಪಮಾನವಿರುವ ಮರುಭೂಮಿ, ಸುದೀರ್ಘ ಕರಾವಳಿ ಗಡಿಗಳನ್ನು ಹೊಂದಿರುವ ಪ್ರದೇಶಗಳಲ್ಲಿ ಇವರನ್ನು ನೆಲೆಗೊಳಿಸುವುದು ಅತ್ಯಂತ ಸಮಸ್ಯಾದಾಯಕವಾಗಿದೆ. ಪ್ರಸ್ತುತ ಕೆಳಹಂತದ ಸಿಪಾಯಿಗಳು ಮತ್ತು ಬಡ್ತಿಯಿಂದಾಗಿ ಮೇಲಿನ ಹಂತಕ್ಕೇರಿದ ಸೇನಾಧಿಕಾರಿಗಳ ಮಧ್ಯೆ ಅಸಹಜ, ಅಸಮಾನತೆ, ಅಂತರ ಕಂಡುಬರುತ್ತಿದೆ. ಭಾರತದ ಸೇನೆ ನಿರಂತರವಾಗಿ ಬಲಿಷ್ಠ, ಯುವ ಹಾಗೂ ಅತ್ಯಂತ ಕ್ಷಮತೆ, ಸಾಮರ್ಥ್ಯದಿಂದಿರಲು ಹಾಗೂ ಸೇನೆಯೊಳಗಿನ ವಯೋ ಅಂತರ ಸರಿಪಡಿಸಲು ಅಗ್ನಿಪಥ್ ಅತ್ಯಂತ ಪರಿಣಾಮಕಾರಿಯಾಗಿದ್ದು, ಯುವಜನತೆ ನಿರಂತರವಾಗಿ ಸೇನೆಗೆ ಸೇರ್ಪಡೆಯಾಗಲು ಸೂಕ್ತ ಯೋಜನೆಯಾಗಿದೆ. ಈ ಯೋಜನೆಯಿಂದ ಸೇನೆಯಲ್ಲಿ ಉತ್ಸಾಹ ಮತ್ತು ವಿವೇಕ (Josh-Hosh) ಹಾಗೂ ತಾರುಣ್ಯ (youthfullness) ಮತ್ತು ಅನುಭವ (experience) ಅತ್ಯುತ್ತಮ ಸಮನ್ವಯವಾಗಲಿದೆ.

ವಿಶ್ವದಲ್ಲಿ ಮಿಲಿಟರಿ ವ್ಯವಸ್ಥೆಯಲ್ಲಾಗುತ್ತಿರುವ ಪರಿವರ್ತನೆಗಳು

ಜಗತ್ತಿನ ಎಲ್ಲ ಪ್ರಬಲ ರಾಷ್ಟ್ರಗಳ ಮಿಲಿಟರಿ ವ್ಯವಸ್ಥೆಯಲ್ಲಿ ತೀವ್ರಗತಿಯಲ್ಲಿ ಪರಿವರ್ತನೆ ಮಾಡಲಾಗುತ್ತಿದೆ. ಜಗತ್ತಿನ ಪ್ರಬಲ ರಾಷ್ಟ್ರಗಳಿಗೆ ತಮ್ಮ ಯೋಧರಿಗೆ ನೀಡಬೇಕಾದ ವೇತನ, ಭತ್ಯೆಗಳು ನಿವೃತ್ತಿ ನಂತರ ನೀಡಬೇಕಾದ ಪಿಂಚಣಿ ಹಾಗೂ ಇನ್ನಿತರ ಲಾಭಗಳಿಗಾಗಿ ರಾಷ್ಟ್ರದ ಬಜೆಟ್‌ನಲ್ಲಿ ಬಹು ದೊಡ್ಡ ಪಾಲನ್ನು ಪ್ರತ್ಯೇಕಿಸಬೇಕಾದ ಪರಿಸ್ಥಿತಿ ಇದೆ. ಇದು ಸರ್ಕಾರಗಳ ಹಣಕಾಸು ಪರಿಸ್ಥಿತಿಯ ಮೇಲೆ ನಿರಂತರವಾಗಿ ಒತ್ತಡ ಉಂಟು ಮಾಡುತ್ತಿದ್ದು, ಚಿಂತೆಗೆ ಕಾರಣವಾಗಿದೆ.

ಭವಿಷ್ಯದಲ್ಲಿ ನಡೆಯಬಹುದಾದ ಯುದ್ಧಗಳಲ್ಲಿ ವಿಜ್ಞಾನ, ತಂತ್ರಜ್ಞಾನಗಳ ಬಳಕೆಯಾಗಲಿದ್ದು, ಸೈನಿಕರು ಪ್ರಮುಖರಾಗಿದ್ದರೂ ಭಾರಿ ಸಂಖ್ಯಾಬಲದ ಅವಶ್ಯಕತೆ ಇರುವುದಿಲ್ಲ. ಯುದ್ಧಗಳಲ್ಲಿ ನಿಸ್ತಂತು, ಡಿಜಿಟಲ್ ಸಾಧನಗಳು, ಸ್ವಯಂ ನಿರ್ದೇಶಿತ, ಸಂಚಾಲಿತ ಶಸ್ತ್ರಗಳು ನಿರ್ಣಾಯಕವಾಗಲಿವೆ. ಯುದ್ಧ ತಂತ್ರಗಳ ಮಾದರಿಯಲ್ಲೂ ಕೃತಕ ಬುದ್ಧಿಮತ್ತೆ (Artificial Intelligence), ಸ್ವಾಯತ್ತ ವ್ಯವಸ್ಥೆ ಉಪಗ್ರಹ ಆಧಾರಿತ ಕಣ್ಗಾವಲು, ಪರಿಶೋಧಕಗಳು, ಬೇಹುಗಾರಿಕಾ ವ್ಯವಸ್ಥೆಗಳು ಪ್ರಮುಖ ಪಾತ್ರ ವಹಿಸಲಿವೆ. ಸೇನೆಗಿಂತ ಸಾಧನಗಳು, ಶಸ್ತ್ರಾಸ್ತ್ರಗಳು ಯುದ್ಧಗಳ ಫಲಿತಾಂಶ ನಿರ್ಧರಿಸಲಿವೆ. ಈ ಹಿನ್ನೆಲೆಯಲ್ಲಿ ಪ್ರಬಲ ರಾಷ್ಟ್ರಗಳು ತಮ್ಮ ಸೇನಾಬಲಗಳನ್ನು ಕಡಿಮೆ ಮಾಡಿ ಆಧುನಿಕ ಯುದ್ಧ ವ್ಯವಸ್ಥೆಗಳಿಗೆ ಖರ್ಚು ಮಾಡುತ್ತಿವೆ.



> "ಭವಿಷ್ಯದಲ್ಲಿ ನಡೆಯಬಹುದಾದ ಯುದ್ಧಗಳಲ್ಲಿ ವಿಜ್ಞಾನ, ತಂತ್ರಜ್ಞಾನಗಳ ಬಳಕೆಯಾಗಲಿದ್ದು, ಸೈನಿಕರು ಪ್ರಮುಖರಾಗಿದ್ದರೂ ಭಾರಿ ಸಂಖ್ಯಾಬಲದ ಅವಶ್ಯಕತೆ ಇರುವುದಿಲ್ಲ. ಯುದ್ಧಗಳಲ್ಲಿ ನಿಸ್ತಂತು, ಡಿಜಿಟಲ್ ಸಾಧನಗಳು, ಸ್ವಯಂ ನಿರ್ದೇಶಿತ, ಸಂಚಾಲಿತ ಶಸ್ತ್ರಗಳು ನಿರ್ಣಾಯಕವಾಗಲಿವೆ. ಯುದ್ಧ ತಂತ್ರಗಳ ಮಾದರಿಯಲ್ಲೂ ಕೃತಕ ಬುದ್ಧಿಮತ್ತೆ (Artificial Intelligence), ಸ್ವಾಯತ್ತ ವ್ಯವಸ್ಥೆ ಉಪಗ್ರಹ ಆಧಾರಿತ ಕಣ್ಗಾವಲು, ಪರಿಶೋಧಕಗಳು, ಬೇಹುಗಾರಿಕಾ ವ್ಯವಸ್ಥೆಗಳು ಪ್ರಮುಖ ಪಾತ್ರ ವಹಿಸಲಿವೆ. ಸೇನೆಗಿಂತ ಸಾಧನಗಳು, ಶಸ್ತ್ರಾಸ್ತ್ರಗಳು ಯುದ್ಧಗಳ ಫಲಿತಾಂಶ ನಿರ್ಧರಿಸಲಿವೆ. ಈ ಹಿನ್ನೆಲೆಯಲ್ಲಿ ಪ್ರಬಲ ರಾಷ್ಟ್ರಗಳು ತಮ್ಮ ಸೇನಾಬಲಗಳನ್ನು ಕಡಿಮೆ ಮಾಡಿ ಆಧುನಿಕ ಯುದ್ಧ ವ್ಯವಸ್ಥೆಗಳಿಗೆ ಖರ್ಚು ಮಾಡುತ್ತಿವೆ.

ಜಾಗತಿಕ ಮಟ್ಟದಲ್ಲಿ ಸೇನಾಬಲಗಳ ಸೇವಾವಧಿ ಎರಡರಿಂದ ಎಂಟು ವರ್ಷಗಳಾಗಿರುತ್ತವೆ. ಆನಂತರ ಆಯ್ಕೆ ಆಧಾರದಲ್ಲಿ ಸೇವಾ ಮುಂದುವರಿಕೆ ಅಥವಾ ಕಾದಿಟ್ಟ ವರ್ಗಕ್ಕೆ ಸೇರಬಹುದು. ಚೀನಾದ ಪೀಪಲ್ಸ್ ಲಿಬರೇಷನ್ ಆರ್ಮಿಯಲ್ಲಿ ಈ ಪ್ರಕ್ರಿಯೆ 1980 ರಿಂದ ಪ್ರಾರಂಭವಾಗಿದ್ದು, ಆ ವರ್ಷದಿಂದ ಸೇನಾ ಸಂಖ್ಯೆಯನ್ನು 4.5 ಮಿಲಿಯನ್‌ನಿಂದ 2.0 ಮಿ.ಗೆ ಇಳಿಸಿ ಆಧುನೀಕರಣಗೊಳಿಸಲಾಗುತ್ತಿದೆ. ಅಮೆರಿಕ, ಬ್ರಿಟನ್‌ನಲ್ಲಿ ಸೈನಿಕರ ಸೇವಾವಧಿ ಅತ್ಯಂತ ಸಂಕ್ಷಿಪ್ತ ಅವಧಿಗಿದೆ. ಇಸ್ರೇಲ್‌ನಲ್ಲಿ ಸೈನಿಕರ ಸೇವಾವಧಿ ಪುರುಷರಿಗೆ ಮೂವತ್ತು ತಿಂಗಳು ಮತ್ತು ಮಹಿಳೆಯರಿಗೆ ಇಪ್ಪತ್ತೆರಡು ತಿಂಗಳುಗಳಾದರೂ ಇವರಿಗೆ ಇಸ್ರೇಲ್ ಸಮಾಜ ವಿಶೇಷ ಗೌರವ ನೀಡುತ್ತದೆ. ಭಾರತ ಸರ್ಕಾರವು ಹೆಚ್ಚುತ್ತಿರುವ ಸೇನಾ ವೆಚ್ಚದ ಹೊರೆಯನ್ನು ಇಳಿಸುವುದರೊಂದಿಗೆ ಸೇನೆಗೆ ತಂತ್ರಜ್ಞಾನ ಪರಿಣತಿ ಹೊಂದಿರುವ ಹೊಸ ಯುವ ರಕ್ತವನ್ನು ದೊಡ್ಡ ಸಂಖ್ಯೆಯಲ್ಲಿ ಸೇರ್ಪಡೆಗೊಳಿಸುವುದು ತನ್ಮೂಲಕ ಸೇನೆಯ ಸರಾಸರಿ ವಯೋಮಿತಿಯನ್ನು ಪ್ರಸಕ್ತ ಮೂವತ್ತೆರಡು ವರ್ಷದಿಂದ 25 –26 ವರ್ಷಕ್ಕೆ ಇಳಿಸುವುದು ಅಗ್ನಿಪಥ್ ಯೋಜನೆಯ ಉದ್ದೇಶವಾಗಿದೆ.

ಅಗ್ನಿವೀರರಿಗೆ ದೊರೆತ ಸೌಲಭ್ಯಗಳು: ವೇತನ ಹಾಗೂ ಇತರ ಭತ್ಯೆಗಳನ್ನು ಗಮನಿಸಿದಲ್ಲಿ ಈ ಯೋಜನೆಯು ಉದಾರ ಹಾಗೂ ಆಕರ್ಷಕವಾಗಿದೆ. ಪ್ರಥಮ ವರ್ಷದಲ್ಲಿ ಮಾಸಿಕ ವೇತನ ರೂ. 30,000 ದಿಂದ ನಾಲ್ಕನೇ ವರ್ಷದಲ್ಲಿ ರೂ. 40000 ದೊರೆಯಲಿದೆ. ಸೇವಾವಧಿ ಮುಕ್ತಾಯವಾಗುವಾಗ ರೂ. 11:71 ಲಕ್ಷ ರೂ. ಸೇವಾನಿಧಿಯಾಗಿ ದೊರೆಯುವುದು. ಈ ನಿಧಿಗೆ ಮಾಸಿಕ ವೇತನದಿಂದ ಶೇ.30 ವರ್ಗಾಯಿಸಲಾಗುವುದು ಹಾಗೂ ಇಷ್ಟೆ ಪ್ರಮಾಣದ ಮೊತ್ತ ಸರಕಾರ ನೀಡುವುದು. ಈ ಮೂಲಕ ಸೇವಾ ನಿರ್ಗಮನದ ವೇಳೆ ತೆರಿಗೆ ವಿನಾಯ್ತಿಯುಳ್ಳ ನಿಧಿ ದೊರೆಯುವುದು. ಇದನ್ನು ಯಾವುದಾದರೂ ಒಳ್ಳೆಯ ಯೋಜನೆಯಲ್ಲಿ ತೊಡಗಿಸಲು ಅಥವಾ ಸ್ವಯಂ ಉದ್ಯೋಗ ಮಾಡಲು ಅವಕಾಶ ನೀಡುವುದು. ಅಗ್ನಿವೀರರಿಗೆ 48 ಲಕ್ಷ ರೂ.ನ ವಿಮಾ ಭದ್ರತೆ ಇರುವುದು. ಸೇವಾವಧಿಯಲ್ಲಿ ಮೃತಪಟ್ಟಲ್ಲಿ ರೂ. 44 ಲಕ್ಷ ರೂ. ಪರಿಹಾರ ಹಾಗೂ ಅಂಗವೈಕಲ್ಯಕ್ಕೆ ಅನುಕ್ರಮವಾಗಿ ರೂ. 44/25/15 ಲಕ್ಷ ಪರಿಹಾರ ದೊರೆಯುವುದು. ಸೇವಾವಧಿ ನಂತರ ಇವರಿಗೆ ವಿಶೇಷ ಅಗ್ನಿವೀರ ಅರ್ಹತಾ ಪ್ರಮಾಣ ಪತ್ರ ನೀಡಲಾಗುತ್ತದೆ. ಈ ಪ್ರಮಾಣ ಪತ್ರದ ಆಧಾರದಲ್ಲಿ ವಿಶ್ವಾಸ ಮತ್ತು ಶಿಸ್ತಿನ ಮಾನವ ಸಂಪನ್ಮೂಲದ ರೂಪದಲ್ಲಿ ದೇಶಾದ್ಯಂತ ಕಾರ್ಪೊರೇಟ್ ಹಾಗೂ ಇತರ ಸಂಸ್ಥೆಗಳಲ್ಲಿ ಉದ್ಯೋಗ ನೀಡುವುದಕ್ಕೆ ಅವಕಾಶವಿರುತ್ತದೆ. ಸೇವಾ ನಂತರ ಉನ್ನತ ಶಿಕ್ಷಣ ಪಡೆಯುವ ಅವಕಾಶವಿರುತ್ತದೆ.


ಅಗ್ನಿಪಥ್ ಯೋಜನೆಯಲ್ಲಿ ಅವಧಿ ಮುಗಿದ ನಂತರ ಈ ಯುವ ಸೈನಿಕರು ಸಮಾಜಕ್ಕೆ ಅಪಾಯವಾಗುತ್ತಾರೆಂಬುದು ಪೊಳ್ಳುವಾದವಾಗಿದೆ. ಸೇನಾಧಿಕಾರಿಗಳು ತಿಳಿಸುವಂತೆ ಈವರೆಗೆ ಮೂವತ್ತನೇ ವಯಸ್ಸಿನ ಸೇವಾವಧಿ ಮುಗಿದು ನಿವೃತ್ತರಾಗಿರುವ ಸೈನಿಕರು ಸಮಾಜಕ್ಕೆ ಅಪಾಯಕಾರಿಯಾಗಿರುವ ಉದಾಹರಣೆಗಳಿಲ್ಲ. ಅಗ್ನಿ ವೀರರಂತು ಇನ್ನೂ ಯುವಕರಾಗಿದ್ದು ಉತ್ತಮ ಕೌಶಲ್ಯ, ಶಿಸ್ತು, ತರಬೇತಿ ಪಡೆಯುವುದರಿಂದ ಸಮಾಜದಲ್ಲಿ ಅತ್ಯಂತ ಶಿಸ್ತಿನ ಜೀವನ ನಡೆಸುತ್ತಾರೆಂಬುದು ಸೇನೆ ಹಾಗೂ ಸರಕಾರದ ವಿಶ್ವಾಸವಾಗಿದೆ. ಸೇನೆಯ ಪ್ರಕಾರ ಜೀವನದಲ್ಲಿ ಓರ್ವ ವ್ಯಕ್ತಿ ಕೇವಲ ಒಂದು ಬಾರಿ ಸೇನಾ ಸಮವಸ್ತ್ರ ಧರಿಸಿ ತಿರಂಗಾಗೆ ಸೆಲ್ಯೂಟ್ ನೀಡಿದಲ್ಲಿ ಆತ ಎಂದಿಗೂ ದೇಶಕ್ಕೆ ವಿರೋಧ ಮಾಡುವ ಕೃತ್ಯಗಳಲ್ಲಿ ತೊಡಗುವುದಿಲ್ಲ. ಕಾಂಗ್ರೆಸ್, ಎಡಪಕ್ಷಗಳು, ಕೆಲವು ಬುದ್ಧಿಜೀವಿಗಳು, ಸೇನಾ ಅಕಾಡೆಮಿ ಮಾಫಿಯಾಗಳು ಈ ಯೋಜನೆಯನ್ನು ವಿರೋಧಿಸಿದ್ದಾರೆ. ಕಾಂಗ್ರೆಸ್ ದೇಶದ ಭದ್ರತೆಗೆ ಯಾವತ್ತೂ ಲಕ್ಷ್ಯ ವಹಿಸಲಿಲ್ಲ. ಸೇನೆಗೆ ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ನೀಡಲಿಲ್ಲ. ಒಂದು ಶ್ರೇಣಿ ಒಂದು ಪಿಂಚಣಿ (OROP) ನೀಡುವಲ್ಲಿ ಕಾಂಗ್ರೆಸ್ ನಿರಂತರವಾಗಿ ಸೇನೆಯನ್ನು ವಂಚಿಸಿತು. ಗಡಿಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲಿಲ್ಲ. ಸೈನಿಕರಿಗೆ ಸಿಯಾಚಿನ್ ಹಿಮ ಪ್ರದೇಶದಲ್ಲಿ ಚಳಿಯನ್ನು ತಡೆಯುವ ಜಾಕೆಟ್‌ಗಳನ್ನಾಗಲಿ ಬುಲೆಟ್ ಪ್ರೂಫ್ ಶಿರಸ್ತ್ರಾಣಗಳಾಗಲಿ, ಜಾಕೆಟ್‌ಗಳಾಗಲಿ ಒದಗಿಸಲಿಲ್ಲ. ಸರ್ಜಿಕಲ್ ಸ್ಟ್ರೈಕ್‌ಗೆ ಸಂಬಂಧಿಸಿದಂತೆ ಸೇನಾ ಸಾಮರ್ಥ್ಯ ಪ್ರಶ್ನಿಸಿತು. ಜಿ. ಬಿಪಿನ್ ರಾವತ್‌ರಿಗೆ ಗಲ್ಲಿ ಕಾ ಗೂಂಡಾ ಎಂದು ಅವಮಾನಿಸಿದರು. ಈ ರೀತಿ ಸೇನೆಯ ಬಗ್ಗೆ ನಿರ್ಲಕ್ಷ್ಯ ತೋರಿದ, ಅಪಮಾನ ಮಾಡಿದ ಕಾಂಗ್ರೆಸ್ ಹಾಗೂ ಅವರ ಮಿತ್ರರು ಈ ರೀತಿಯ ಯೋಜನೆ ವಿರೋಧಿಸಿರುವುದು ಸಹಜವಾಗಿದೆ. ಜನಸಾಮಾನ್ಯರು ಇಲ್ಲಿ ತಿಳಿಯಬೇಕಾದ ಸಂಗತಿಯೆಂದರೆ ಕಾಂಗ್ರೆಸ್ ಹಾಗೂ ಮಿತ್ರರು ಯಾವುದನ್ನು ವಿರೋಧಿಸುತ್ತಾರೋ ಅವು ದೇಶದ ಹಿತದೃಷ್ಟಿಯಿಂದ ಉತ್ತಮ ಯೋಜನೆಗಳೆಂದು ತಿಳಿಯಬಹುದು.

ಅಗ್ನಿಪಥ್ ಯೋಜನೆಯ ಸಕಾರಾತ್ಮಕ ಅಂಶಗಳು: ಈ ಯೋಜನೆಯ ಸಕಾರಾತ್ಮಕ ಅಂಶವೆಂದರೆ ಇದರಲ್ಲಿ ಯುವಜನತೆಗೆ ಅಸಂಖ್ಯಾತ ಅವಕಾಶಗಳು ಸಿಗುವುದರೊಂದಿಗೆ ನಾಗರಿಕ ಸಮಾಜಕ್ಕೆ ಸೇನೆಯ ಶಕ್ತಿ ನೀಡಿದಂತಾಗುತ್ತದೆ. ನಿಷ್ಕ್ರೀಯವಾಗಿರುವ ಯುವಕರು ಭಾರತದ ಸಶಸ್ತ್ರ ಸೇನಾಬಲದ ಪರಂಪರೆಯೊಳಗೆ ಸೇರಿ ಶ್ರೇಷ್ಠ ಸೇನಾಪ್ರತಿನಿಧಿಗಳಾಗುತ್ತಾರೆ. ಭಾರತೀಯ ಸೇನಾ ಬಲಗಳು ದೇಶದ ಯಾವುದೇ ಜಾತಿ, ಧರ್ಮ, ಸಮುದಾಯ, ಭಾಷೆ, ಪ್ರಾಂತೀಯ ಭಾವನೆಗಳನ್ನು ಮೀರಿ ದೇಶಭಕ್ತಿಯ ಭಾವನೆಯಿಂದ ಪ್ರೇರಿತವಾಗಿವೆ. ಅಗ್ನಿವೀರರನ್ನು ಇದೇ ಮಾದರಿಯಲ್ಲಿ ರೂಪಿಸುವ ಮೂಲಕ ಅವರಲ್ಲಿ ಬಲವಾದ ರಾಷ್ಟ್ರೀಯ ಭಾವನೆ, ಶಿಸ್ತು, ದೇಶಭಕ್ತಿ, ಏಕತೆಯನ್ನು ಮೂಡಿಸಲಿದೆ.

ಎನ್‌ಇಪಿ ವಿರೋಧಿಸಿದ ಶಕ್ತಿಗಳೇ ಪಠ್ಯ ಪರಿಷ್ಕರಣೆ ವಿರೋಧಿಸುತ್ತಿವೆ

• ಉನ್ನತ ಶಿಕ್ಷಣ ಸಚಿವ ಡಾ. ಅಶ್ವತ್ಥನಾರಾಯಣ ತರಾಟೆ • ನಮ್ಮತನ ಕಲಿಸುವಂತಹ ಶಿಕ್ಷಣ ರೂಪಿಸುವ ಅನಿವಾರ್ಯತೆ ಪ್ರತಿಪಾದನೆ

ಬೆಂಗಳೂರು, ಜೂ.24(ಕೆಎಂಶಿ)– ನೂತನ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೆ ತಂದಾಗ ಯಾವ ಶಕ್ತಿಗಳು ವಿನಾ ಕಾರಣ ಹುಯಿಲೆಬ್ಬಿಸಿದವೋ ಅಂತಹ ವಿಚ್ಛಿದ್ರಕಾರಿ ಶಕ್ತಿಗಳೇ ಈಗಲೂ ಪಠ್ಯ ಪುಸ್ತಕ ಪರಿಷ್ಕರಣೆಯ ವಿಚಾರದಲ್ಲಿ ಅನಗತ್ಯವಾಗಿ ಗಲಾಟೆ ಮಾಡುತ್ತಿವೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಹೇಳಿದ್ದಾರೆ.



'ಮಂಥನ' ಬಳಗವು ಏರ್ಪಡಿಸಿದ್ದ 'ಪಠ್ಯ ಪುಸ್ತಕ ಪರಿಷ್ಕರಣೆ– ಒಂದು ವಿಶ್ಲೇಷಣೆ' ಸಂವಾದದಲ್ಲಿ ಮಾತನಾಡಿದ ಅವರು, 'ಪಠ್ಯ ಮರುಪರಿಷ್ಕರಣೆ ಮಾಡಿದ ಕೂಡಲೇ ಅದನ್ನು ಸಾರ್ವಜನಿಕವಾಗಿ ಮುಕ್ತಗೊಳಿಸಲಾಗಿತ್ತು. ಈಗ ಕೂಗೆಬ್ಬಿಸುತ್ತಿರುವವರು ಆಗ ಏನು ಮಾಡುತ್ತಿದ್ದರು' ಎಂದು ಪ್ರಶ್ನಿಸಿದರು.

'ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ನಮ್ಮತನವನ್ನು ಕಲಿಸುವಂತಹ ಶಿಕ್ಷಣ ಕ್ರಮವನ್ನು ರೂಪಿಸಬೇಕಾಗಿತ್ತು. ಆದರೆ, ಕಾಂಗ್ರೆಸ್ ಪಕ್ಷದ ದೆಸೆಯಿಂದಾಗಿ ನಮ್ಮ ಮೇಲೆ ಸಾವಿರಾರು ವರ್ಷ ದೌರ್ಜನ್ಯ ಎಸಗಿದ ಮೊಘಲರು ಮತ್ತು ಬ್ರಿಟಿಷರ ಬಗ್ಗೆಯೇ ಗುಣಗಾನವಿರುವಂತಹ ಪಠ್ಯಕ್ರಮಗಳನ್ನು ಓದಬೇಕಾಗಿ ಬಂದಿದ್ದು ದುರಂತ' ಎಂದು ಅವರು ಪ್ರತಿಪಾದಿಸಿದರು.

'ಎನ್‌ಇಪಿ ಘೋಷಿಸಿದಾಗ ಕೆಲವು ವಿಧ್ವಂಸಕ ಮನೋಭಾವದ ಗುಂಪುಗಳು, ಇದು ದಲಿತರಿಗೆ ವಿರುದ್ಧವಾಗಿದೆ, ಅಲ್ಪಸಂಖ್ಯಾತರಿಗೆ ವಿರುದ್ಧವಾಗಿದೆ ಎಂದೆಲ್ಲ ಪುಕಾರು ಹಬ್ಬಿಸಿದರು. ಈಗ ಅಂಥವೇ ಶಕ್ತಿಗಳು ಜಾತಿ, ಸಮುದಾಯ, ಭಾಷೆ ಇತ್ಯಾದಿಗಳ ಹೆಸರಿನಲ್ಲಿ ಜನರನ್ನು ಒಡೆಯುವ ಕೆಲಸ ಮಾಡುತ್ತಿವೆ. ಎಲ್ಲಕ್ಕಿಂತ ದೇಶ ಮೊದಲು ಎನ್ನುವ ಸತ್ಯವನ್ನು ಇವರೆಲ್ಲ ಅರಿಯಬೇಕು' ಎಂದು ಅವರು ಒತ್ತಿ ಹೇಳಿದರು. 'ರಾಜ್ಯದ ಮತದಾರರು ಬಿಜೆಪಿಗೆ ಜನಾದೇಶ ಕೊಟ್ಟಿದ್ದಾರೆ. ನಮ್ಮತನ ವನ್ನು ಕಲಿಸುವಂತಹ ಪಠ್ಯಕ್ರಮವನ್ನು ರೂಪಿಸುವುದು ಕೂಡ ಈ ಜನಾದೇಶಕ್ಕೆ ಬೆಲೆ ಕೊಟ್ಟೇ ಮಾಡಿರುವ ಕೆಲಸವಾಗಿದೆ. ಭಾರತದ ವಿರುದ್ಧ ಕ್ರೌರ್ಯವನ್ನೆಸಗಿದವರ ಬಗ್ಗೆ ವೀರಾವೇಶದ ಬರಹಗಳನ್ನು ಓದುವುದು ಇನ್ನಾದರೂ ನಿಲ್ಲಬೇಕು' ಎಂದು ಅವರು ಅಭಿಪ್ರಾಯಪಟ್ಟರು.

'ಯಾವುದೇ ಒಂದು ದೇಶದ ಆರ್ಥಿಕ ಪ್ರಗತಿಗಿಂತ ಅಲ್ಲಿನ ಶಿಕ್ಷಣ ಕ್ರಮ ಹೇಗಿದೆ ಎನ್ನುವುದು ಮುಖ್ಯ. ಪ್ರಪಂಚದ ಯಾವುದೇ ಮೂಲೆಗೆ ಹೋದರೂ ನಮಗಿರುವ ಅಸ್ಮಿತೆ ನಿರ್ಣಾಯಕವಾಗಿರುತ್ತದೆ. ಆದ್ದರಿಂದ, ಭಾರತದ ನೈಜ ಇತಿಹಾಸವನ್ನು ಮಕ್ಕಳಿಗೆ ಕಲಿಸುವ ಕೆಲಸಕ್ಕೆ ಬಿಜೆಪಿ ಬದ್ಧವಾಗಿದೆ ಎಂದು ಸಚಿವರು ನುಡಿದರು.

ಪಠ್ಯ ಮರು ಪರಿಷ್ಕರಣೆಯಲ್ಲಿ ಅಂಬೇಡ್ಕರ್ ಅವರಿಗಾಗಿ, ಇತರ ಮಹಾನ್ ವ್ಯಕ್ತಿಗಳಿಗಾಗಲಿ ಯಾವುದೇ ಅಪಮಾನವಾಗಿಲ್ಲ. ಮರು ಪರಿಷ್ಕರಣೆ ಸಮಿತಿ ತನ್ನ ಕೆಲಸವನ್ನು ಸಮರ್ಥವಾಗಿ ನಿರ್ವಹಿಸಿ, ಅದನ್ನು ಸರಕಾರಕ್ಕೆ ಕೊಟ್ಟಿದ್ದರಿಂದಷ್ಟೆ ಆ ಸಮಿತಿಯನ್ನು ವಿಸರ್ಜಿಸಲಾಗಿದೆ ಅಷ್ಟೆ ಎಂದು ಅವರು ವಿವರಣೆ ನೀಡಿದರು.

ಅಂಧ, ಶ್ರವಣ ದೋಷವುಳ್ಳ ಮಕ್ಕಳ ಶಿಕ್ಷಕರ ತರಬೇತಿ ಕೇಂದ್ರಕ್ಕೆ ಪ್ರವೇಶ

ಮೈಸೂರು, ಜೂ. 24– ಮೈಸೂರಿನ ತಿಲಕ್‌ನಗರದಲ್ಲಿನ ಅಂಧ ಮತ್ತು ಶ್ರವಣದೋಷವುಳ್ಳ ಮಕ್ಕಳ ಶಿಕ್ಷಕರ ತರಬೇತಿ ಕೇಂದ್ರದ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಕೊನೆ ದಿನಾಂಕ ಜುಲೈ 21. ಇದಕ್ಕಾಗಿ ಜುಲೈ 30 ಹಾಗೂ 31ರಂದು ಆನ್‌ಲೈನ್ ಪರೀಕ್ಷೆ ನಡೆಯಲಿದ್ದು, ಜು. 25ರಂದು ಪ್ರವೇಶಪತ್ರ ಪಡೆಯಬೇಕಿದೆ. ಆ. 5ರಂದು ಫಲಿತಾಂಶ ಪ್ರಕಟವಾಗಲಿದ್ದು, ಆ. 10ರಿಂದ 20ರವರೆಗೆ ದಾಖಲಾತಿ ನಡೆಯಲಿದೆ. ಹೆಚ್ಚಿನ ಮಾಹಿತಿಗೆ ದೂರವಾಣಿ ಸಂಖ್ಯೆ: 0821–2491600/2959600 ಸಂಪರ್ಕಿಸಬಹುದು.

ಒಂದನೇ ಪುಟದಿಂದ

ರೈತನಿಗೆ 30.25 ಲಕ್ಷ ವಂಚನೆ

ಹುದ್ದೆ ಕೊಡಿಸುತ್ತಾರೆ ಎಂದು ಹೇಳಿದ್ದನ್ನು ನಂಬಿ ನಿಂಗರಾಜು ಹಣ ಕಳೆದುಕೊಂಡಿದ್ದಾರೆ.

ವಿವರ: ಸಬ್ ಇನ್ಸ್‌ಪೆಕ್ಟರ್ ಹುದ್ದೆಗೆ ಅರ್ಜಿ ಸಲ್ಲಿಸಿದ್ದ ರೈತ ನಿಂಗರಾಜು ಪುತ್ರ ಅರುಣ್ ಕುಮಾರ್, ದೇಹದಾರ್ಢ್ಯ ಪರೀಕ್ಷೆಗಾಗಿ ತಂದೆಯೊಂದಿಗೆ ಬೆಂಗಳೂರಿನ ಕೋರಮಂಗಲಕ್ಕೆ ತೆರಳಿದ್ದರು. ಪರೀಕ್ಷೆ ಮುಗಿದ ನಂತರ ನಿಂಗರಾಜು ತನ್ನ ಪರಿಚಯ ಸ್ಥನಾದ ಬಿಜೆಪಿ ಮುಖಂಡ ಸುರೇಶ್‌ನನ್ನು ತಾಜ್ ವೆಸ್ಟೆಂಡ್ ಹೋಟೆಲ್‌ನಲ್ಲಿ ಭೇಟಿ ಮಾಡಿದ್ದಾರೆ. ಆ ವೇಳೆ ಪದ್ಮನಾಭ ಎಂಬುವರು ಕೂಡ ಸುರೇಶ್ ಜೊತೆಗಿದ್ದರು. ಈ ವೇಳೆ ಮಂಜುನಾಥ್ ನನ್ನು ಕರೆಸಿಕೊಂಡ ಸುರೇಶ್, ಆತನನ್ನು ರೈತರಿಗೆ ಪರಿಚಯ ಮಾಡಿಕೊಟ್ಟಿದ್ದಾರೆ. ಅಲ್ಲದೇ, ನಿಮ್ಮ ಮಗನಿಗೆ ಇವರು (ಮಂಜುನಾಥ್) ಸಬ್‌ಇನ್ಸ್ ಪೆಕ್ಟರ್ ಹುದ್ದೆ ಕೊಡಿಸುತ್ತಾರೆ ಎಂದು ಭರವಸೆ ಯನ್ನು ನೀಡಿದ್ದಾರೆ ಎನ್ನಲಾಗಿದೆ.

ಈ ವೇಳೆ ನಿಂಗರಾಜು ಜೊತೆ ಮಾತನಾಡಿದ ಮಂಜುನಾಥ್, ನಾನು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಯಡಿಯೂರಪ್ಪ ಪುತ್ರ ವಿಜಯೇಂದ್ರ ಆಪ್ತರಾಗಿದ್ದು, ಅವರ ಮೂಲಕ ನಿಮ್ಮ ಮಗನಿಗೆ ಸಬ್‌ಇನ್ಸ್‌ಪೆಕ್ಟರ್ ಹುದ್ದೆ ಕೊಡಿಸುವುದಾಗಿ ನಂಬಿಸಿದ್ದಾನೆ. ಅಲ್ಲದೇ, ಹುದ್ದೆ ಕೊಡಿಸಲು 40 ಲಕ್ಷ ರೂ. ಬೇಡಿಕೆ ಇಟ್ಟಿದ್ದಾನೆ. ಚೌಕಾಶಿ ನಡೆಸಿ, ಕೊನೆಗೆ 38 ಲಕ್ಷ ರೂ.ಗಳಿಗೆ ವ್ಯವಹಾರ ಕುದುರಿಸಿದ್ದಾನೆ.

ಆತನ ಮಾತನ್ನು ನಂಬಿದ ನಿಂಗರಾಜು ತನ್ನ 2 ಎಕರೆ ಜಮೀನು ಪೈಕಿ ಒಂದೂವರೆ ಎಕರೆ ಮಾರಾಟ ಮಾಡಿದ್ದಲ್ಲದೇ ಬಡ್ಡಿಗೆ ಸಾಲ ಪಡೆದು ಮಂಜುನಾಥ್‌ಗೆ 30.25 ಲಕ್ಷ ರೂ. ನೀಡಿ, ಉಳಿದ ಹಣವನ್ನು ನೇಮಕಾತಿ ಪತ್ರ ಬಂದ ನಂತರ ಕೊಡುವುದಾಗಿ ತಿಳಿಸಿದ್ದಾರೆ. ಆದರೆ ಸಬ್‌ಇನ್ಸ್‌ಪೆಕ್ಟರ್ ಹುದ್ದೆಯ ನೇಮಕಾತಿ ಪಟ್ಟಿಯಲ್ಲಿ ನಿಂಗರಾಜು ಪುತ್ರ ಅರುಣ್ ಕುಮಾರ್ ಹೆಸರು ಇರಲಿಲ್ಲ. ತಾನು ಮೋಸಹೋಗಿರುವುದನ್ನು ಮನಗಂಡ ನಿಂಗರಾಜು, ತನ್ನ ಹಣ ವಾಪಸ್ ಕೊಡುವಂತೆ ಹಲವಾರು ಬಾರಿ ಮಂಜುನಾಥ್‌ನನ್ನು ಕೇಳಿದರೂ ಯಾವುದೇ ಪ್ರಯೋಜನವಾಗಿಲ್ಲ. ಹೀಗಾಗಿ ಗುರುವಾರ ಸಂಜೆ ಮಂಡ್ಯ ಎಸ್ಪಿ ಅವರನ್ನು ಭೇಟಿ ಮಾಡಿ, ದೂರು ಸಲ್ಲಿಸಿದ್ದಾರೆ.

ದ್ರೌಪದಿ ಮುರ್ಮು ನಾಮಪತ್ರ ಸಲ್ಲಿಕೆ

ಸಚಿವರಾದ ರಾಜನಾಥ್ ಸಿಂಗ್, ಅಮಿತ್ ಶಾ ಮತ್ತು ಬಿಜೆಪಿ ಅಧ್ಯಕ್ಷ ಜೆಪಿ ನಡ್ಡಾ ಅವರು ನಾಮ ಪತ್ರಕ್ಕೆ ಸಹಿ ಹಾಕಿದ್ದಾರೆ. ಉತ್ತರ ಪ್ರದೇಶ ಸಿಎಂ ಯೋಗಿ ಆದಿತ್ಯನಾಥ್ ಮತ್ತು ಗುಜರಾತ್ ಸಿಎಂ ಭೂಪೇಂದರ್ ಪಟೇಲ್ ಸೇರಿದಂತೆ ಎಲ್ಲಾ ಬಿಜೆಪಿ ನೇತೃತ್ವದ ರಾಜ್ಯಗಳ ಮುಖ್ಯಮಂತ್ರಿಗಳು, ಹಾಗೆಯೇ ಪಕ್ಷದ ಮಹಿಳೆಯರು ಮತ್ತು ಬುಡಕಟ್ಟು ಸಂಸದರು, ಶಾಸಕರ ಸಂಪೂರ್ಣ ತಂಡ ಸಹ ಸಹಿ ಹಾಕಿವೆ.

ಎನ್‌ಡಿಎ ನಾಯಕರ ಜೊತೆಗೆ, ಮೈತ್ರಿಕೂಟದ ಭಾಗವಾಗಿರದ ವೈಎಸ್‌ಆರ್ ಕಾಂಗ್ರೆಸ್‌ನ ವಿಜಯಸಾಯಿ ರೆಡ್ಡಿ ಮತ್ತು ಬಿಜೆಡಿ ನಾಯಕ ಸಸ್ಮಿತ್ ಪಾತ್ರಾ ಅವರು ಎನ್ ಡಿಎ ನಾಮನಿರ್ದೇಶನವನ್ನು ಬೆಂಬಲಿಸಲು ಇಂದು ಸಂಸತ್ತಿನಲ್ಲಿದ್ದರು. ಎಐಎಡಿಎಂಕೆ ನಾಯಕ ಓ ಪನೀರ್‌ಸೆಲ್ವಂ ಮತ್ತು ಜೆಡಿಯುನ ರಾಜೀವ್ ರಂಜನ್ ಸಿಂಗ್ ಮುರ್ಮು ಬೆಂಬಲಿಸಿ ಇಂದು ಬೆಳಗ್ಗೆಯೇ ಸಂಸತ್ತಿಗೆ ಆಗಮಿಸಿದರು.

ರಾಷ್ಟ್ರನಾಯಕರ ಪ್ರತಿಮೆಗಳಿಗೆ ಪುಷ್ಪ ನಮನ: ತಮ್ಮ ನಾಮಪತ್ರಗಳನ್ನು ಸಲ್ಲಿಸುವ ಮೊದಲು, ಮುರ್ಮು ಅವರು ಮಹಾತ್ಮ ಗಾಂಧಿ, ಬಿ.ಆರ್. ಅಂಬೇಡ್ಕರ್ ಮತ್ತು ಬಿರ್ಸಾ ಮುಂಡಾ ಅವರ ಪ್ರತಿಮೆಗಳಿಗೆ ಪುಷ್ಪ ನಮನ ಸಲ್ಲಿಸಿದರು.

ರಾಷ್ಟ್ರಪತಿಯಾಗಿ ಆಯ್ಕೆಯಾಗಬೇಕಾದರೆ ಪ್ರತಿ ನಾಮನಿರ್ದೇಶನವು ಚುನಾಯಿತ ಪ್ರತಿನಿಧಿಗಳಲ್ಲಿ 50 ಪ್ರತಿಪಾದಕರು ಮತ್ತು 50 ಎರಡನೇ ಅನುಯಾಯಿಗಳನ್ನು ಹೊಂದಿರಬೇಕು. ಮುರ್ಮು ಅವರು ಆಯ್ಕೆಯಾದರೆ, ದೇಶದ ಮೊದಲ ಬುಡಕಟ್ಟು ಜನಾಂಗದ ರಾಷ್ಟ್ರಪತಿ ಮತ್ತು ಎರಡನೇ ಮಹಿಳೆ ಎನಿಸಿಕೊಳ್ಳಲಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ | ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

HOUSE FOR RENT
3BHK with 24 hrs Water
Rajaseat - LIC Main Road,
New Extention
at Madikeri Town
9731671326
7899652521

PART TIME WORK
ಬಿಡುವಿನ ವೇಳೆಯಲ್ಲಿ ನೀವು ಕುಳಿತ ಸ್ಥಳದಲ್ಲಿಯೇ
ಕೆಲಸ / JOB
ವಾರದ ಸಂಬಳ 3000/– ರಿಂದ 5000/– ಮೇಲ್ಪಟ್ಟು
ಕೊರಿಯರ್ ಸೌಲಭ್ಯವಿದೆ.
9108418233
9743217566

ಶ್ರೀ ಮಾರುತಿ ರಿಯಲ್ ಎಸ್ಟೇಟ್
ಸೈಟು / ಮನೆ ಕೊಳ್ಳಲು / ಮಾರಲು. ಸಂಪರ್ಕಿಸಿ:
9538412881

"PLOTS FOR SALE"
ASHWINI ENCLAVE
(Near Shobha Retreat)
Jettihundi: Bogadi
Ready to Construct
'A'Khatha, 80%Loan
+91-7349113666



SUNZONE SOLAR SYSTEM
VM Double Road, Kuvempunagar, Mysuru
9845175443

20x30 ಹೊಸಮನೆ 36 ಲಕ್ಷ, 30x40 ಹಳೆ ಮನೆ–75 ಲಕ್ಷ, 30x40 ಡುಪ್ಲೆಕ್ಸ್ ಮನೆ – 88 ಲಕ್ಷ 20x30 ಡುಪ್ಲೆಕ್ಸ್ ಮನೆ – 58 ಲಕ್ಷ, ಸೈಟು ಹಳೆ ಮನೆ, ಹೊಸಮನೆ ಮಾರುವವರು, ಕೊಳ್ಳುವವರು ಸಂಪರ್ಕಿಸಿ:
9945042875

S.K.CONSTRUCTION
ನಿಮ್ಮ ಕನಸಿನ ಮನೆ J P Nagar ಗುರೂರಿನಲ್ಲಿ 30x47 2BHK ಮನೆ 3D Elevation ಸಹಿತ 90% Loan ಮೂಲಕ ಮನೆ ಕಟ್ಟಿ ಕೊಡುತ್ತೇವೆ.
ಬೆಲೆ 55 ಲಕ್ಷ ಮಾತ್ರ
9620528490

LEASE & RENT
30x40 Duplex House Lease at Srirampura.
20x30 Ground House Lease at Kuvempunagar.
30x40 Independent House Rent at Vijayanagar 3rd Stage
9663136318

HOUSE FOR RENT
Direct Owner Contact @ J P Nagar, B Zone, Near Ring Road, Mysore
9844067039

DOCUMENT LOST
I, G.R. Sudheendra, S/o Late G.V. Ramachandra, aged about 61 years, residing at #24, 1st Floor, 2nd Cross, Dhanalakshmi Layout, Kodigehalli Main Road, Vidyaranyapuram, Bangalore, have lost the original allotment letter issued by MUDA vide their letter LP 192/V 109 dated 18-09-1992 near Andolana Circle, Ramakrishnanagar, Mysuru. *Finders please contact*
Mob: 9740835863

ಕಳೆದಿದೆ
ಶ್ರೀಮತಿ ಮಮತ ಆರ್.ಕೆ. #617, ಮೊದಲನೇ ಅಡ್ಡರಸ್ತೆ, ಪ್ರಶಾಂತನಗರ, ಬೋಗಾದಿ 2ನೇ ಹಂತದ ಮೈಸೂರು ಸ್ವತ್ತಿನ Title Deed (ಕ್ರಯಪತ್ರ) ಮೂಲ ಪ್ರತಿ ಸರಸ್ವತಿಪುರಂ ಶಾಖೆಯ ವ್ಯಾಪ್ತಿಯಲ್ಲಿ ಕಳೆದಿದ್ದು, ಮೂಲ ಪ್ರತಿ ಯಾರಿಗಾದರೂ ಸಿಕ್ಕಿದಲ್ಲಿ ತಲುಪಿಸಲು ಈ ಮೂಲಕ ಕೋರಲಾಗಿದೆ. ಮೊ.ಸಂಖ್ಯೆ:
9448772326

ಕನ್ನಡವನ್ನು ಓದಲು ಬರೆಯಲು 3 ತಿಂಗಳಲ್ಲಿ ಕಲಿಸಿಕೊಡಲಾಗುತ್ತದೆ.
7829617871

ವಧು-ವರರ ಮಾಹಿತಿ ಕೇಂದ್ರ
ಒಕ್ಕಲಿಗ/ಲಿಂಗಾಯತ/ಬ್ರಾಹ್ಮಣ ಮತ್ತು ಎಲ್ಲಾ ಜಾತಿಯ BE / B.Tech / MBA / MS / MBBS / MD ಹಾಗೂ ಎಲ್ಲಾ ಡಿಗ್ರಿ / ಮಾಸ್ಟರ್ ಡಿಗ್ರಿ, ದೇಶಿಯ / ವಿದೇಶಿಯ ವಧು–ವರರ ಮಾಹಿತಿಗೆ ಸಂಪರ್ಕಿಸಿ.
ಅಂಚೆಪೇದೆ ಮ್ಯಾಟ್ರಿಮೋನಿ
ವಿಜಯ ಬ್ಯಾಂಕ್ ಸರ್ಕಲ್, ಕುವೆಂಪುನಗರ, ಮೈಸೂರು
7259395800 / 7349224222

TEACHERS WANTED
1) Montessory Teacher -2
2) B.Sc, B.Ed - 02
3) Hindi Teacher -1
4) Music Teacher - 1
5) Dance Teacher - 1
6) Office Clerk -1
GAYATHRI VIDYALA
K.R.Sagara, Hosa Undavadi
8892927318 / 6360302911

FOR RENT
900 Sq.ft Office Use
1st Floor, Near Orchids School, Sharadadevi Nagar, Mysore
9844775166

ಸೇವೆಗಳು ಲಭ್ಯವಿರುತ್ತದೆ
ನಮ್ಮಲ್ಲಿ 24/8 Hrs Cooking, Home Maid, Home Nursing ಕೆಲಸ ಮಾಡಲು ಅನುಭವವುಳ್ಳ ಮಹಿಳೆಯರು ಲಭ್ಯವಿರುತ್ತಾರೆ ಮತ್ತು ಮಹಿಳೆಯರು ಕೆಲಸಕ್ಕೆ ಬೇಕಾಗಿದ್ದಾರೆ. ನಮ್ಮಲ್ಲಿ 18 ರಿಂದ 25 ವರ್ಷದೊಳಗಿನ ಹೆಣ್ಣು ಮಕ್ಕಳಿಗೆ ಉಚಿತವಾಗಿ Home Nursing ತರಬೇತಿ ನೀಡಲಾಗುತ್ತದೆ. ಆಸಕ್ತಿಯುಳ್ಳವರು ಸಂಪರ್ಕಿಸಿ
6361470947 / 8971735225

ತರಬೇತಿ ನಂತರ ತಕ್ಷಣ ಉದ್ಯೋಗ
SSLC Pass or PUC Fail!
Diploma in NTT (Teachers Training) (Nursery / Montessori / Kindergarten) Exam & Certificate by All India Child Care & Education. NEW Delhi (MHRD Govt of India Approved) Join Training off line / Online Classes, Jnana Gangothri Convent, Rajendra Nagara, Mysuru - 570007
9113980741

S.M GOLD
ಗಿರವಿ ಚಿನ್ನಾಭರಣ ಖರೀದಿ
ಒಂದು ಗ್ರಾಂ ಚಿನ್ನಕ್ಕೆ 5200
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನ ಆಭರಣಗಳನ್ನು ನಾವೇ ಬಿಡಿಸಿ ಇಂದಿನ ಬೆಲೆಗೆ ತೆಗೆದುಕೊಳ್ಳುತ್ತೇವೆ ಕೂಡಲೇ ಸಂಪರ್ಕಿಸಿ.(T&C)
8050518881

WE ARE HIRING
Vacancy - 10 Nos
* Marketing Executive (M)
* Sales Executive (F)
* Telecallers (F)
Attractive Salary + Incentives, Allowance+ESI+and other Benefits. (Experience & Freshers can apply)
MM Ceramic, Industrial Suburb, Vishveshwaranagara, Mysore
7019012892

MUDA APPROVED SITE FOR SALE
30x40 Site @1650/ Sft.
Immediate Reg. & Bank Loan Available Next to KBL Green Wood Layout & Near Lal Bahadur Shasthri Nagar, 1.5 kms from Ring Road
7795609173

ಹೊಸ ಚೀಟಿಗಳ ಪ್ರಾರಂಭ
ಸೀಬಿ ನರಸಿಂಹಸ್ವಾಮಿ ಚಿಟ್ಸ್ (ಕ) ಪ್ರೈ.ಲಿ, ಮೈಸೂರು / ಹಾಸನ

ಚೀಟಿ ಮೊತ್ತ	ತಿಂಗಳು	ತಿಂಗಳ ಕಂತು	3ನೇ ತಿಂಗಳಿಂದ
1 ಲಕ್ಷ	25	4000/–	3000/–
2 ಲಕ್ಷ	25	8000/–	6000/–
5 ಲಕ್ಷ	25	20,000/–	15,000/–
10 ಲಕ್ಷ	50	20,000/–	15,000/–
10 ಲಕ್ಷ	100	10,000/–	7,500/–
25 ಲಕ್ಷ	100	25,000/–	18,750/–

7892303484 / 8749077453

ಹೆಸರು ಬದಲಾವಣೆ
ಮಂಡ್ಯ ಜಿಲ್ಲೆ, ಕೆ.ಆರ್.ಪೇಟೆ ಟೌನಿನ ಸುಭಾಷ್‌ನಗರ ಬಡಾವಣೆಯಲ್ಲಿ ಖಾಯಂ ವಾಸವಾಗಿರುವ ಹೆಚ್.ಆರ್.ಭರತ್‌ಕುಮಾರ್ ಅವರ ಪತ್ನಿ ಶಿಲ್ಪ ಭರತ್ ಸುಮಾರು 28 ವರ್ಷ ಆದ ನನ್ನ ವಿವಾಹಪೂರ್ವ ದಾಖಲಾತಿಗಳಲ್ಲಿ ಶಿಲ್ಪ ಲೋಹಿತ್ ಎಂಬುದಾಗಿ ನಮೂದಾಗಿರುತ್ತದೆ. ಈಗ ವಿವಾಹದ ನಂತರ ನನ್ನ ದಾಖಲಾತಿಗಳಲ್ಲಿ ಶಿಲ್ಪ ಭರತ್ ಎಂದು ನಮೂದಾಗಿರುತ್ತದೆ. ಆದ್ದರಿಂದ ದಿನಾಂಕ: 16–06–2022 ರಂದು ಕೆ.ಆರ್.ಪೇಟೆ ಪಟ್ಟಣದ ನೋಟರಿ ವಕೀಲರಾದ ವಿ.ಕೆ.ಸ್ವರೂಪ ಅವರ ಮುಂದೆ ಪ್ರಮಾಣ ಮಾಡಿ ನನ್ನ ಹೆಸರನ್ನು ಶಿಲ್ಪ ಭರತ್ ಎಂದು ನನ್ನ ಸ್ವ ಇಚ್ಛೆಯಿಂದ ಬದಲಾವಣೆ ಮಾಡಿಕೊಂಡಿರುತ್ತೇನೆ. ಇನ್ನು ಮುಂದೆ ನನ್ನ ಎಲ್ಲಾ ವ್ಯವಹಾರಗಳನ್ನು ಶಿಲ್ಪ ಭರತ್ ಎಂಬ ಹೆಸರಿನಲ್ಲಿಯೇ ನಡೆಸುತ್ತೇನೆ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.
ಸಹಿ/– ಶಿಲ್ಪ ಭರತ್

SITE FOR SALE
Vijaynagar 4th Stage, Prime Location, MUDA Approved
9353727889

ತಕ್ಷಣ ಬೇಕಾಗಿದ್ದಾರೆ
ಮೈಸೂರು, ನಂಜನಗೂಡು, ಕಡಕೊಳ, ಹೆಬ್ಬಾಳ್, ಹೂಟಗಳ್ಳಿ, ಮೇಟಗಳ್ಳಿ ಮುಂತಾದ ಸ್ಥಳದಲ್ಲಿರುವ ಪ್ರಸಿದ್ಧ ಕಂಪನಿಗೆ ಆಫೀಸ್ ಮತ್ತು ಶೋರೂಂಗಳಿಗೆ 7th, SSLC, PUC, ITI, Diploma, Any Degree pass / fail ಆದವರಿಗೆ packing, helper, Checking, Maintenance, billings, front office, telephone attender ಮುಂತಾದ ಕೆಲಸಗಳಿಗೆ ಬೇಕಾಗಿದ್ದಾರೆ. ಸಂಬಳ 14,000 – 39,000 (ESI + PF + OT) ಸೇರಿ. ಸಂಪರ್ಕಿಸಿ:
9980630131, 9980850141

ಬೋಳು ತಲೆಯ ಸಮಸ್ಯೆಯೇ?

ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

Gem Selections
(A Part of Khanna Gems Group)
100% Natural Govt. Lab Certified Gemstones
ಶೇಕಡಾ 100 ರಷ್ಟು ನೈಸರ್ಗಿಕ ಸರ್ಕಾರಿ ಪ್ರಯೋಗಾಲಯದಿಂದ ಪ್ರಮಾಣೀಕೃತ ರತ್ನದ ಹರಳುಗಳು ದೊರೆಯುತ್ತವೆ.
HIG-3, Near Akshaya Bhandar, New Kantharaju Urs Rd. Kuvempu Nagar, Mysuru, Karnataka-570023
8152066999

ನಿರ್ಮಲ ಸರ್ವೀಸ್
ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

ಸುವರ್ಣಾವಕಾಶ
ನಿವೃತ್ತಿ, ಸ್ವಯಂ ನಿವೃತ್ತಿ, ಗೃಹಿಣಿಯರಿಗೆ ಸ್ವಯಂ ಉದ್ಯಮದಾರರಿಗೆ, ಪ್ರಖ್ಯಾತ ಬ್ಯಾಂಕ್ ಸಮೂಹದಿಂದ Part Time / Full Time ಕೆಲಸಕ್ಕೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
Fixed Salary / PF-ESI.
Age: Above 30 years.
9008799156 / 9513395132

COMMERCIAL BUILDING FOR LEASE OR SALE
Total 2700 Sqft Suitable for PG & Lodging with well furnished Ground floor non-veg Hotel and first and second Floor Lodge.. Rent Earning 1 Lakh. Krishna Villasa Road, Next to D.D.Urs Road, Devaraja Mohalla, Mysore.
9900554438 / 9880777894

ಕೆಲಸಕ್ಕೆ ಬೇಕಾಗಿದ್ದಾರೆ
ಕೊಳ್ಳೇಗಾಲ, ಮಳವಳ್ಳಿ & ಟಿ.ನರಸೀಪುರದಲ್ಲಿ ಸೇಲ್ಸ್‌ಮ್ಯಾನ್ ಆಗಿ ಕೆಲಸ ಮಾಡಲು ಬೇಕಾಗಿದ್ದಾರೆ. ದ್ವಿಚಕ್ರವಾಹನ ಕಡ್ಡಾಯ ಆಕರ್ಷಕ ಸಂಬಳದೊಂದಿಗೆ ಇತರೆ Incentive ಇರುತ್ತದೆ
8095445584 / 9110234943

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

Join ASFT Fashion Design Courses
* Certification Course
* Diploma Course
* Advance Diploma Course
Alpha School of Fashion Technology & Interior Design
AT: SRIRAMPURA, GOKULAM, UDAYAGIRI, MYSORE
Mob: 7829937469, 9901803394

SDJ JEWELERS
ಪುರುಷರು ಮತ್ತು ಮಹಿಳೆಯರು Tele Callers ಮತ್ತು Sales Executive ಬೇಕಾಗಿದ್ದಾರೆ.
Qualification: SSLC/ PUC/ Degree/ Post Graduation
ಉಳಿದುಕೊಳ್ಳಲು PG ವ್ಯವಸ್ಥೆ ಇರುತ್ತದೆ
Salary : 20,000
8884304444

ಸೋಲಾರ್ ವಾಟರ್ ಹೀಟರ್
Solar Water Heater

ಸೇಲ್, ಸರ್ವೀಸ್ ರಿಪೇರಿ, ಎಕ್ಸ್‌ಚೇಂಜ್ ಹಾಗೂ ಬಿಡಿ ಭಾಗಗಳಿಗಾಗಿ ಸಂಪರ್ಕಿಸಿ
Vinaykrishna
9611648636

WANTED
Office Assistant / Accountant
MS Excel / Tally / GST Experience age 25 to 35 (Near Hebbal & Metagally)
House Keeping Supervisor / House Keeping, (Ladies & Gents) (age 25 to 35 with experience)
Security Guards / Field Supervisor
0821-4287049 / 9036745292

ಮಾರಾಟಕ್ಕಿದೆ
ವರ್ಟಿಕಲ್ ಬಾಯ್ಲರ್, 600 ಕೆ.ಜಿ ಬೆಳಗೊಳ, ಇಂಡಸ್ಟ್ರಿಯಲ್ ಏರಿಯಾ, ಮೇಟಗಳ್ಳಿ.
9448750522 / 9448292309

ಮನೆ ಮಾರಾಟಕ್ಕಿದೆ
29x40 ರಲ್ಲಿ ನಿರ್ಮಿಸಿದ ಇಲವಾಲ ಹೋಬಳಿ ನಾಗವಾಲ ಗ್ರಾಮದಲ್ಲಿ ಇರುವ ಮನೆ ಮಾರಾಟಕ್ಕೆ ಇದೆ. ಸಂಪರ್ಕಿಸಿ:
9980623210

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

ಹಳೆಯ / Old
ಮಿಕ್ಸರ್‌ಗೆ ರೂ.1500
ಕುಕ್ಕರ್‌ಗೆ ರೂ.1500
ಗ್ಯಾಸ್‌ಸ್ಟೌವ್‌ಗೆ ರೂ.2500
ಹೊಸ ಬಟರ್‌ಫ್ಲೈ, ಬಜಾಜ್, ಪ್ರೆಸ್ಟೀಜ್ ಕಂಪನಿಗೆ ಬದಲಾಯಿಸಿ.
ಶ್ರೀವಿನಾಯಕ ಎಂಟರ್ ಪ್ರೈಸಸ್, ಪ್ರಗತಿ ಮೆಡಿಕಲ್ ಎದುರು, ಅಗ್ರಹಾರ, ಮೈಸೂರು.
ಮೊ.: 7204368222

ಮನೆಯಿಂದಲೇ ಸಂಪಾದಿಸಿ
ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ
7795560970

SITES FOR SALE
20x30 - 12.60 Lakhs
30x40 - 25.20 Lakhs
Bank Loan upto 75%, Ready for Registration, Near Gurur Bus Stop, Ramabainagar, Mysore, DTCP approved, (Corporation Limits) 1.5 kms from J P Nagar Ring Road.
8660105902

V.K ENTERPRISES

Gas Pipelining & Gas Saftey Servicing
Mob - 9686594241

HOME LOAN (ಮನೆ ಸಾಲ)
9 & 11A, 11B ಗ್ರಾಮಠಾಣ, ಪುರಸಭೆ, ಕಾರ್ಪೋರೇಷನ್, ನಗರಸಭೆ, ಮುಡಾ ನಿವೇಶನಗಳ ಮೇಲೆ ಶೀಟು ಮತ್ತು RCC ಮನೆ ಕಟ್ಟಲು ಸಾಲ, ಮನೆ ಮೇಲೆ ಸಾಲ (LAP), ಮನೆ ನವೀಕರಣ ಸಾಲ ದೊರೆಯುತ್ತದೆ. ಸಂಪರ್ಕಿಸಿ
ಮಂಜುನಾಥ್: 7204646444
ಮಹೇಶ್: 9686062014

A BIG SITE FOR SALE AT HUGE DISCOUNT
At H D Kote Ring Road (Next to Circle)
7829872142
8050949051

ತಕ್ಷಣ ಬೇಕಾಗಿದ್ದಾರೆ
ಕಡಕೊಳ, ನಂಜನಗೂಡು, ತಾಂಡ್ಯ ಕೈಗಾರಿಕಾ ಪ್ರದೇಶದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC, ಸಂಬಳ: 15,000/–, ESI ಮತ್ತು PF ಸೌಲಭ್ಯ ಇರುತ್ತದೆ. ಸಂಪರ್ಕಿಸಬೇಕಾದ ಸಂಖ್ಯೆಗಳು:
9620667819 / 9880727819

WANTED
Operator-ITI/diploma with 2 yrs experience.
Marketing Executive- Male with 2 years experience and 2 wheeler.
Office Assistant - Female with computer knowledge and 2 wheeler, Helper and Security guard with two wheeler
Mail- bilvagreen@gmail.com
Whatsapp: 9945229013

HOUSE FOR SALE
30x40 Corner House with Car Parking, 10x12 Commercial Shop, Triveni Circle, Kalayanagiri Nagar, Mysuru. Price 72 Lakhs Fixed. Brokers Excuse
9620393721

ಬೇಕಾಗಿದ್ದಾರೆ
ಮೈಸೂರಿನ ಹೋಟೆಲ್‌ಗೆ (Live) ಲೈವ್ ಪರೋಟ ಮಾಡುವವರು ಹಾಗೂ ಸಪ್ಲೇಯರ್ ಬೇಕಾಗಿದ್ದಾರೆ. ಆಕರ್ಷಕ ಸಂಬಳ ಊಟ – ವಸತಿ ವ್ಯವಸ್ಥೆಯಿದೆ.
8197459398

ಮನೆ ಕೆಲಸ ಮಾಡುವ ಹೆಂಗಸರು ಬೇಕಾಗಿದ್ದಾರೆ
ವಯಸ್ಸು : 45 ವರ್ಷ ಒಳಗೆ ಇರುವವರಿಗೆ ಮಾತ್ರ, ಉಚಿತವಾಗಿ ವಸತಿ ನೀಡಲಾಗುವುದು. ಆಕರ್ಷಕ ವೇತನ, ಗಣೇಶ ರೆಸಿಡೆನ್ಸಿ ಅಪಾರ್ಟ್‌ಮೆಂಟ್ ಬಾಲಕೃಷ್ಣರಾವ್ ರಸ್ತೆ, ಚಾಮರಾಜಪುರಂ
9008355847

ಹೊಸ ಮನೆ ಮಾರಾಟಕ್ಕಿದೆ
30x40 Duplex ಮನೆ ಮೈಸೂರು, ದಟ್ಟಗಳ್ಳಿ 3ನೇ ಹಂತ.
20x30 Duplex ಮನೆ ಹೊಸ, ಮನೆ ಮಾರಾಟಕ್ಕಿದೆ. ಅರವಿಂದನಗರ, ಮೈಸೂರು.
9945615736

ಹೆಸರು ಬದಲಾವಣೆ
ಕವಿತ ಆದ ನಾನು ರವೀಂದ್ರ (ನೋಟರಿ)ಯವರ ಮುಂದೆ ದಿನಾಂಕ: 17–06–2022 ರಂದು ಸವಿತ ಎಂದು ನನ್ನ ಹೆಸರನ್ನು ಬದಲಿಸಿ ಕೊಂಡಿರುತ್ತೇನೆ. ಇನ್ನು ಮುಂದೆ ನನ್ನ ಎಲ್ಲಾ ವ್ಯವಹಾರಗಳನ್ನು ಸವಿತ ಎಂಬ ಹೆಸರಿನಿಂದ ನಡೆಸುತ್ತೇನೆ.
ಸಹಿ/– ಸವಿತ

FOR SALE
1) 30x40 10 lakhs HD Kote
2) 30x40 house JP Nagar
3) 40x60 site KBL Layout, Devegowda Circle Near Bannur Road
4) 0.28 Land Bannur Road
5) 25x40 House RK Nagar
6) 30x40 G+floor New House Bogadi Near Hari Vidyalaya
PRAKRUTHI PROPERTIES
90359 90359 / 95386 90359

ಜಮೀನು ಮಾರಾಟಕ್ಕಿದೆ
ಚಾಮರಾಜನಗರ ದಿಂದ 6 ಕಿ.ಮೀ ಅಂತರದಲ್ಲಿ NH 209 ಹೈವೇ ಯಿಂದ ಸ್ವಲ್ಪ ಒಳಭಾಗಕ್ಕೆ BUS Root ನಲ್ಲಿ 45 ಗುಂಟೆ ಮಾರಾಟಕ್ಕಿದೆ.
30x40 ಸೈಟ್ ವಿಜಯನಗರ, 4ನೇ ಹಂತ, 2ನೇ Face ನಲ್ಲಿ N/E ತಕ್ಷಣ ಬೇಕಾಗಿದೆ.
8867757056

ಸುವರ್ಣ ಯಾತ್ರ
7 ದಿನಗಳ ಕಾಶಿ ಪ್ರವಾಸ ವಿಮಾನದಲ್ಲಿ 09/08/22, ಅಯೋದ್ಯೆ, ಪ್ರಯಾಗ್ ರಾಜ್, ಶ್ರೀ ಬಾಬಾ ಬೈದ್ಯನಾಥ ಹಾಗೂ ಇತರೆ ಸ್ಥಳಗಳು. 13 ದಿನಗಳ ಚಾರ್‌ಧಾಮ್ ಪ್ರವಾಸ 6/9/22, ಕೇದಾರ್‌ನಾಥ, ಬದ್ರಿನಾಥ, ಯಮುನೋತ್ರಿ, ಗಂಗೋತ್ರಿ, ಹಾಗೂ ಇತರೆ ಸ್ಥಳಗಳು
8970949434 / 9019462508

ಸೈಟು ಮಾರಾಟಕ್ಕಿದೆ
ಮಾನಸಿ ನಗರ 30x40 ಪೂರ್ವ ದಿಕ್ಕು
ಸುಶೃತ ನಗರ 30x40 ಉತ್ತರ ದಿಕ್ಕು,
ಪೋಲಿಸ್ ಲೇಔಟ್ 30x40
9901772178

ಜಮೀನುಗಳು ಮಾರಾಟಕ್ಕಿವೆ
ಮೈಸೂರು ಮತ್ತು ನಂಜನಗೂಡು ತಾಲ್ಲೂಕಿನಲ್ಲಿ ಮುಡಾ ಮತ್ತು ಡಿ.ಸಿ. ಕನ್ವೆರ್ಷನ್ ನಿವೇಶನ ಮಾಡಲು ಮತ್ತು ತೋಟ ಮಾಡಲು ಒಳ್ಳೆಯ ಜಮೀನಿಗಳು ಮಾರಾಟಕ್ಕಿವೆ.
9611320189

ಬೇಕಾಗಿದ್ದಾರೆ
ಶ್ರೀ ಛಾಯಾದೇವಿ ಅನಾಥಾಶ್ರಮ ಮತ್ತು ವೃದ್ಧಾಶ್ರಮ, ಚಿಕ್ಕಹರದನಹಳ್ಳಿ, ಜಯನಗರ, ಮೈಸೂರು. (ಮಹಿಳೆಯರಿಗೆ ಆದ್ಯತೆ)
ರಾತ್ರಿಯ ಕಾವಲುಗಾರ್ತಿ –01
ಅಡುಗೆ ತಯಾರಕರು – 01
8431750240

ಬೇಕಾಗಿದ್ದಾರೆ
ನುರಿತ ಸಸ್ಯಹಾರಿ ಅಡುಗೆ ಭಟ್ಟರು ಬೇಕಾಗಿದ್ದಾರೆ
ಕೂಡಲೇ ಸಂಪರ್ಕಿಸಿ
8310481554
8904671991

WANTED
Accountant cum Receptionist
contact: Sriram:
8792860010
KOTAKKAR TRADERS
Kuvmpunagar, Mysore

ಬೇಕಾಗಿದ್ದಾರೆ
ಕಂಪನಿಗಳು, ಕಾರ್ಖಾನೆಗಳು, ಬ್ಯಾಂಕ್, ಮಾಲ್ ಹೋಟೆಲ್, ಗಾರ್ಮೆಂಟ್ಸ್‌ಗಳಿಗೆ ಪುರುಷ & ಮಹಿಳೆಯರು, ಲೇಬರ್, ಕಾರ್ಮಿಕರು, ಸೆಕ್ಯೂರಿಟಿ, ಹೌಸ್ ಕೀಪಿಂಗ್, ಪಾಸ್ & ಫೇಲ್, ಎಸ್.ಎಸ್.ಎಲ್.ಸಿ, ಪಿಯುಸಿ, ಐ.ಟಿ.ಐ, ಡಿಪ್ಲೋಮೋ, ಉಚಿತ : ಊಟ – ವಸತಿ, ವೇತನ : 10,000 ರಿಂದ 15,000 ವರೆಗೆ, ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ. ಭೂಮಿ ಎಂಟರ್ ಪ್ರೈಸಸ್: ಹಿನಕಲ್, ನಂಜನಗೂಡು ರೋಡ್, ಮೈಸೂರು
9945319311 / 8971934589

ಬೇಕಾಗಿದ್ದಾರೆ
ಕಂಪ್ಯೂಟರ್ ಆಫೀಸಿನಲ್ಲಿ ಡೆಲಿವರಿ ಬಾಯ್ ಕೆಲಸಕ್ಕೆ SSLC / PUC ಮಾಡಿರುವ 25 ವರ್ಷದೊಳಗಿನ ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ದ್ವಿಚಕ್ರ ವಾಹನ ಮತ್ತು ಲೈಸೆನ್ಸ್ ಕಡ್ಡಾಯ. ಸಂಪರ್ಕಿಸಿ
8073393505

DOCUMENT LOST
The Orginal Allotment Letter & Khatha Papers of Site No.60 (MCC No.10/3) 30x45 ft Sewage farm Road, 2nd Cross, (Bestara Block) Vidyaranyapuram, Mysore-08 (W54) issued by CITB has lost while Travelling. Finders may Contact: M.R.Achutha Rao
9243501233

ಉದ್ಯೋಗವಕಾಶ
ಯುವತಿಯರಿಗೆ / ಮಹಿಳೆಯರಿಗೆ ಸುವರ್ಣ ಉದ್ಯೋಗವಕಾಶ. 7th / SSLC / PUC / Degree / ANM / GNM ಪಾಸ್/ಫೇಲ್ ಆದವರಿಗೆ ಮೈಸೂರಿನ ಹೆಸರಾಂತ ಹೋಂ ನರ್ಸಿಂಗ್ ಸಂಸ್ಥೆಯಲ್ಲಿ 100% ಉದ್ಯೋಗ ಖಾತರಿ. ಆಕರ್ಷಕ ಸಂಬಳದೊಂದಿಗೆ ಊಟ ಮತ್ತು ವಸತಿ ನೀಡಲಾಗುವುದು. ದೂರವಾಣಿ ಸಂಖ್ಯೆ:
0821-4242351
9606714441 / 7349278501

TEACHERS REQURED
English - M.A (Major English) with B.Ed
Computer - B.C.A /B.Sc (PCM) / (PMCS) no. of 2 Post
(Proficiency in English is a Must)
SRI CHAYADEVI SCHOOL
Rajendranagar, Mysore -07
For Enquire Call: 0821-2496922
9353873034 / 9964612301
E-mail: scvt8055@gmail.com

ಸೈಟುಗಳು ಮಾರಾಟಕ್ಕಿವೆ
ಶ್ರೀರಾಂಪುರ ರಿಂಗ್ ರೋಡ್, ಮೈಸೂರು
8050345574

ಮಾರಾಟಕ್ಕಿದೆ
1) ಜಯಪುರ ಗ್ರಾಮ ಹೆಚ್.ಡಿ.ಕೋಟೆ ಮುಖ್ಯ ರಸ್ತೆ ಸ್ವಲ್ಪ ಪಕ್ಕದಲ್ಲಿ ಡಿ.ಸಿ. ಕನ್ವರ್ಷನ್ ಸುಸಜ್ಜಿತ ನಿವೇಶನ ಮಾರಾಟಕ್ಕಿದೆ.
2) ಜಯಪುರಗ್ರಾಮ ಹೆಚ್.ಡಿ.ಕೋಟೆ ಮುಖ್ಯ ರಸ್ತೆ ಯಿಂದ ಸ್ವಲ್ಪ ದೂರ ಒಳಗೆ 7 ಎಕರೆ 20 ಗುಂಟೆ ಖುಷ್ಕಿ ಜಮೀನು ಮಾರಾಟಕ್ಕಿದೆ.
3) ದಾರಿಪುರ ಗ್ರಾಮ ಹೆಚ್.ಡಿ.ಕೋಟೆ ಮುಖ್ಯರಸ್ತೆಗೆ 1 ಎಕರೆ 34 ಗುಂಟೆ ಖುಷ್ಕಿ ಜಮೀನು ಮಾರಾಟಕ್ಕಿದೆ
9448166798

SITES FOR SALE
Approved by DTCP 30x40, 30x50, 40x60 Hunsur Road, Near Yelawala and Bogadi Road
9632454592

ಮನೆ ಬಾಡಿಗೆಗೆ
ಶ್ರೀನಿವಾಸ, #1053, 5ನೇ ಮುಖ್ಯರಸ್ತೆ, ವಿಜಯನಗರ, 1ನೇ ಹಂತ, ಯೂನಿಯನ್ ಬ್ಯಾಂಕ್ ಹತ್ತಿರ, ಮೈಸೂರು –17
2 BHK, 1st FLOOR
9972005139

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree Pass / Fail ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಓಟಿ, 15,200–86000
9740733021 / 9535028750

ಜಾಗ ಮಾರಾಟಕ್ಕಿದೆ
ಕೊಡಗು ಜಿಲ್ಲೆ, ಗೋಣಿಕೊಪ್ಪಲು – ಬಾಳೆಲೆ ಮುಖ್ಯ ರಸ್ತೆಗೆ ಹೊಂದಿಕೊಂಡಂತೆ ಮಾಯಮುಡಿ ಯಲ್ಲಿ 1/4, 1/2 ಎಕರೆ (10, 20 ಗುಂಟೆ) ಸಾಗು ಖಾಲಿ ಜಾಗ ಮಾರಾಟಕ್ಕಿದೆ. Farm House, Home Stayಗೆ ಅನುಕೂಲವಾಗಿರುತ್ತದೆ. ಮೈಸೂರು H.W ಯಿಂದ 4 Km.
Contact Owner:
9606613825

ತಕ್ಷಣ ಬೇಕಾಗಿದ್ದಾರೆ
ಗಂಗೋತ್ರಿ, ದಟ್ಟಗಳ್ಳಿ, ಆರ್.ಟಿ.ನಗರ, ಬೋಗಾದಿ ಸುತ್ತಮುತ್ತ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC, ಸಂಬಳ: 14,000/–, ESI ಮತ್ತು PF ಸೌಲಭ್ಯ ಇರುತ್ತದೆ. ಸಂಪರ್ಕಿಸಬೇಕಾದ ಸಂಖ್ಯೆಗಳು:
9620777819 / 9880727819

SITE FOR SALE
30x40
ಪೂರ್ವಾಭಿಮುಖ ಜ್ಞಾನಭಾರತಿ ಲೇಔಟ್ ದಡದಹಳ್ಳಿ, ಮುಡಾ ಖಾತೆ ಆಗಿದೆ. ಬೆಲೆ : 21 ಲಕ್ಷ
9342123373

FOR RENT
40x60 Site situated at Vijayanagar, 1st Stage, 3 Bed Room Ground Floor, Rent: Rs. 20,000/-
9342188184
9741213137

ಮಾಂತ್ರಿಕ ಕೇರಳ ಶ್ರೀ ಭಗವತಿ ಜೋತಿಷ್ಯರು ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್
ಮೊ: 9731839596
ಇವರು ಕುಟ್ಟಿ ಚೇತನ್ ಮಾರ್ತಾಂಡ ದೇವಿ ಭಗವತಿ ಕಾಟೇರಿ ಪ್ರಯೋಗದಿಂದ, ಸ್ತ್ರೀ ಪುರುಷ ಪ್ರೇಮ, ವಿವಾಹ, ಸಂತಾನ, ದಾಂಪತ್ಯ ಸಮಸ್ಯೆ, ಶತ್ರು ಭಾಧೇ, ಪ್ರೇತಾ ಭಾದೇ, ಹಣದ ಸಮಸ್ಯೆ, ತನ್ನವರೇ ತನಗೆ ಶತ್ರು, ಕೌಟುಂಬಿಕ ಕಲಹ ನಿಮ್ಮ ಯಾವುದೇ ಸಮಸ್ಯೆಗಳಿಗೆ ಮಳಯಾಳಿ ಮಾಂತ್ರಿಕ ಶಕ್ತಿಯಿಂದ ತಕ್ಷಣ ಪರಿಹಾರ ಶತಸಿದ್ಧ.
ಖಾಯಂ ಮನೆ ವಿಳಾಸ: ಮನೆ ನಂ 68, ಸತ್ಯ ಮಾರ್ಗ, ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ.ಆಫೀಸ್ ಎದುರು, ಸಿದ್ದಾರ್ಥನಗರ, ಮೈಸೂರು.

ಕೊಳ್ಳೇಗಾಲ ಜ್ಯೋತಿಷ್ಯರು ನಂ.01 ಮೋಡಿ ಮಾಂತ್ರಿಕರು. ಪಂ.ಎಸ್.ಕುಮಾರಸ್ವಾಮಿ
ಮೊ: 9880583804
ಕೊಳ್ಳೇಗಾಲದ ಮೋಡಿ ಮಾಂತ್ರಿಕ ಅಘೋಚರ ಶಕ್ತಿಯಿಂದ ಸ್ತ್ರೀ–ಪುರುಷ, ಪ್ರೇಮ, ಸಂತಾನ, ಶತ್ರುದೋಷ, ಸಾಲಭಾಧೇ, ಆರೋಗ್ಯ, ಭೂಮಿ, ಕೋರ್ಟು, ವ್ಯಾಪಾರ, ನಂಬಿದ ಜನರಿಂದ ಮೋಸ ನಿಮ್ಮ ಯಾವುದೇ ಜಟಿಲವಾದ ಸಮಸ್ಯೆಗಳಿಗೆ 2 ದಿನದಲ್ಲಿ ಶಾಶ್ವತ ಪರಿಹಾರ ಶತಸಿದ್ಧ. ಕರೆ ಮಾಡಿ ಬನ್ನಿ.
ಖಾಯಂ ವಿಳಾಸ: ಎ.ಟಿ.ಎಂ ಪಕ್ಕ, ಟಿಕೇಟ್ ಬುಕ್ಕಿಂಗ್ ಕೌಂಟರ್ ಹತ್ತಿರ, (ರಿಲಾಯನ್ಸ್ ಮಾಲ್), ಬಿ.ಎನ್.ರೋಡ್ ಕೆ.ಎಸ್.ಆರ್.ಟಿ.ಸಿ ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೊರೆ ನಾಲ್ವರ ದೈವ ಚೌಡಮ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ ಸಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಮೈಸೂರು ಮಿತ್ರ — ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಬಸವರಾಜ ಬೊಮ್ಮಾಯಿ 'ಅಪಾಯಿಂಟೆಡ್ ಮುಖ್ಯಮಂತ್ರಿ'

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಟೀಕೆ

ನಾಗಮಂಗಲ, ಜೂ.24(ಮೋಹನ್‌ರಾಜ್/ಮಹೇಶ್)– ಬಸವರಾಜ ಬೊಮ್ಮಾಯಿ ಜನರಿಂದ ಆಯ್ಕೆಯಾದ ಮುಖ್ಯಮಂತ್ರಿಯಲ್ಲ. ಆರ್‌ಎಸ್‌ಎಸ್ ಮತ್ತು ಸಂಘ ಪರಿವಾರದವರು ನೇಮಕ ಮಾಡಿರುವ ಅಪಾಯಿಂಟೆಡ್ ಮುಖ್ಯಮಂತ್ರಿ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಟೀಕಿಸಿದರು.

ತಾಲೂಕಿನ ದೇವಲಾಪುರ ಹೋಬಳಿ ಕೊಂಬಿನ ಕೊಪ್ಪಲು ಗ್ರಾಮದಲ್ಲಿ ಶುಕ್ರವಾರ ನಡೆದ ಅರುವಿನಮ್ಮ ಪರ ಮತ್ತು ಕನಕಭವನದಲ್ಲಿ ಕನಕಮೂರ್ತಿಗೆ ಪುಷ್ಪಾರ್ಚನೆ ಮಾಡಿ, ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಜನಾಭಿಪ್ರಾಯದಿಂದ ಮುಖ್ಯಮಂತ್ರಿಯಾಗದೇ ಆಪರೇಷನ್ ಕಮಲದ ಮೂಲಕ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದಿದೆ. ಬಿಜೆಪಿ ಸರ್ಕಾರ ಸಂಘ ಪರಿವಾರದ ಹಿಡಿತದಲ್ಲಿ ಕೆಲಸ ಮಾಡುತ್ತಿದೆ. ಸಂಘ ಪರಿವಾರ ಮತ್ತು ಆರ್‌ಎಸ್‌ಎಸ್ ಮೇಲ್ವರ್ಗದ ಪರವಿದ್ದು, ಬಡವರ ಪರ ಇಲ್ಲ. ಹಾಗಾಗಿ ಬಿಜೆಪಿ ಸರ್ಕಾರ ಬಡವರ ಪರ ಸರ್ಕಾರವಲ್ಲ. ಅಧಿಕಾರಕ್ಕೆ ಬಂದು 3 ವರ್ಷ ಕಳೆದರೂ ಬಡವರ ಪರ ಒಂದೇ ಒಂದು ಕಾರ್ಯಕ್ರಮ ರೂಪಿಸಿಲ್ಲ. ಬಡವರ, ಹಿಂದುಳಿದವರ, ಶೋಷಿತರ ಪರ ಕೆಲಸ ಮಾಡುವುದನ್ನು ಬಿಟ್ಟು ಹಣ ಲೂಟಿ ಹೊಡೆಯುತ್ತಿದ್ದಾರೆ ಎಂದು ಆರೋಪಿಸಿದರು.

ನಾನು ಈ ಹಿಂದೆ ಶಾಸಕ ಸುರೇಶ್‌ಗೌಡ, ಮಾಜಿ ಶಾಸಕ ಎಲ್.ಆರ್.ಶಿವರಾಮೇಗೌಡ ಪರವಾಗಿ ಸಂದರ್ಭಾನುಸಾರ ಬಂದು ಈ ಕ್ಷೇತ್ರದಲ್ಲಿ ಮತ ಕೇಳಿದ್ದೇನೆ. ಆದರೆ ಈ ಬಾರಿ ಮತ್ತೇ ಚಲುವರಾಯಸ್ವಾಮಿ ಪರವಾಗಿ ಮತ ಕೇಳಲು ಬರುತ್ತೇನೆ. ಜೆಡಿಎಸ್ ಯಾವುದೇ ಕಾರಣಕ್ಕೂ ಸ್ವಂತ ಬಲದ ಮೇಲೆ ಅಧಿಕಾರಕ್ಕೆ ಬರುವುದಿಲ್ಲ. ಜೆಡಿಎಸ್ ಒಂದು ಬಾರಿ ಬಿಜೆಪಿ ಪರವಿದ್ದರೆ ಮತ್ತೊಮ್ಮೆ ಅವರನ್ನು ಟೀಕಿಸುತ್ತಾರೆ ಎಂದು ಛೇಡಿಸಿದರು.



ಇದೇ ವೇಳೆ ಚಲುವರಾಯಸ್ವಾಮಿ ನಿಮ್ಮ ಶಾಸಕರಾಗಬೇಕಾ ಬೇಡ್ವಾ ಎಂದು ಸಭಿಕರನ್ನು ಪ್ರಶ್ನಿಸಿದರು. ಅತ್ತ ಕಡೆಯಿಂದ ಸಿಆರ್‌ಎಸ್ ಕೇವಲ ಶಾಸಕರಲ್ಲ ಅವರು ಮಂತ್ರಿ ಎಂದು ಕಾರ್ಯಕರ್ತನೊಬ್ಬ ಕೂಗಿಕೊಂಡಾಗ ಮೊದಲು ಕಾಂಗ್ರೆಸ್ ಅನ್ನು ಅಧಿಕಾರಕ್ಕೆ ತನ್ನಿ ಆಮೇಲೆ ಮಂತ್ರಿ ಮಾಡೋಣ, ಆತ ಜಿಲ್ಲೆಗೆ ಮಾತ್ರ ನಾಯಕರಲ್ಲ, ರಾಜ್ಯದ ನಾಯಕ ಎಂದರು.

ಪರಿಷತ್ ಚುನಾವಣೆಯಲ್ಲಿ ದಿನೇಶ್ ಗೂಳಿಗೌಡ ಹಾಗೂ ಮಧು ಜಿ.ಮಾದೇಗೌಡ ಗೆಲ್ಲಲು ಚಲುವರಾಯಸ್ವಾಮಿ ಕಾರಣ. ಈ ರಾಜ್ಯಕ್ಕೆ ಒಳ್ಳೆಯದಾಗಲು ಕಾಂಗ್ರೆಸ್ ಅಧಿಕಾರಕ್ಕೆ ಬರಬೇಕು ಎಂದರು.

46 ಸಾವಿರ ಯುವಕರನ್ನು ಅಗ್ನಿ ವೀರರನ್ನಾಗಿ ಕೇಂದ್ರ ಸರ್ಕಾರ ತೆಗೆದುಕೊಳ್ಳುತ್ತಿದೆ. 17 ವರ್ಷದ ಯುವಕರನ್ನು ತೆಗೆದುಕೊಂಡು 4 ವರ್ಷದ ನಂತರ ತೆಗೆದು ಹಾಕುತ್ತಾರೆ. ಆಗ ಅವರಿಗೆ 21 ವರ್ಷ ವಯಸ್ಸಾಗಿರುತ್ತದೆ. ಆ ಯುವಕರು ಮಾಜಿ ಸೈನಿಕರು ಅಲ್ಲ, ಪಿಂಚಣಿಯು ಇಲ್ಲ, ಇದಕ್ಕೆ ನಮ್ಮ ವಿರೋಧವಿದೆ. ನೇಮಿಸಿಕೊಂಡ ಯುವಕರಿಗೆ 10–15 ವರ್ಷ ಕೆಲಸ ಕೊಡಿ, ಅವರಿಗೆ ಪಿಂಚಣಿ ಕೊಡಿ ಇದು ನಮ್ಮ ಒತ್ತಾಯ ಎಂದರು.

28 ಇಂಚಿನ ಎದೆ ಇದ್ದರೆ ಆಗಲ್ಲ ತಾಯಿ ಹೃದಯ ಬೇಕು. ಅಚ್ಛೇದಿನ್ ಆಯೇಗಾ ಎನ್ನುತ್ತಾರೆ. ಆದರೆ ಅದು ಅಧಿಕಾರದಲ್ಲಿರುವವರಿಗೆ ಮಾತ್ರ ಅಚ್ಛೇದಿನ್ ಬಂದಿದೆ. ಪ್ರತಿಯೊಬ್ಬರಿಗೂ 15 ಲಕ್ಷ ಕೊಡ್ತೀನಿ ಅಂದ್ರು ಕೊಡಲಿಲ್ಲ ಎಂದು ಮೋದಿಯನ್ನು ಛೇಡಿಸಿದರು.

ಇದೇ ವೇಳೆ ಸಿದ್ದರಾಮಯ್ಯಗೆ ಕಂಬಳಿ, ಕಂಬಳಿಯ ಶಾಲು ಹೊದಿಸಿ, ಬಂಡೂರು ಕುರಿಮರಿ ನೀಡಿ ಅಭಿನಂದಿಸಲಾಯಿತು. ಜೊತೆಗೆ ತಲೆಗೆ ಕರಡಿ ಪೇಟ, ಡಮರುಗ ನೀಡಿದಾಗ ಅದನ್ನು ಧರಿಸಿ ಸಿದ್ದರಾಮಯ್ಯ ಸಂತಸಪಟ್ಟರು.

ಮಾಜಿ ಸಚಿವ ಎನ್.ಚಲುವರಾಯಸ್ವಾಮಿ ಮಾತನಾಡಿ, ಈ ಗ್ರಾಮದಲ್ಲಿ ಕನಕಭವನ ನಿರ್ಮಾಣ ಮಾಡಲು ದಾನಿಗಳೊಟ್ಟಿಗೆ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದ ವೇಳೆ 25 ಲಕ್ಷ, ಮಾಜಿ ಎಂಎಲ್‌ಸಿ ಅಪ್ಪಾಜಿಗೌಡ 2.5 ಲಕ್ಷ, ನನ್ನ ಶಾಸಕತ್ವದ ಅವಧಿಯಲ್ಲಿ 7 ಲಕ್ಷ ಅನುದಾನ ನೀಡಿದ್ದೇನೆ. ಆದರೆ ಕನಕಭವನ ಉದ್ಘಾಟನೆಗೆ ಶಿಷ್ಟಾಚಾರದ ನೆಪವೊಡ್ಡಿ ಈಗಿನ ಶಾಸಕರು ಅಡ್ಡಿಪಡಿಸಿದ್ದಾರೆ. ನಾವು ರಾಜಕಾರಣ ಮಾಡಬೇಕೆಂದರೆ ಮಾಡುತ್ತೇವೆ. 1994 ರಿಂದ ಹೇಗೆ ರಾಜಕಾರಣ ಮಾಡಬೇಕು ಎಂಬುದನ್ನು ತೋರಿಸಿಕೊಟ್ಟಿದ್ದೇವೆ. ಈಗ ತಾಳ್ಮೆಯಿಂದ ಇದ್ದೇವೆ ಅಷ್ಟೇ ಎಂದು ಶಾಸಕ ಸುರೇಶ್‌ಗೌಡ ಹೆಸರೇಳದೆ ಎಚ್ಚರಿಕೆ ನೀಡಿದರು.

ವೇದಿಕೆಯಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಪ್ರಸನ್ನ, ಮಾಜಿ ಅಧ್ಯಕ್ಷರಾದ ಹೆಚ್.ಟಿ.ಕೃಷ್ಣೇಗೌಡ, ಎನ್.ಜೆ.ರಾಜೇಶ್, ರಾಜ್ಯ ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ತಿಮ್ಮರಾಯಿಗೌಡ, ಜಿಪಂ ಮಾಜಿ ಸದಸ್ಯರಾದ ಹುಚ್ಚೇಗೌಡ, ಸಾವಿತ್ರಮ್ಮ, ಮನ್‌ಮುಲ್ ಮಾಜಿ ಅಧ್ಯಕ್ಷ ಜವರೇಗೌಡ, ಜಿಪಂ ಸದಸ್ಯರಾದ ಹುಚ್ಚೇಗೌಡ, ಸಾವಿತ್ರಮ್ಮ, ಮನ್‌ಮುಲ್ ಮಾಜಿ ಅಧ್ಯಕ್ಷ ಜವರೇಗೌಡ ಇತರರಿದ್ದರು.

> ಜೆಡಿಎಸ್ ಅವಕಾಶವಾದಿ ಪಕ್ಷ.ಅವರನ್ನು ಗೆಲ್ಲಿಸುವುದರಿಂದ ಏನು ಪ್ರಯೋಜನವಿಲ್ಲ. ಚಲುವರಾಯಸ್ವಾಮಿ ಗೆದ್ದರೆ ನಾನು ಗೆದ್ದಂತೆ. ನಿಮ್ಮ ಆಶಿರ್ವಾದವೇ ನಮಗೆ ಶ್ರೀರಕ್ಷೆ. ಕುರ್ಚಿ ಸಿಗಲು ನಿಮ್ಮ ಆಶೀರ್ವಾದ ಬೇಕು. ನಾವು ವಿಧಾನಸೌಧಕ್ಕೆ ಹೋಗಲು ಚಲುವರಾಯಸ್ವಾಮಿಯನ್ನು ಗೆಲ್ಲಿಸಿಕೊಡಿ. ಹೆಚ್.ಡಿ.ದೇವೇಗೌಡರು ಬಂದು ಇಲ್ಲಿ ಅತ್ತು ಚಲುವರಾಯಸ್ವಾಮಿಯನ್ನು ಕಳೆದ ಬಾರಿ ಸೋಲಿಸಿದ್ದಾರೆ. ಮತ್ತೆ ಬಂದು ಕಣ್ಣೀರು ಹಾಕುತ್ತಾರೆ.
>
> –ಸಿದ್ದರಾಮಯ್ಯ, ಮಾಜಿ ಮುಖ್ಯಮಂತ್ರಿ

ಹೊತ್ತಿ ಉರಿದ ಸ್ಕೂಟರ್: ಸವಾರರಿಬ್ಬರಿಗೆ ತೀವ್ರ ಸುಟ್ಟ ಗಾಯ

ಶ್ರೀರಂಗಪಟ್ಟಣ, ಜೂ.24– ಕೆಎಸ್‌ಆರ್‌ಟಿಸಿ ಬಸ್ ಓವರ್‌ಟೇಕ್ ಮಾಡಲು ಹೋಗಿ ಸವಾರನ ನಿಯಂತ್ರಣ ತಪ್ಪಿದ ಸ್ಕೂಟರ್ ಕೆಳಗೆ ಬಿದ್ದ ಪರಿಣಾಮ ಇಬ್ಬರು ತೀವ್ರ ಗಾಯಗೊಂಡು, ಸ್ಕೂಟರ್ ಬೆಂಕಿಗೆ ಆಹುತಿಯಾದ ಘಟನೆ ತಾಲೂಕಿನ ದರಸಗುಪ್ಪೆ ಬಳಿ ಶುಕ್ರವಾರ ನಡೆದಿದೆ.



ಮೈಸೂರಿನ ಟೀಚರ್ಸ್ ಲೇಔಟ್ ನಿವಾಸಿಗಳಾದ ಶಿವರಾಮು(73), ಅನಂತರಾಮು(50) ತೀವ್ರವಾಗಿ ಗಾಯಗೊಂಡವರು. ಶಿವರಾಮು ಅವರು ಅನಂತರಾಮು ಅವರೊಂದಿಗೆ ತಮ್ಮ ಜುಪಿಟರ್ ಸ್ಕೂಟರ್‌ನಲ್ಲಿ ಸಂಬಂಧಿಕರ ಗೃಹಪ್ರವೇಶಕ್ಕೆ ಮೈಸೂರಿನಿಂದ ಪಾಂಡವಪುರ ತಾಲೂಕಿನ ಕೆ.ಬೆಟ್ಟಹಳ್ಳಿಗೆ ತೆರಳುತ್ತಿದ್ದರು. ದರಸಗುಪ್ಪೆ ಬಳಿ ಕೆಎಸ್‌ಆರ್‌ಟಿಸಿ ಬಸ್ ಓವರ್‌ಟೇಕ್ ಮಾಡಲು ಹೋದ ವೇಳೆ ಎದುರಿನಿಂದ ಮತ್ತೊಂದು ಬಸ್ ಬಂದಿದೆ. ಈ ವೇಳೆ ನಿಯಂತ್ರಣ ತಪ್ಪಿದ ಸ್ಕೂಟರ್ ಕೆಳಗೆ ಬಿದ್ದ ರಭಸಕ್ಕೆ ಸ್ಕೂಟರ್‌ನಿಂದ ಪೆಟ್ರೋಲ್ ಸುರಿದು ಬೆಂಕಿ ಹೊತ್ತುಕೊಂಡಿದೆ. ಈ ವೇಳೆ ಸ್ಕೂಟರ್ ಕೆಳಗೆ ಸಿಲುಕಿಕೊಂಡಿದ್ದ ಶಿವರಾಮು ಅವರ ದೇಹ ಭಾಗಶಃ ಸುಟ್ಟು ಹೋಗಿದ್ದು, ಅನಂತರಾಮು ಅವರ ಕಾಲು ಮುರಿದಿದೆ. ಈ ವೇಳೆ ಸ್ಥಳೀಯರು ಅವರಿಬ್ಬರನ್ನು ರಕ್ಷಿಸಿ ಚಿಕಿತ್ಸೆಗಾಗಿ ಆಂಬುಲೆನ್ಸ್‌ನಲ್ಲಿ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ರವಾನಿಸಿದ್ದಾರೆ ಎನ್ನಲಾಗಿದೆ. ಈ ಸಂಬಂಧ ಶ್ರೀರಂಗಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮನೆ ಹಿಂದೆ ಗಾಂಜಾ: ವ್ಯಕ್ತಿ ಬಂಧನ

ಶ್ರೀರಂಗಪಟ್ಟಣ, ಜೂ.24– ಮನೆ ಹಿಂಭಾಗ ಗಾಂಜಾ ಬೆಳೆದಿದ್ದ ವ್ಯಕ್ತಿಯೋರ್ವನನ್ನು ಶ್ರೀರಂಗಪಟ್ಟಣ ಟೌನ್ ಪೊಲೀಸರು ಮಾಲು ಸಮೇತ ಬಂಧಿಸಿದ್ದಾರೆ.

ತಾಲೂಕಿನ ಲಾಲಿಪಾಳ್ಯ ಗ್ರಾಮದ ನಂದಿಶ್ (37) ಬಂಧಿತ ಆರೋಪಿ. ಈತ ಮನೆಯ ಹಿಂಭಾಗ ಅಕ್ರಮವಾಗಿ ಗಾಂಜಾ ಬೆಳೆದಿದ್ದ. ಈ ಬಗ್ಗೆ ಬಂದ ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ ಶ್ರೀರಂಗಪಟ್ಟಣ ಟೌನ್ ಪೊಲೀಸರು 2 ಕೆಜಿ ತೂಕದ ಗಾಂಜಾ ಗಿಡ ವಶಪಡಿಸಿಕೊಂಡು, ಆರೋಪಿ ವಿರುದ್ಧ ಪ್ರಕರಣ ದಾಖಲಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಯುವಕ ಆತ್ಮಹತ್ಯೆ

ಶ್ರೀರಂಗಪಟ್ಟಣ, ಜೂ.24– ಯುವಕನೋರ್ವ ರೈಲಿಗೆ ತಲೆಕೊಟ್ಟು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಪಟ್ಟಣದ ರೈಲ್ವೆ ನಿಲ್ದಾಣದ ಬಳಿ ಗುರುವಾರ ತಡರಾತ್ರಿ ನಡೆದಿದೆ.

ಪಟ್ಟಣದ ಪುರಸಭಾ ವ್ಯಾಪ್ತಿಯ ಬೂದಿಗುಂಡಿ ಬಡಾವಣೆ ನಿವಾಸಿ ಶ್ರೀಕಂಠ ಅವರ ಪುತ್ರ ಮಂಜು (23) ಆತ್ಮಹತ್ಯೆ ಮಾಡಿಕೊಂಡವರು. ಮಾನಸಿಕ ಖಿನ್ನತೆಯಿಂದ ಬಳಲುತ್ತಿದ್ದ ಅವರು ಮನನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎನ್ನಲಾಗಿದೆ. ಸ್ಥಳಕ್ಕೆ ರೈಲ್ವೆ ಪೊಲೀಸರು ಭೇಟಿ ನೀಡಿ ಪರಿಶೀಲಿಸಿ, ಶವವನ್ನು ಪಟ್ಟಣದ ಆಸ್ಪತ್ರೆ ಶವಾಗಾರಕ್ಕೆ ರವಾನಿಸಿದ್ದಾರೆ. ಈ ಸಂಬಂಧ ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಳುವಾಗಿದ್ದ ಹಳ್ಳಿಕಾರ್ ತಳಿ ಎತ್ತುಗಳು ಪತ್ತೆ

ಶ್ರೀರಂಗಪಟ್ಟಣ, ಜೂ.24– ತಾಲೂಕಿನ ಚಂದಗಾಲು ಗ್ರಾಮದಲ್ಲಿ ಬುಧವಾರ ರಾತ್ರಿ ಕಳುವಾಗಿದ್ದ ಹಳ್ಳಿಕಾರ್ ತಳಿಯ ಜೋಡಿ ಎತ್ತುಗಳನ್ನು ಪತ್ತೆ ಹಚ್ಚುವಲ್ಲಿ ಶ್ರೀರಂಗಪಟ್ಟಣ ಗ್ರಾಮಾಂತರ ಠಾಣೆ ಪೊಲೀಸರು ಯಶಸ್ವಿಯಾಗಿದ್ದಾರೆ.



ಚಂದಗಾಲು ಗ್ರಾಮದ ನಿವಾಸಿ ಪುರುಷೋತ್ತಮ್ ಅವರಿಗೆ ಸೇರಿದ ಒಂದೂವರೆ ಲಕ್ಷ ರೂ. ಬೆಲೆಬಾಳುವ ಎತ್ತುಗಳನ್ನು ಕೊಟ್ಟಿಗೆಯಲ್ಲಿ ಕಟ್ಟಿ ಹಾಕಿದ ವೇಳೆ ದುಷ್ಕರ್ಮಿಗಳು ಬುಧವಾರ ತಡರಾತ್ರಿ ಕಳವು ಮಾಡಿದರು. ಈ ಸಂಬಂಧ ಶ್ರೀರಂಗಪಟ್ಟಣ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಆರೋಪಿಗಳ ಪತ್ತೆಗೆ ತನಿಖೆ ಕೈಗೊಂಡಿದ್ದ ಪೊಲೀಸರು ಚನ್ನರಾಯಪಟ್ಟಣ ಸಂತೆಯಲ್ಲಿ 80 ಸಾವಿರ ರೂ.ಗಳಿಗೆ ಎತ್ತುಗಳನ್ನು ಮಾರಾಟ ಮಾಡಿರುವ ಬಗ್ಗೆ ಬಂದ ಮಾಹಿತಿ ಮೇರೆಗೆ ಎತ್ತುಗಳನ್ನು ಖರೀದಿಸಿದ ವ್ಯಕ್ತಿಯನ್ನು ಠಾಣೆಗೆ ಕರೆತಂದು ವಿಚಾರಣೆಗೆ ಒಳಪಡಿಸಿದ್ದಾರೆ. ಅಲ್ಲದೇ ಎತ್ತುಗಳನ್ನು ವಶಕ್ಕೆ ಪಡೆದು ಮಾಲೀಕನ ವಶಕ್ಕೆ ನೀಡಿದ್ದಾರೆ.

ಆರ್‌ಎಪಿಸಿಎಂಎಸ್ ಚುನಾವಣೆ ಫಲಿತಾಂಶ ಪ್ರಕಟ

ಸಮಬಲ ಕಾಯ್ದುಕೊಂಡ ಜೆಡಿಎಸ್, ಕಾಂಗ್ರೆಸ್

ಅಧಿಕಾರ ಚುಕ್ಕಾಣಿ ಹಿಡಿಯಲು ಬಿಜೆಪಿ ಬೆಂಬಲ ಅನಿವಾರ್ಯ



ಮಂಡ್ಯ, ಜೂ.24(ಮೋಹನ್‌ರಾಜ್)– ರೈತರ ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದ (ಆರ್‌ಎಪಿಸಿಎಂಎಸ್) ಆಡಳಿತ ಮಂಡಳಿಯ 11 ಸ್ಥಾನಗಳಿಗೆ ನಡೆದಿದ್ದ ಚುನಾವಣೆಯಲ್ಲಿ ಕಾಂಗ್ರೆಸ್ ಹಾಗೂ ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳು ತಲಾ 5 ಸ್ಥಾನಗಳಲ್ಲಿ ಜಯಗಳಿಸಿದ್ದು, ಬಿಜೆಪಿ ಒಂದು ಸ್ಥಾನ ಪಡೆದಿದೆ.

ಎರಡೂ ಪ್ರಮುಖ ಪಕ್ಷಗಳ ಬೆಂಬಲಿತರು ಸಮಬಲದ ಗೆಲುವು ಸಾಧಿಸಿರುವುದರಿಂದ ಸಂಘದ ಆಡಳಿತದ ಚುಕ್ಕಾಣಿ ಹಿಡಿಯಲು ಬಿಜೆಪಿ ಬೆಂಬಲಿತ ನಿರ್ದೇಶಕಿ ಹಾಗೂ ಡಿಸಿಸಿ ಬ್ಯಾಂಕ್, ಸರ್ಕಾರದ ನಾಮನಿರ್ದೇಶಿತರ ನೆರವು ಅನಿವಾರ್ಯವಾಗಿದೆ.

ಆಡಳಿತ ಮಂಡಳಿಯ ಒಟ್ಟು 12 ನಿರ್ದೇಶಕ ಸ್ಥಾನಗಳ ಪೈಕಿ ವ್ಯವಸಾಯ ಸೇವಾ ಸಹಕಾರ ಸಂಘ (ವಿಎಸ್‌ಎಸ್‌ಎನ್) ಪ್ರತಿನಿಧಿಗಳಿಂದ 4 ಸ್ಥಾನಕ್ಕೆ ಕಾಂಗ್ರೆಸ್ ಹಾಗೂ ಜೆಡಿಎಸ್ ನಿಂದ ತಲಾ ನಾಲ್ವರು ಅಭ್ಯರ್ಥಿಗಳು ಸೇರಿ ಒಟ್ಟು 8 ಮಂದಿ ಕಣದಲ್ಲಿದ್ದರು. ಈ ಪೈಕಿ ಕಾಂಗ್ರೆಸ್ ಬೆಂಬಲಿತರಾದ ಯು.ಸಿ.ಶೇಖರ್, ಬಿ.ಪಿ.ಸೋಮಶೇಖರ್, ಕೆ.ಸಿ.ರವೀಂದ್ರ ಹಾಗೂ ಪುನೀತ್ ಎನ್.ವಿಜೇತರಾದರೆ, ಜೆಡಿಎಸ್ ಬೆಂಬಲಿತರಾದ ಸ್ವಾಮಿ, ಹೆಚ್.ಬಿ.ಸಚ್ಚಿದಾನಂದ, ಎಸ್.ಸಿದ್ದೇಗೌಡ ಹಾಗೂ ಪಾರ್ಥಸಾರಥಿ ಪರಾಭವಗೊಂಡಿದ್ದಾರೆ.

ಸಾಮಾನ್ಯ ಷೇರುದಾರರ ಪ್ರತಿನಿಧಿಗಳಾಗಿ 8 ಸ್ಥಾನಗಳ ಪೈಕಿ, ಪರಿಶಿಷ್ಟ ಪಂಗಡದ ಅಭ್ಯರ್ಥಿ ಸ್ಪರ್ಧೆಯಲ್ಲಿಲ್ಲದ ಕಾರಣ ಉಳಿದ 7 ನಿರ್ದೇಶಕ ಸ್ಥಾನಗಳಿಗೆ 21 ಮಂದಿ ಸ್ಪರ್ಧಾ ಕಣದಲ್ಲಿದ್ದು, ಕಾಂಗ್ರೆಸ್ ಹಾಗೂ ಜೆಡಿಎಸ್ ಬೆಂಬಲಿತರು ತಲಾ 7 ಮಂದಿ ಹಾಗೂ ಬಿಜೆಪಿ ಬೆಂಬಲಿತ ಸ್ಪರ್ಧಾಳಾಗಿ ಹೇಮಲತಾ ಬಸವರಾಜು ಹಾಗೂ 6 ಮಂದಿ ಪಕ್ಷೇತರರು ಅದೃಷ್ಟ ಪರೀಕ್ಷೆಗೆ ಮುಂದಾಗಿದ್ದರು.

ಈ ಪೈಕಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಜಿ.ಎಸ್.ಅಂಜನಾ ಶ್ರೀಕಾಂತ್, ಬಿಜೆಪಿ ಬೆಂಬಲಿತ ಅಭ್ಯರ್ಥಿ ಹೇಮಲತಾ ಕೆ. ಹಾಗೂ ಜೆಡಿಎಸ್ ಬೆಂಬಲಿತರಾಗಿ ಸ್ಪರ್ಧಿಸಿದ್ದ ಜಿ.ಎನ್.ಉದಯ್ ಕುಮಾರ್, ಪಾಪಯ್ಯ ಸಿ.ಕೆ. ಮಹೇಶ್, ಜೆ.ಪಿ.ಯೋಗೇಶ್‌ಕುಮಾರ್, ಹೆಚ್.ಎಸ್. ಶ್ರೀಧರ ಎಂ.ಪಿ. ಚುನಾಯಿತರಾಗಿದ್ದಾರೆ. ಬಿಸಿಎಂ (ಬಿ) ವರ್ಗದ ಒಂದು ನಿರ್ದೇಶಕ ಸ್ಥಾನಕ್ಕೆ ಜಿ.ಎನ್.ಉದಯ್ ಕುಮಾರ್ ವಿಜೇತರಾಗಿದ್ದು, ನಾಗೇಶ್ ಎಸ್.ಸಿ. ನಾಗೇಶ್ ಟಿ.ಪಿ. ಯೋಗೇಶ್ ಸಿ.ಎ ಪರಾಭವಗೊಂಡಿದ್ದಾರೆ. ಬಿಸಿಎಂ (ಎ) ವರ್ಗದ ಒಂದು ನಿರ್ದೇಶಕ ಸ್ಥಾನಕ್ಕೆ ಶ್ರೀಧರ ಎಂ.ಪಿ. ಚುನಾಯಿತರಾಗಿದ್ದು, ಚನ್ನೇಗೌಡ ಕೆ. ಸೋಲು ಕಂಡಿದ್ದಾರೆ.

ಸಾಮಾನ್ಯ ಮಹಿಳಾ ಕ್ಷೇತ್ರದ ಎರಡು ನಿರ್ದೇಶಕ ಸ್ಥಾನಕ್ಕೆ ಕೆ.ಹೇಮಲತಾ, ಜಿ.ಎಸ್. ಅಂಜನಾ ಶ್ರೀಕಾಂತ್ ಚುನಾಯಿತರಾದರೆ, ಜೆಡಿಎಸ್ ಬೆಂಬಲಿತ ಕೆ.ಅನುಪಮ, ಎಂ.ಸತ್ಯಕುಮಾರಿ, ಕಾಂಗ್ರೆಸ್ ಬೆಂಬಲಿತ ಸುಜಾತ ಹಾಗೂ ಪಕ್ಷೇತರ ಸ್ಪರ್ಧಾಳು ಸುನಂದಮ್ಮ ಟಿ.ಸಿ. ಪರಾಭವಗೊಂಡಿದ್ದಾರೆ.

ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಒಂದು ನಿರ್ದೇಶಕ ಸ್ಥಾನಕ್ಕೆ ಜೆಡಿಎಸ್ ಬೆಂಬಲಿತ ಸಿ.ಕೆ.ಪಾಪಯ್ಯ ಚುನಾಯಿತರಾಗಿದ್ದು, ಪ್ರತಿಸ್ಪರ್ಧಿಗಳಾಗಿದ್ದ ಕಾಂಗ್ರೆಸ್ ಬೆಂಬಲಿತ ಹೆಚ್.ಬಿ.ಜಯಶಂಕರ ಹಾಗೂ ಕೃಷ್ಣಮೂರ್ತಿ ಪರಾಭವಗೊಂಡಿದ್ದಾರೆ. ಸಾಮಾನ್ಯ ಕ್ಷೇತ್ರದ ಎರಡು ನಿರ್ದೇಶಕ ಸ್ಥಾನಕ್ಕೆ ಜೆಡಿಎಸ್ ಬೆಂಬಲಿತರಾದ ಮಹೇಶ್ ಜೆ.ಪಿ.ಯೋಗೇಶ್ ಕುಮಾರ್ ಹೆಚ್.ಎಸ್. ವಿಜೇತರಾಗಿದ್ದು, ಸ್ಪರ್ಧಾ ಕಣದಲ್ಲಿದ್ದ ಕಾಂಗ್ರೆಸ್ ಬೆಂಬಲಿತರಾದ ಚಂದ್ರ ಬಿ, ಎಂ.ಎಸ್.ಮಂಟೇಸ್ವಾಮಿ ಹಾಗೂ ಪಕ್ಷೇತರರಾಗಿ ಸ್ಪರ್ಧಿಸಿದ್ದ ಜಿ.ಹೆಚ್.ನಾಗೇಶ್, ಎಂ.ಎಲ್. ಶಂಕರಲಿಂಗೇಗೌಡ ಪರಾಭವಗೊಂಡಿದ್ದಾರೆ.

ಕನ್ನಡ ಭಾಷೆ ಬೆಳವಣಿಗೆಗೆ ವಚನಕಾರರ ಕೊಡುಗೆ ಅಪಾರ

ಮೈಸೂರು, ಜೂ.24– ಹನ್ನೆರಡನೆ ಶತಮಾನದ ವಚನಕಾರರು ವಚನ ಸಾಹಿತ್ಯ ರಚನೆ ಮೂಲಕ ಕನ್ನಡ ಭಾಷೆ ಬೆಳವಣಿಗೆ ಸಾಕಷ್ಟು ಕೊಡುಗೆ ನೀಡಿದ್ದಾರೆ ಎಂದು ಮೈಸೂರು ವಿವಿ ಗಾಂಧಿಭವನದ ಮಾಜಿ ನಿರ್ದೇಶಕ ಡಾ.ಎಸ್.ಶಿವರಾಜಪ್ಪ ಅಭಿಪ್ರಾಯಪಟ್ಟಿದ್ದಾರೆ. ಮೈಸೂರು ಜೆ.ಪಿ.ನಗರದಲ್ಲಿರುವ ಅಕ್ಕಮಹಾದೇವಿ ಪ್ರತಿಮೆ ಬಳಿ ಜೆಪಿ ನಗರ ಶರಣ ವೇದಿಕೆ ವತಿಯಿಂದ ಆಯೋಜಿಸಿದ್ದ ಬಸವ ಜಯಂತಿ ಹಾಗೂ ಅಕ್ಕಮಹಾದೇವಿ ಮಾಸಿಕ ಉಪನ್ಯಾಸ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ವಚನ ಸಾಹಿತ್ಯಕ್ಕೆ ಬಸವಣ್ಣ, ಅಕ್ಕ ಮಹಾದೇವಿ ಸೇರಿದಂತೆ ಇತರೆ ಶರಣರು ನೀಡಿರುವ ಕೊಡುಗೆ ಅಪಾರ. ಅಲ್ಲದೆ ವಚನ ಚಳವಳಿ ಮೂಲಕ ಸಮಾಜ ಸುಧಾರಣೆಗೂ ಶ್ರಮಿಸಿದ್ದಾರೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಶರಣ ವೇದಿಕೆಯ ಅಧ್ಯಕ್ಷ ಎಸ್.ಪುಟ್ಟ ರಾಜಪ್ಪ, ಕಾರ್ಯದರ್ಶಿ ಜೆ. ನಾಗೇಂದ್ರಕುಮಾರ್ ಜೆ , ಖಜಾಂಜಿ ಯು.ಎಸ್. ಸದಾಶಿವ, ನಿರ್ದೇಶಕರಾದ ಎಸ್.ನಂದೀಶ, ಬಿ.ಎಂ.ಸುಧಾಕರ್, ಎಸ್.ಪರಮೇಶ್ವರಪ್ಪ, ನಾಗರಾಜು, ಎಚ್.ವಿ.ಚಂದ್ರಶೇಖರ್, ಮಹದೇವಸ್ವಾಮಿ, ಶರಣ ಸಿದ್ದಪ್ಪ ಹಾಜರಿದ್ದರು.

ಡಿಸೆಂಬರ್‌ನಲ್ಲಿ ರಾಜೀನಾಮೆ ನೀಡಿ ಕಾಂಗ್ರೆಸ್ ಸೇರುವೆ

ಜೆಡಿಎಸ್ ಉಚ್ಚಾಟಿತ ಶಾಸಕ ಎಸ್.ಆರ್. ಶ್ರೀನಿವಾಸ್

ತುಮಕೂರು, ಜೂ.24– ಶಾಸಕ ಸ್ಥಾನಕ್ಕೆ ಡಿಸೆಂಬರ್ ನಂತರ ರಾಜೀನಾಮೆ ಸಲ್ಲಿಸುತ್ತೇನೆ ಎಂದು ಜೆಡಿಎಸ್‌ನಿಂದ ಉಚ್ಚಾಟನೆಗೊಂಡಿರುವ ಗುಬ್ಬಿ ಶಾಸಕ ಎಸ್.ಆರ್.ಶ್ರೀನಿವಾಸ್ ಹೇಳಿದರು.



ಸುದ್ದಿಗಾರರೊಂದಿಗೆ ಮಾತನಾಡಿ, ಸದ್ಯಕ್ಕೆ ರಾಜೀನಾಮೆ ಬಗ್ಗೆ ಯೋಚಿಸಿಲ್ಲ. ಪಕ್ಷದಿಂದ ಉಚ್ಚಾಟಿಸಿರುವುದರಿಂದ ಅವಮಾನ, ಮುಜುಗರ ಆಗಿಲ್ಲ. ಇದು ಮೊದಲೇ ಗೊತ್ತಿರುವ ವಿಚಾರ. ಗುಬ್ಬಿ ಕ್ಷೇತ್ರಕ್ಕೆ ಜೆಡಿಎಸ್ ಅಭ್ಯರ್ಥಿ ಘೋಷಿಸಿದ ಸಮಯದಲ್ಲೇ ಇಂತಹ ಬೆಳವಣಿಗೆಗಳು ನಡೆಯುತ್ತವೆ ಎಂಬುದು ಗೊತ್ತಿತ್ತು ಎಂದರು. ಇದರಿಂದ ನನಗೇನೂ ಬೇಸರವಿಲ್ಲ. ಈ ವಿದ್ಯಮಾನವನ್ನು ನಾನು ಸನ್ಮಾನ, ಅವಮಾನ, ಮುಜುಗರ ಅಂದುಕೊಳ್ಳುವುದಿಲ್ಲ. ಒಂದು ವರ್ಷದ ಹಿಂದೆಯೇ ಇಲ್ಲಿ ಅಭ್ಯರ್ಥಿಯನ್ನು ಘೋಷಿಸಿದ್ದ ನಂತರ ಉಚ್ಚಾಟನೆಯ ನಿರೀಕ್ಷೆ ನನಗಿತ್ತು ಎಂದು ಶ್ರೀನಿವಾಸ್ ಹೇಳಿದರು.

ಜೆಡಿಎಸ್ ವರಿಷ್ಠರಿಗೆ ನಾನು ಬೇಕಾಗಿರಲಿಲ್ಲ, ಹಾಗಾಗಿ ಈ ಉಚ್ಚಾಟನೆಯಲ್ಲಿ ನನಗೇನೂ ಹೊಸತನ ಕಾಣುತ್ತಿಲ್ಲ. ನಾನು ಜೆಡಿಎಸ್ ಪಕ್ಷದಿಂದ ಗೆದ್ದಿದ್ದೇನೆ, ಅದಕ್ಕೆ ರಾಜೀನಾಮೆಯನ್ನು ಕೊಡಬೇಕು. ಡಿಸೆಂಬರ್ ನಂತರ ನಾನು ರಾಜೀನಾಮೆ ನೀಡುತ್ತೇನೆ. ಕಾರ್ಯಕರ್ತರು ಮತ್ತು ಸ್ಥಳೀಯ ಮುಖಂಡರ ಜೊತೆ ಸಮಾಲೋಚನೆ ನಡೆಸಿ ಮುಂದಿನ ನಿರ್ಧಾರವನ್ನು ತೆಗೆದುಕೊಳ್ಳುವೆ ಎಂದು ಎಸ್.ಆರ್.ಶ್ರೀನಿವಾಸ್ ಸ್ಪಷ್ಟಪಡಿಸಿದರು.

ಕರ್ನಾಟಕ ಕಾಂಗ್ರೆಸ್ ಅಧ್ಯಕ್ಷ ಡಿಕೆ ಶಿವಕುಮಾರ್ ಮತ್ತು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರೊಂದಿಗೆ ಹಲವು ತಿಂಗಳುಗಳಿಂದ ಉತ್ತಮ ಒಡನಾಟ ಹೊಂದಿದ್ದ ಅವರು, 2023ರ ಚುನಾವಣೆಯಲ್ಲಿ ತಮ್ಮ ವಿರುದ್ಧ ಸ್ಪರ್ಧಿಸುವಂತೆ ಜೆಡಿಎಸ್ ನಾಯಕ ಹಾಗೂ ಮಾಜಿ ಸಿಎಂ ಎಚ್‌ಡಿ ಕುಮಾರಸ್ವಾಮಿ ಅವರಿಗೆ ಸವಾಲು ಹಾಕಿದ್ದನ್ನು ಇಲ್ಲಿ ಸ್ಮರಿಸಬಹುದು. ಜೆಡಿಎಸ್ ಈಗಾಗಲೇ ಗುಬ್ಬಿಯಿಂದ ಒಕ್ಕಲಿಗ ನಾಯಕ ಬಿ.ಎಸ್.ನಾಗರಾಜು ಅವರನ್ನು ಕಣಕ್ಕಿಳಿಸಲು ನಿರ್ಧರಿಸಿದೆ. ಶ್ರೀನಿವಾಸ್ ಮತ್ತು ಕೋಲಾರ ಶಾಸಕ ಕೆ.ಶ್ರೀನಿವಾಸಗೌಡ ಅವರನ್ನು ಪಕ್ಷಾಂತರ ನಿಷೇಧ ಕಾಯ್ದೆಯಡಿ ಅನರ್ಹಗೊಳಿಸುವಂತೆ ಕೋರಿ ಸ್ಪೀಕರ್‌ಗೆ ಶೀಘ್ರವೇ ಮನವಿ ಸಲ್ಲಿಸಲು ಜೆಡಿಎಸ್ ನಿರ್ಧರಿಸಿದೆ.



ನಾಡಪ್ರಭು ಕೆಂಪೇಗೌಡ ಜಯಂತಿ ಅಂಗವಾಗಿ ಹಮ್ಮಿಕೊಂಡಿರುವ ಕೆಂಪೇಗೌಡರ ರಥಯಾತ್ರೆಯನ್ನು ಮೈಸೂರಿನ ಹೆಬ್ಬಾಳಿನ ಅಭಿಷೇಕ್ ವೃತ್ತದಲ್ಲಿ ಸ್ವಾಗತಿಸಲಾಯಿತು. ಈ ವೇಳೆ ಪಾಲಿಕೆ ಸದಸ್ಯರಾದ ಪ್ರೇಮಾ ಶಂಕರೇಗೌಡ, ಕೆ.ವಿ.ಶ್ರೀಧರ್, ಬಿಜೆಪಿ ಯುವಮೋರ್ಚಾ ನಗರಾಧ್ಯಕ್ಷ ಕಿರಣ್‌ಗೌಡ, ಶ್ರೀನಿವಾಸ್, ಗೋವಿಂದರಾಜ್, ಕೇಶವಣ್ಣ, ಜಗದೀಶ್, ಚೆಲುವರಾಜ್, ನಿಶಾಂತ್ ರೆಡ್ಡಿ, ಮೂರ್ತಿ ಸೊಸೈಟಿ ರವಿಯಣ್ಣ, ಕೇಬಲ್ ಪುಟ್ಟರಾಜ್, ಆನಂದ, ಕಿರಣ್ ಕುಮಾರ್, ನಾಗರಾಜ್ ಲೋಚನ್ ಮತ್ತಿತರರಿದ್ದರು.

ನಾಳೆ ತುಘಲಕ್ ನಾಟಕ ಪ್ರದರ್ಶನ

ಮೈಸೂರು, ಜೂ.24– ಮೈಸೂರು ಕಲಾಮಂದಿರ ಆವರಣದ ಕಿರುರಂಗ ಮಂದಿರದಲ್ಲಿ ಜೂ.26ರ ಭಾನುವಾರ ಸಂಜೆ 6.30ಕ್ಕೆ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ.ಗಿರೀಶ್ ಕಾರ್ನಾಡ್ ರಚಿತ ಹಾಗೂ ರಂಗಾಯಣ ಕಲಾವಿದ ಮಾಯಸಂದ್ರ ಕೃಷ್ಣ ಪ್ರಸಾದ್ ನಿರ್ದೇಶನದ 'ತುಘಲಕ್' ನಾಟಕ ಪ್ರದರ್ಶನಗೊಳ್ಳಲಿದೆ. ಈ ನಾಟಕವನ್ನು ರಂಗವಲ್ಲಿ ತಂಡದ ಕಲಾವಿದರು ಅಭಿನಯಿಸಿದ್ದು, ಆಸಕ್ತರು ಹೆಚ್ಚಿನ ಮಾಹಿತಿಗಾಗಿ 9916212451/ 9901626701/ 9964656482 ಸಂಪರ್ಕಿಸಬಹುದು ಎಂದು ರಂಗವಲ್ಲಿ ಸಂಸ್ಥೆಯ ಕಾರ್ಯದರ್ಶಿ ಬಿ.ರಾಜೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಬಿಸಿ ನೀರು ಕುಡಿಯುವಂತೆ ಸಲಹೆ


ಮೈಸೂರು, ಜೂ.24– ಮುಂಗಾರು ಪ್ರಾರಂಭವಾಗುತ್ತಿರುವ ಹಿನ್ನೆಲೆಯಲ್ಲಿ ನೀರನ್ನು ಬಿಸಿ ಮಾಡಿ ಆರಿಸಿ ಕುಡಿಯುವಂತೆ ಮೈಸೂರು ವಾಣಿವಿಲಾಸ ನೀರು ಸರಬರಾಜು ವಿಭಾಗ ತಿಳಿಸಿದೆ. ಪಾಲಿಕೆಯಿಂದ ನೀರನ್ನು ಶುದ್ದೀಕರಿಸಿ ಉತ್ತಮ ಗುಣಮಟ್ಟದಲ್ಲಿಯೇ ಸರಬರಾಜು ಮಾಡಲಾಗುತ್ತಿದ್ದು, ಮಳೆಗಾಲ ಮುಕ್ತಾಯವಾಗುವವರೆಗೂ ನೀರಿನ ಸ್ವರೂಪವು ಭೌತಿಕವಾಗಿ, ರಾಸಾಯನಿಕವಾಗಿ ಹಾಗೂ ಸೂಕ್ಷ್ಮಾಣು ಜೀವಿಗಳಲ್ಲಿ ನಿರಂತರ ಏರುಪೇರು ಉಂಟಾಗುವುದು ಸಹಜ. ಈ ಹಿನ್ನೆಲೆಯಲ್ಲಿ ಆರೋಗ್ಯದ ಹಿತದೃಷ್ಟಿಯಿಂದ ಸಾರ್ವಜನಿಕರು ನೀರನ್ನು ಕುದಿಸಿ ಸೇವನೆ ಮಾಡುವಂತೆ ಪ್ರಕಟಣೆಯಲ್ಲಿ ತಿಳಿಸಿದೆ.



ಮೈಸೂರಿನ ಬೃಂದಾವನ ಬಡಾವಣೆಯಲ್ಲಿ ನೂತನ ನಂದಿನಿ ಮಾರಾಟ ಮಳಿಗೆಯನ್ನು ಕಾಂಗ್ರೆಸ್ ಮುಖಂಡ ಕವೀಶ್ ಗೌಡ ಶುಕ್ರವಾರ ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಒಕ್ಕೂಟದ ಮಾಜಿ ಅಧ್ಯಕ್ಷರಾದ ಕೆ.ಉಮಾಶಂಕರ್, ಸೋಮಶೇಖರ್, ಒಕ್ಕೂಟದ ನಿರ್ದೇಶಕ ಈರೇಗೌಡ, ಲೀಲಾನಾಗರಾಜ್, ದಾಕ್ಷಾಯಣ್ಣಮ್ಮ, ಒಕ್ಕೂಟದ ವ್ಯವಸ್ಥಾಪಕ ವಿಜಯಕುಮಾರ್, ಮ್ಯಾನೇಜರ್ ಶಿವಕುಮಾರ್‌ಸ್ವಾಮಿ, ಇತರ ಅಧಿಕಾರಿಗಳು ಉಪಸ್ಥಿತರಿದ್ದರು.

ಏಕನಾಥ ಸಿಂಧೆ ತಂತ್ರಕ್ಕೆ ಪವಾರ್, ಉದ್ಧವ್ ಪ್ರತಿತಂತ್ರ

ಮಹಾರಾಷ್ಟ್ರ ಬಂಡಾಯ ಶಿವಸೇನೆ ಶಾಸಕರಲ್ಲಿ ಗೊಂದಲ; ಕಣ್ಣು, ಕಿವಿ ತೆರೆದುಕೊಂಡಿರುವ ಬಿಜೆಪಿ



ಉದ್ಧವ್ ಠಾಕ್ರೆ



ಶರದ್ ಪವಾರ್



ಏಕನಾಥ್ ಸಿಂಧೆ

ಮುಂಬೈ, ಜೂ.24–ಮಹಾರಾಷ್ಟ್ರ ಸರ್ಕಾರ ಉಳಿಸಿಕೊಳ್ಳಲು ಮಹಾವಿಕಾಸ್ ಅಘಾಡಿ ಮೈತ್ರಿಕೂಟ ಹಾಗೂ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ರಣತಂತ್ರ ರೂಪಿಸುತ್ತಿದ್ದಾರೆ.

ಬಂಡಾಯ ಶಾಸಕರ ಅನರ್ಹತೆಗಾಗಿ ವಿಧಾನಸಭಾಧ್ಯಕ್ಷರಿಗೆ ದೂರು ಸಲ್ಲಿಸಲು ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಮತ್ತು ಶಿವಸೇನೆ ನಾಯಕ ಸಂಜಯ್ ರಾವತ್ ತೀರ್ಮಾನಿಸಿದ್ದಾರೆ ಎಂದು ಹೇಳಲಾಗಿದೆ. ಉದ್ಧವ್ ಠಾಕ್ರೆ ಮುಖ್ಯಮಂತ್ರಿ ಸ್ಥಾನ ತ್ಯಜಿಸಿದರೂ ಪರವಾಗಿಲ್ಲ. ಬಿಜೆಪಿಯಂತೂ ಅಧಿಕಾರಕ್ಕೆ ಬರಬಾರದು ಎಂಬ ನಿಟ್ಟಿನಲ್ಲಿ ದೃಢ ನಿಲುವನ್ನು ಅಘಾಡಿ ಮೈತ್ರಿಕೂಟದ ನಾಯಕರು ತಳೆದಿದ್ದಾರೆ ಎನ್ನಲಾಗಿದೆ.

ಸಂಧಾನದ ಬಾಯಿಯಲ್ಲಿ ಎಚ್ಚರಿಕೆ ಸಂದೇಶ: ಉದ್ಧವ್ ಠಾಕ್ರೆ ರಾಜೀನಾಮೆ ನೀಡಲು ಸಿದ್ಧವಿರುವುದಾಗಿಯೂ ಏಕನಾಥ್ ಸಿಂಧೆ ಅವರಿಗೆ ಮುಖ್ಯಮಂತ್ರಿ ಸ್ಥಾನ ನೀಡಲೂ ರೆಡಿ ಎಂದು ಶಿವಸೇನೆಯ ಕೆಲ ನಾಯಕರು ಬಹಿರಂಗವಾಗಿಯೇ ಹೇಳಿಕೆ ನೀಡುತ್ತಿದ್ದಾರೆ. ಶಿವಸೇನೆ ನಾಯಕ ಸಂಜಯ್ ರಾವತ್ ಅವರು ವಿಧಾನ ಸಭೆಯಲ್ಲಿ ಅಘಾಡಿ ಮೈತ್ರಿಕೂಟ ಬಹುಮತ ಸಾಬೀತುಪಡಿಸಲಿದೆ. ಬಂಡಾಯ ಶಾಸಕರು ಮುಂಬೈಗೆ ಹಿಂತಿರುಗಿದ ನಂತರ ಪಕ್ಷದ ಮೇಲಿನ ನಿಷ್ಠೆಯ ಬಗ್ಗೆ ನಿಜವಾದ ಪರೀಕ್ಷೆಯನ್ನು ಎದುರಿಸಬೇಕಾಗುತ್ತದೆ ಎಂದು ತಿಳಿಸಿದ್ದಾರೆ. ಒಂದೆಡೆ ಏಕನಾಥ್ ಶಿಂಧೆ ಅವರಿಗೆ ಮುಖ್ಯಮಂತ್ರಿ ಸ್ಥಾನ ನೀಡುವುದಾಗಿಯೂ ಮತ್ತೊಂದೆಡೆ ಬಂಡಾಯ ಶಾಸಕರ ಅನರ್ಹತೆಗೆ ಅರ್ಜಿ ಸಲ್ಲಿಸುವುದಾಗಿಯೂ ಹೇಳುವ ಮೂಲಕ ಅಘಾಡಿ ಮೈತ್ರಿಕೂಟವು 'ಬಾಯಲ್ಲಿ ಬೆಣ್ಣೆ ಕಂಕುಳಲ್ಲಿ ದೊಣ್ಣೆ' ಎಂಬ ಧೋರಣೆ ಅನುಸರಿಸುತ್ತಿದೆ.

ಮತ್ತೊಂದೆಡೆ ಅಘಾಡಿ ಮೈತ್ರಿಕೂಟದ ಭಾಗವಾಗಿರುವ ಕಾಂಗ್ರೆಸ್, ಮೊದಲು ಅಸ್ಸಾಂ ತೊರೆದು ಮುಂಬೈಗೆ ಬನ್ನಿ. ಕುಳಿತು ಚರ್ಚೆ ಮಾಡಿ ಸಮಸ್ಯೆ ಬಗೆಹರಿಸೋಣ ಎಂದು ಪತ್ರ ಬರೆದಿದೆ. ಉದ್ಧವ್ ಠಾಕ್ರೆ ಅವರಂತೂ ತಾನೂ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಡಲು ಸಿದ್ಧ. ಆದರೆ ಬೆನ್ನಿಗೆ ಚೂರಿ ಹಾಕಿದ ಬಿಜೆಪಿ ಜೊತೆ ಮೈತ್ರಿ ಅಂತೂ ಅಸಾಧ್ಯ ಎಂದು ಹೇಳಿಕೆ ನೀಡಿರುವುದಲ್ಲದೇ, ಅನಿವಾರ್ಯವಾದರೆ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿ ಮನೆಯಲ್ಲಿ ಕುಳಿತಿರುತ್ತೇನೆ. ಆದರೆ ಯುದ್ಧವನ್ನಂತೂ ಬಿಡಲ್ಲ. ನನಗೆ ಹೋರಾಡುವ ಸ್ಥೈರ್ಯ ಈಗಲೂ ಇದೆ. ಒಬ್ಬ ಠಾಕ್ರೆ ಇಲ್ಲದೇ ಶಿವಸೇನೆ ನಡೆಸಿ ನೋಡೋಣ ಎಂದು ಏಕನಾಥ್ ಶಿಂಧೆಗೆ ಸವಾಲೆಸೆದಿದ್ದಾರೆ.

ಮತ್ತೊಂದೆಡೆ ಬಂಡಾಯ ಶಾಸಕರೂ ಕೂಡ ಗೊಂದಲಕ್ಕೆ ಒಳಗಾಗಿದ್ದು, ಉದ್ಧವ್ ಠಾಕ್ರೆ ವಿರುದ್ಧ ಬಂಡಾಯವೆದ್ದು ಸರ್ಕಾರ ಉರುಳಿಸಿದ ನಂತರ ಮುಂದೇನು ಎಂಬ ದಾರಿ ತೋಚದೆ ಹೆಣಗಾಡುತ್ತಿದ್ದಾರೆ ಎಂದು ಹೇಳಲಾಗಿದೆ. ಬಿಜೆಪಿ ಮಹಾರಾಷ್ಟ್ರ ರಾಜಕೀಯ ಬಿಕ್ಕಟ್ಟಿನ ಬಗ್ಗೆ ಮೌನ ವಹಿಸಿರುವುದೇ ಇದಕ್ಕೆ ಕಾರಣ ಎನ್ನಲಾಗಿದೆ. ಮೇಲೆ ಬಿದ್ದು ಬಿಜೆಪಿ ಜೊತೆ ಹೋದರೆ ಮುಖ್ಯಮಂತ್ರಿ ಸ್ಥಾನವನ್ನು ಅವರಿಗೆ ಬಿಟ್ಟು ಕೊಡಬೇಕಾಗುತ್ತದೆ. ಆಗ ಶಿವಸೇನೆ ಕಾರ್ಯಕರ್ತರ ವಿರೋಧವನ್ನು ಎದುರಿಸಬೇಕಾಗುತ್ತದೆ. ಒಂದು ವೇಳೆ ಸರ್ಕಾರ ವಿಸರ್ಜನೆಯಾಗಿ ಬಿಟ್ಟರೆ ಚುನಾವಣೆಯನ್ನು ಹೇಗೆ ಎದುರಿಸುವುದು ಎಂಬ ಪ್ರಶ್ನೆ ಅವರನ್ನು ಕಾಡುತ್ತಿದೆ ಎಂದು ಮೂಲಗಳು ತಿಳಿಸಿವೆ.

ಈ ಮಧ್ಯೆ ಸರ್ಕಾರ ಉರುಳಿಸುವುದರಲ್ಲಿ ತಮಗೆ ಆಸಕ್ತಿ ಇಲ್ಲ. ಪ್ರಸ್ತುತ ನಡೆಯುತ್ತಿರುವ ಬಿಕ್ಕಟ್ಟಿನಲ್ಲಿ ಬಿಜೆಪಿಯ ಪಾತ್ರವೇನೂ ಇಲ್ಲ ಎಂದು ಹೇಳುವ ಮೂಲಕ ಬಿಜೆಪಿ ನಾಯಕ ಚಂದ್ರಕಾಂತ ಪಾಟೀಲ್ ಅವರು, ಶಿವಸೇನೆ ಬಂಡಾಯ ಶಾಸಕರು ಬೇಕಾದರೆ ಅಘಾಡಿ ಮೈತ್ರಿ ಕೂಟದ ಸರ್ಕಾರ ಉರುಳಿಸಿ ಬಿಜೆಪಿಗೆ ಬೆಂಬಲ ನೀಡಲಿ. ನಾವಾಗಿಯಂತೂ ಸರ್ಕಾರ ಉರುಳಿಸುವುದಿಲ್ಲ ಎಂಬ ಅರ್ಥದಲ್ಲಿ ಮಾತನಾಡಿರುವುದು ಬಂಡಾಯ ಶಾಸಕರಿಗೆ ನುಂಗಲಾರದ ತುತ್ತಾಗಿ ಪರಿಣಮಿಸಿದೆ.

ಡಾ.ಪಿ.ಮಹದೇವಪ್ಪ ನಿಧನ



ಮೈಸೂರು, ಜೂ.24– ಮೈಸೂರಿನ ವಿದ್ಯಾವಿಕಾಸ್ ಇಂಜಿನಿಯರಿಂಗ್ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಹಾಗೂ ಗೋಕುಲಂ 3ನೇ ಹಂತದ ನಿವಾಸಿ ಡಾ.ಪಿ.ಮಹದೇವಪ್ಪ ಅವರು ಶುಕ್ರವಾರ ರಾತ್ರಿ ನಗರದ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಅವರಿಗೆ 83 ವರ್ಷ ವಯಸ್ಸಾಗಿತ್ತು. ದಿವಂಗತರು ಪತ್ನಿ ಪ್ರೇಮಾ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಶ್ರೀಯುತರು ಮಂಗಳೂರಿನ ಸುರತ್ಕಲ್‌ನ ಎನ್‌ಐಟಿಕೆ, ಕೆಆರ್‌ಇಸಿಯಲ್ಲಿ ಡೀನ್ ಆಗಿಯೂ ಸೇವೆ ಸಲ್ಲಿಸಿದ್ದರು. ಶನಿವಾರ ಮಧ್ಯಾಹ್ನ 12 ಗಂಟೆವರೆಗೆ ಗೋಕುಲಂ ನಿವಾಸದಲ್ಲಿ ಪಾರ್ಥಿವ ಶರೀರವನ್ನು ಸಾರ್ವಜನಿಕರ ದರ್ಶನಕ್ಕೆ ಇಡಲಾಗುತ್ತಿದೆ. ನಂತರ ಮೃತರ ಸ್ವಗ್ರಾಮ ತಿ.ನರಸೀಪುರ ತಾಲೂಕಿನ ಕುರುಬೂರು ಕೊತ್ತೇಗಾಲದಲ್ಲಿ ಮಧ್ಯಾಹ್ನ 3 ಗಂಟೆಗೆ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅಗ್ನಿಪಥ್ ಯೋಜನೆಯಡಿ ನೇಮಕಾತಿ ಪ್ರಕ್ರಿಯೆಗೆ ಐಎಎಫ್ ಚಾಲನೆ

ನವದೆಹಲಿ, ಜೂ.24– ಕೇಂದ್ರ ಸರ್ಕಾರ ಘೋಷಿಸಿದ ರಕ್ಷಣಾ ಪಡೆಗಳ ಹೊಸ ನೇಮಕಾತಿ ಯೋಜನೆ ವಿರುದ್ಧ ದೇಶಾದ್ಯಂತ ಹಿಂಸಾತ್ಮಕ ಪ್ರತಿಭಟನೆಗಳ ಬೆನ್ನಲ್ಲೇ ಭಾರತೀಯ ವಾಯುಪಡೆ(ಐಎಎಫ್) ಅಗ್ನಿಪಥ್ ಯೋಜನೆಯಡಿ ನೇಮಕಾತಿಗೆ ನೋಂದಣಿ ಆರಂಭಿಸುವ ಮೂಲಕ ಹೊಸ ನೇಮಕಾತಿ ಪ್ರಕ್ರಿಯೆಗೆ ಶುಕ್ರವಾರ ಚಾಲನೆ ನೀಡಿದೆ. #Agniveervayuಗೆ ಅರ್ಜಿ ಸಲ್ಲಿಸಲು ನೋಂದಣಿ ವಿಂಡೋ ತೆರೆಯಲಾಗಿದ್ದು, ಇಂದು ಬೆಳಗ್ಗೆ 10 ರಿಂದ ಕಾರ್ಯನಿರ್ವಹಿಸುತ್ತಿದೆ ಎಂದು ಐಎಎಫ್ ಟ್ವಿಟ್ ಮಾಡಿದೆ.

ಜೂ.14 ರಂದು ಅಗ್ನಿಪಥ್ ಯೋಜನೆ ಘೋಷಿಸಿದ ಕೇಂದ್ರ ಸರ್ಕಾರ 17 ರಿಂದ 21 ವರ್ಷ ವಯಸ್ಸಿನ ಯುವಕರನ್ನು ನಾಲ್ಕು ವರ್ಷಗಳ ಅವಧಿಗೆ ಆಯ್ಕೆ ಮಾಡಿಕೊಳ್ಳಲಾಗುವುದು ಮತ್ತು ಅವರಲ್ಲಿ ಶೇ.25 ರಷ್ಟು ಜನರನ್ನು ನಂತರ ನಿಯಮಿತ ಸೇವೆಗೆ ಸೇರಿಸಿಕೊಳ್ಳಲಾಗುವುದು ಎಂದು ಹೇಳಿತ್ತು. ದೇಶದ ಹಲವು ಭಾಗಗಳಲ್ಲಿ ಯೋಜನೆ ವಿರುದ್ಧ ಹಿಂಸಾತ್ಮಕ ಪ್ರತಿಭಟನೆಗಳು ನಡೆದವು. ಹಲವಾರು ವಿರೋಧ ಪಕ್ಷಗಳು ಮತ್ತು ಮಿಲಿಟರಿ ತಜ್ಞರು ಸಹ ಈ ಯೋಜನೆಯನ್ನು ಟೀಕಿಸಿದರು. ಇದು ಸಶಸ್ತ್ರ ಪಡೆಗಳ ಕಾರ್ಯಾಚರಣೆಯ ಸಾಮರ್ಥ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ ಎಂದು ವಾದಿಸಿದ್ದರು.

ಗ್ರಾಮ ಒನ್ ಯೋಜನೆ ಪರಿಣಾಮಕಾರಿಯಾಗಿ ತಲುಪಿಸಿ

ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಸಲಹೆ



ಚಾಮರಾಜನಗರ, ಜೂ.24–ಗ್ರಾಮ ಮಟ್ಟದಲ್ಲಿ ಸರ್ಕಾರ, ಆರ್‌ಟಿಐ, ಬ್ಯಾಂಕಿಂಗ್ ಸೇವೆಗಳು ಸೇರಿದಂತೆ ಇನ್ನಿತರ ಸೇವೆಗಳನ್ನು ಒಂದೇ ಸೂರಿನಡಿ ಕಲ್ಪಿಸುವ ಮಹತ್ವಾಕಾಂಕ್ಷಿ ಗ್ರಾಮ ಒನ್ ಯೋಜನೆಯನ್ನು ಪರಿಣಾಮಕಾರಿಯಾಗಿ ಪ್ರತಿ ಪ್ರಜೆಗೂ ತಲುಪಿಸುವಂತೆ ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ತಿಳಿಸಿದರು.

ಜಿಲ್ಲಾಡಳಿತ ಭವನದ ಆವರಣದಲ್ಲಿರುವ ಜಿಪಂ ಸಭಾಂಗಣದಲ್ಲಿಂದು ಜಿಲ್ಲಾಡಳಿತದಿಂದ ಆಯೋಜಿಸಿದ್ದ ಗ್ರಾಮ ಒನ್ ಯೋಜನೆಯ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಗ್ರಾಮ ಒನ್ ಕೇಂದ್ರಗಳು ನಾಗರಿಕರಿಗೆ ವಿವಿಧ ಸರ್ಕಾರಿ ಸೇವೆಗಳು ಮತ್ತು ಯೋಜನೆಗಳ ಸೌಲಭ್ಯ ಪಡೆಯಲು ಸಹಾಯ ಸೇವಾ ವಿತರಣಾ ಮಾರ್ಗವಾಗಿದೆ. ಈ ಕೇಂದ್ರದ ನಿರ್ವಹಣೆ ಮಾಡುವವರಿಗೆ ಮಹತ್ತರ ಹೊಣೆಗಾರಿಕೆ ಇದೆ. ಯೋಜನೆಯ ಅನುಷ್ಠಾನ, ಮೇಲ್ವಿಚಾರಣೆ ಬಗ್ಗೆ ಹೆಚ್ಚು ಮನವರಿಕೆ ಮಾಡಿಕೊಳ್ಳಬೇಕಿದೆ ಎಂದು ಜಿಲ್ಲಾಧಿಕಾರಿ ತಿಳಿಸಿದರು.

ಚಾಮರಾಜನಗರ ಗಡಿ ಜಿಲ್ಲೆಯಾಗಿದ್ದು, ಅರಣ್ಯ ಪ್ರದೇಶವು ಸಹ ಹೆಚ್ಚಿದೆ. ಕಾಡಂಚಿನ ಗ್ರಾಮದ ಜನರು ಸರ್ಕಾರದ ಯೋಜನೆಗಳ ಸವಲತ್ತನ್ನು ಪಡೆದುಕೊಳ್ಳುವ ಸಲುವಾಗಿ ಪಟ್ಟಣಕ್ಕೆ ಬರಲು ಸಾರಿಗೆ ವ್ಯವಸ್ಥೆಯ ತೊಂದರೆ ಇದೆ. ಹೀಗಾಗಿ ಆಯಾ ಗ್ರಾಮಗಳಲ್ಲೇ ಸೌಲಭ್ಯ, ಸೇವೆಗಳನ್ನು ಪಡೆದುಕೊಳ್ಳಲು ಗ್ರಾಮ ಒನ್ ಕೇಂದ್ರವೂ ಸಮರ್ಪಕವಾಗಿ ನಿರ್ವಹಣೆಯಾಗಬೇಕಿದೆ. ಸಾರ್ವಜನಿಕರ ಪರವಾಗಿ ಕೆಲಸ ಮಾಡುವ ನಿಟ್ಟಿನಲ್ಲಿ ಸಹಕಾರಿಯಾಗಬೇಕಿದೆ ಎಂದರು.

ಗ್ರಾಮ ಒನ್ ಕೇಂದ್ರದಲ್ಲಿ ಕೆಲಸ ಮಾಡುವ ನಿರ್ವಾಹಕರು ಸಾರ್ವಜನಿಕರೊಡನೆ ಸ್ನೇಹ ಮನೋಭಾವದಿಂದ ವರ್ತಿಸಬೇಕು. ಸರ್ಕಾರದ ಪ್ರತಿಯೊಂದು ಯೋಜನೆಗಳನ್ನು ಪ್ರತಿಯೊಬ್ಬರಿಗೂ ತಲುಪುವಂತೆ ನೋಡಿಕೊಳ್ಳಬೇಕು. ಮನೆ ಮನೆಗೆ ತೆರಳಿ ಗ್ರಾಮ ಒನ್ ಸೇವಾ ಸೌಲಭ್ಯದ ಪ್ರಯೋಜನ ಪಡೆಯಲು ಜಾಗೃತಿ ಮೂಡಿಸಬೇಕು ಎಂದು ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಸಲಹೆ ನೀಡಿದರು.

ಸೇವಾ ಸಿಂಧು ಯೋಜನಾ ನಿರ್ದೇಶಕ ಬಿ.ಎನ್.ವರಪ್ರಸಾದ್ ರೆಡ್ಡಿ ಮಾತನಾಡಿ, ಗ್ರಾಮ ಒನ್ ಯೋಜನೆಯು ರಾಜ್ಯ ಸರ್ಕಾರದ ಮಹತ್ವಪೂರ್ಣ ಯೋಜನೆಯಾಗಿದೆ. ಗ್ರಾಮ ಒನ್ ಕೇಂದ್ರದಿಂದ ನಿರುದ್ಯೋಗಿ ಯುವಕ ಯುವತಿಯರಿಗೂ ಉದ್ಯೋಗಾವಕಾಶ ದೊರಕಿದಂತಾಗಿದೆ. ಸರ್ಕಾರದ ಯೋಜನೆಯನ್ನು ಗ್ರಾಮದ ಮನೆ ಮನೆಗೂ ತಲುಪಿಸಲು ಮುಂದಾದರೆ ಯಶಸ್ಸು ಸಿಗಲಿದೆ ಎಂದರು.

ಗ್ರಾಮ ಒನ್ ಕೇಂದ್ರವನ್ನು ಬೆಳಗ್ಗೆ 9 ರಿಂದ ಸಂಜೆ 6 ಗಂಟೆಯವರೆಗೆ ತೆರೆದಿರಬೇಕು. ಕಂಪ್ಯೂಟರ್, ಸ್ಕ್ಯಾನರ್, ಪ್ರಿಂಟರ್, ಬಯೋಮೆಟ್ರಿಕ್ ದೃಢೀಕರಣ ಸಾಧನ, ಇಂಟರ್‌ನೆಟ್ ಸಂಪರ್ಕ, ವಿದ್ಯುತ್ ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳಬೇಕು. ಬ್ರ್ಯಾಂಡಿಂಗ್ ಮಾರ್ಗಸೂಚಿಗಳನ್ನು ಅನುಸರಿಸಬೇಕು. ಸೇವೆಗಳ ಬಳಕೆಯ ಬಗ್ಗೆ ಪೂರ್ಣ ಪ್ರಮಾಣದಲ್ಲಿ ತರಬೇತಿ ಪಡೆಯಬೇಕು ಎಂದು ವರಪ್ರಸಾದ್ ರೆಡ್ಡಿ ತಿಳಿಸಿದರು.

ಹೆಚ್ಚುವರಿ ಜಿಲ್ಲಾಧಿಕಾರಿ ಎಸ್.ಕಾತ್ಯಾಯಿನಿದೇವಿ, ಸೇವಾ ಸಿಂಧು ಯೋಜನೆ ಜಿಲ್ಲಾ ಯೋಜನಾ ವ್ಯವಸ್ಥಾಪಕ ನಂಜುಂಡಸ್ವಾಮಿ, ಜಿಪಂ ಸಹಾಯಕ ಲೆಕ್ಕಾಧಿಕಾರಿ ಗಂಗಾಧರ್ ಕಾರ್ಯಕ್ರಮದಲ್ಲಿದ್ದರು.

ರಾಜಕೀಯ ಸ್ಥಾನ ಮಾನಕ್ಕಾಗಿ ಕೊರಚ, ಕೊರಮ ಸಮಾಜ ಒಂದಾಗಬೇಕು



ಕೊಳ್ಳೇಗಾಲ, ಜೂ.24(ನಾಗೇಂದ್ರಸ್ವಾಮಿ)–ಕೊರಮ, ಕೊರಚ ಸಮಾಜ ಮುಂದಿನ ಚುನಾವಣೆ ವೇಳೆ ಒಗ್ಗಟ್ಟು ಪ್ರದರ್ಶಿಸದಿದ್ದರೆ ರಾಜಕೀಯ ಸ್ಥಾನಮಾನದಿಂದ ವಂಚಿತರಾಗಬೇಕಾಗುತ್ತದೆ ಎಂದು ಕುಳವ ಮಹಾಸಭಾ ರಾಜ್ಯ ಪ್ರಧಾನ ಕಾರ್ಯದರ್ಶಿ ಆನಂದ್ ಕುಮಾರ್ ಏಕಲವ್ಯ ಹೇಳಿದರು. ನಗರದ ಪ್ರವಾಸಿ ಮಂದಿರದಲ್ಲಿ ಅಖಿಲ ಕರ್ನಾಟಕ ಕುಳವ ಮಹಾಸಂಘದ ಚಾಮರಾಜನಗರ ಜಿಲ್ಲಾ ಘಟಕದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಈ ಸಮುದಾಯಗಳು ಒಂದಾಗದಿದ್ದರೆ ಸಮಾಜದ ಬಂಧುಗಳು ವಾಸಿಸುವ ಬಡಾವಣೆಗಳು, ನಗರದ ಅಭಿವೃದ್ಧಿ ಸಹ ಹಿಂದುಳಿಯಲಿದ್ದು, ಈ ಹಿನ್ನೆಲೆ ಎಲ್ಲರೂ ಸಂಘಟಿತರಾಗಿ ಹಕ್ಕುಗಳನ್ನು ಪಡೆಯಬೇಕು ಎಂದರು.

ಜಿಲ್ಲೆಯಲ್ಲಿ ನಮ್ಮ ಸಮುದಾಯ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿವೆ. ಅಂತಹ ಸಮಸ್ಯೆಗಳ ಕುರಿತು ನಮಗೂ ಅರಿವಿದೆ. ಇಲ್ಲಿನ ಕುಂದು–ಕೊರತೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಸಲಹೆ–ಸೂಚನೆ ಪಡೆದುಕೊಂಡಿದ್ದೇವೆ. ಮುಂದೆ ಜಿಲ್ಲಾ ಮಟ್ಟದಲ್ಲಿ ದೊಡ್ಡ ಸಮಾವೇಶ ಮಾಡಿ ಸರ್ಕಾರದ ಗಮನ ಸೆಳೆಯುವ ಕೆಲಸ ಮಾಡಲಾಗುವುದು ಎಂದರು.

ರಾಜ್ಯ ಜಂಟಿ ಕಾರ್ಯದರ್ಶಿ ಕೊತ್ತಗೆರೆ ಕಿರಣ್ ಕುಮಾರ್ ಬೆಂಗಳೂರು ನಗರಾಧ್ಯಕ್ಷ ವಿಜಯ್ ರಂಗಪ್ಪ, ಚಾಮರಾಜನಗರ ಜಿಲ್ಲಾಧ್ಯಕ್ಷ ಮಾದೇಶ್, ಕಾರ್ಯಾಧ್ಯಕ್ಷ ಶ್ರೀನಿವಾಸ ಮೂರ್ತಿ, ಉಪಾಧ್ಯಕ್ಷ ಮುಳ್ಳೂರು ರಾಜು, ಯುವ ಘಟಕದ ಜಿಲ್ಲಾಧ್ಯಕ್ಷ ಶಿವಕುಮಾರ್, ಮುಖಂಡರಾದ ಮೈಸೂರು ರವಿ, ರೋಹಿತ್‌ಶೆಟ್ಟಿ, ಕುಮಾರ್, ಪ್ರದೀಪ್, ಸತೀಶ್, ಮಾದು, ರಾಚಯ್ಯ, ಮುಖಂಡರಾದ ಶಾಂತಮ್ಮ, ನಾಗಮ್ಮ, ಮಂಗಳಮ್ಮ, ಸೌಮ್ಯ ಇನ್ನಿತರರಿದ್ದರು.

ಗುಂಡ್ಲುಪೇಟೆಯಲ್ಲಿ ಕುಂಬಾರ ಸಮುದಾಯ ಭವನ ಉದ್ಘಾಟನೆ



ಗುಂಡ್ಲುಪೇಟೆ, ಜೂ.24(ಸೋಮ್.ಜಿ)–ಸಮುದಾಯ ಭವನಗಳು ಸದ್ಬಳಕೆಯಾದಾಗ ಮಾತ್ರ ಅವುಗಳ ನಿರ್ಮಾಣಕ್ಕೆ ಅರ್ಥ ಬರುತ್ತದೆ ಎಂದು ಶಾಸಕ ಸಿ.ಎಸ್.ನಿರಂಜನ ಕುಮಾರ್ ಹೇಳಿದರು. ಪಟ್ಟಣದ ಸೋಮೇಶ್ವರ ಹಾಸ್ಟೆಲ್ ಎದುರು ನಿರ್ಮಿಸಿರುವ ಕುಂಬಾರ ಸಮುದಾಯ ಭವನ ಉದ್ಘಾಟಿಸಿ ಮಾತನಾಡಿದ ಅವರು, ಸಮುದಾಯ ಭವನವು ಆಯಾ ಸಮುದಾಯದ ಶುಭ ಸಮಾರಂಭಗಳಿಗೆ ಸದ್ಬಳಕೆಯಾದಾಗ ಮಾತ್ರ ಅವುಗಳ ನಿರ್ಮಾಣಕ್ಕೆ ಸಾರ್ಥಕವಾಗುತ್ತದೆ. ಕುಂಬಾರ ಸಮುದಾಯವು ಈ ಸುಸಜ್ಜಿತ ಭವನವನ್ನು ಶುಭ ಕಾರ್ಯಗಳಿಗೆ ಬಳಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಈ ಸಂದರ್ಭದಲ್ಲಿ ಕುಂಬಾರ ಸಂಘದ ರಾಜ್ಯಾಧ್ಯಕ್ಷ ಶಿವಕುಮಾರ್ ಜಿಲ್ಲಾಧ್ಯಕ್ಷ ರಾಜೇಂದ್ರ, ತಾಲೂಕು ಅಧ್ಯಕ್ಷ ವೆಂಕಟರಾಜು ಮತ್ತು ಪದಾಧಿಕಾರಿಗಳು ಹಾಗೂ ಸಮುದಾಯದ ಮುಖಂಡರು, ಯುವಕರಿದ್ದರು.

ಜೂ.27ರಂದು ಕೆಂಪೇಗೌಡ ಜಯಂತಿ ಆಚರಣೆ

ಯಳಂದೂರು,ಜೂ 24(ವಿ.ನಾಗರಾಜು)–ತಾಲೂಕು ಆಡಳಿತದಿಂದ ಜೂ.27ರಂದು ನಾಡಪ್ರಭು ಕೆಂಪೇಗೌಡ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲು ತೀರ್ಮಾನಿಸಲಾಯಿತು.

ಈ ಸಂಬಂಧ ಪಟ್ಟಣದ ತಾಲೂಕು ಕಚೇರಿಯಲ್ಲಿ ತಹಸೀಲ್ದಾರ್ ಆನಂದಪ್ಪ ನಾಯಕ್ ನೇತೃತ್ವದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಪಟ್ಟಣದ ತಾಲೂಕು ಕಚೇರಿ ಮುಂಭಾಗ ಜಯಂತಿ ಆಚರಣಾ ಕಾರ್ಯಕ್ರಮ ನಡೆಸಲು ತೀರ್ಮಾನಿಸಲಾಯಿತು. ಅಂದು ಬೆಳಗ್ಗೆ 11 ಗಂಟೆಗೆ ವೇದಿಕೆ ಕಾರ್ಯಕ್ರಮ ನಡೆಯಲಿದ್ದು, ಉಸ್ತುವಾರಿ ಸಚಿವ ವಿ.ಸೋಮಣ್ಣ, ಶಾಸಕ ಎನ್.ಮಹೇಶ್ ಸೇರಿದಂತೆ ವಿಧಾನಪರಿಷತ್ ಸದಸ್ಯರು ಸೇರಿದಂತೆ ಸ್ಥಳೀಯ ಜನಪ್ರತಿನಿಧಿಗಳು ಭಾಗವಹಿಸುವರು. ನಂಜನಗೂಡು ತಾಲೂಕಿನ ಹುಲ್ಲಹಳ್ಳಿ ಗ್ರಾಮದ ಡಾ.ಬಿ.ಸಿ.ವಿಜಯ್‌ಕುಮಾರ್ ಬಲ್ಲೇನಹಳ್ಳಿ ಮುಖ್ಯ ಭಾಷಣ ಮಾಡಲಿದ್ದು, ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದು ತಹಸೀಲ್ದಾರ್ ತಿಳಿಸಿದರು.

ಇಓ ಉಮೇಶ್, ಬಿಇಓ ಕೆ.ಕಾಂತರಾಜು, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕಿ ಜಯಕಾಂತ ಸೇರಿದಂತೆ ಒಕ್ಕಲಿಗರ ಸಂಘದ ಅಧ್ಯಕ್ಷ ರಾಜುಗೌಡ, ಬನ್ನಿಸಾರಿಗೆ ರಾಜುಗೌಡ, ವಡಗೆರೆ ಕುಮಾರ್, ಡಿ.ಸಿ.ಬಾಬು ಸೇರಿದಂತೆ ಇತರರಿದ್ದರು.

ಅಂಗನವಾಡಿ ಕೇಂದ್ರಗಳಿಗೆ ಆಹಾರ ಸರಬರಾಜು

ಚಾಮರಾಜನಗರ, ಜೂ.24– ಯಳಂದೂರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಶಿಶು ಅಭಿವೃದ್ಧಿ ಯೋಜನೆಯಡಿ ವಿವಿಧ ಅಂಗನವಾಡಿ ಕೇಂದ್ರಗಳಿಗೆ ಜೂ.30 ರಿಂದ ಜು.6 ರವರೆಗೆ ಆಹಾರ ಪದಾರ್ಥಗಳನ್ನು ಸರಬರಾಜು ಮಾಡಲಾಗುತ್ತದೆ.

ಜೂ.30ರಂದು ಹೊನ್ನೂರು, ಕೆಸ್ತೂರು ವೃತ್ತಗಳಿಗೆ, ಜು.4ರಂದು ಗುಂಬಳ್ಳಿ ವೃತ್ತ ವ್ಯಾಪ್ತಿಗೆ, ಜು.5 ರಂದು ಯಳಂದೂರು ಮತ್ತು ಬಿಳಿಗಿರಿರಂಗನಬೆಟ್ಟ ವೃತ್ತ ಹಾಗೂ ಜು.6 ರಂದು ಮಾಂಬಳ್ಳಿ, ಮದ್ದೂರು ಮತ್ತು ಗೌಡಹಳ್ಳಿ ವೃತ್ತ ವ್ಯಾಪ್ತಿಯ ಅಂಗನವಾಡಿಗಳಿಗೆ ಪಡಿತರ ಸರಬರಾಜು ಮಾಡಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ವಿದ್ಯಾ ವಿಕಾಸ ಕಾಲೇಜಿಗೆ ಶೇ.80.55 ಫಲಿತಾಂಶ

ಚಾಮರಾಜನಗರ, ಜೂ.24(ಎಸ್‌ಎಸ್)–ನಗರದ ವಿದ್ಯಾ ವಿಕಾಸ ಸ್ವತಂತ್ರ ಪದವಿ ಪೂರ್ವ ಕಾಲೇಜಿಗೆ ದ್ವಿತೀಯ ಪಿಯು ಪರೀಕ್ಷೆಯಲ್ಲಿ ಶೇ.80.55 ರಷ್ಟು ಫಲಿತಾಂಶ ಲಭಿಸಿದೆ.

ಕಾಲೇಜಿನಲ್ಲಿ ಪರೀಕ್ಷೆ ತೆಗೆದುಕೊಂಡಿದ್ದವರ ಪೈಕಿ ಮೂವರು ವಿದ್ಯಾರ್ಥಿಗಳು ಅತ್ಯುನ್ನತ ದರ್ಜೆ, 16 ಪ್ರಥಮ ದರ್ಜೆ, 6 ದ್ವಿತೀಯ ದರ್ಜೆ ಹಾಗೂ 4 ತೃತೀಯ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ. ರಾಜ್ಯಶಾಸ್ತ್ರ ವಿಭಾಗದಲ್ಲಿ ಶೇ.100 ರಷ್ಟು ಫಲಿತಾಂಶ ಬಂದಿದೆ. ಭೂಗೋಳಶಾಸ್ತ್ರ ವಿಷಯದಲ್ಲಿ ಇಬ್ಬರು, ಗಣಕ ವಿಜ್ಞಾನ ವಿಷಯದಲ್ಲಿ ಓರ್ವ ವಿದ್ಯಾರ್ಥಿ 100ಕ್ಕೆ 100 ಅಂಕಗಳನ್ನು ಗಳಿಸಿದ್ದಾರೆ ಎಂದು ಕಾಲೇಜಿನ ಪ್ರಾಂಶುಪಾಲ ಕೃಷ್ಣಕುಮಾರ್ ತಿಳಿಸಿದ್ದಾರೆ.

ಇಂದು ಉಚಿತ ಆರೋಗ್ಯ ತಪಾಸಣಾ ಶಿಬಿರ

ಚಾಮರಾಜನಗರ, ಜೂ.24(ಎಸ್‌ಎಸ್)–ತಾಲೂಕಿನ ಕಾಗಲವಾಡಿ ಗ್ರಾಮದ ವಿ.ಭ. ಕನ್ವೆನ್ಷನ್ ಹಾಲ್‌ನಲ್ಲಿ ಜೂ.25ರಂದು ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 2 ರವರೆಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿದೆ.

ನಗರದ ಜೆಎಸ್‌ಎಸ್ ಆಸ್ಪತ್ರೆ, ಜಿಲ್ಲಾ ವೀರಶೈವ ಲಿಂಗಾಯತ ನೌಕರರ ಕ್ಷೇಮಾಭಿವೃದ್ಧಿ ಸೇವಾ ಸಂಘ, ರಾಜ್ಯ ಸೇವಾ ಪ್ರಶಸ್ತಿ ದುಗ್ಗಹಟ್ಟಿ ಪುಟ್ಟಲಿಂಗಪ್ಪ ಸೇವಾ ಟ್ರಸ್ಟ್, ಕಾಗಲವಾಡಿ ಹಾಲು ಉತ್ಪಾದಕರ ಸಂಘ, ಬಸವಬಳಗ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಸಂಘದ ಸಂಯುಕ್ತ ಆಶ್ರಯದಲ್ಲಿ ಶಿಬಿರ ಏರ್ಪಡಿಸಲಾಗಿದೆ.

ಸಾರ್ವಜನಿಕರು ಶಿಬಿರದ ಸದುಪಯೋಗ ಪಡೆದುಕೊಳ್ಳುವಂತೆ ಅಧ್ಯಕ್ಷ ಸಿದ್ದಮಲ್ಲಪ್ಪ ಕೋರಿದ್ದಾರೆ.

ಜಿಲ್ಲಾಸ್ಪತ್ರೆಯಲ್ಲಿ ಡಯಾಲಿಸಿಸ್ ಬಂದ್: ರೋಗಿಗಳಿಂದ ಪ್ರತಿಭಟನೆ



ಚಾಮರಾಜನಗರ, ಜೂ.24(ಎಸ್‌ಎಸ್)–ನಗರದ ಸರ್ಕಾರಿ ಜಿಲ್ಲಾಸ್ಪತ್ರೆಯಲ್ಲಿ ಡಯಾಲಿಸಿಸ್ ವಿಭಾಗ ಮುಚ್ಚುವುದನ್ನು ವಿರೋಧಿಸಿ ರೋಗಿಗಳು ನಗರದ ಜಿಲ್ಲಾಡಳಿತ ಭವನ ಎದುರು ಪ್ರತಿಭಟನೆ ನಡೆಸಿದರು.

ನಗರದ ಜಿಲ್ಲಾಸ್ಪತ್ರೆ ಡಯಾಲಿಸಿಸ್ ವಿಭಾಗದ ಸಿಬ್ಬಂದಿಗಳು ತಮ್ಮ ವಿವಿಧ ಬೇಡಿಕೆಗಳ ಈಡೇರಿಕೆ ಒತ್ತಾಯಿಸಿ ಬೆಂಗಳೂರಿನಲ್ಲಿ ನಡೆಯುವ ಪ್ರತಿಭಟನೆಗೆ ಹೋಗಿರುವುದರಿಂದ ಡಯಾಲಿಸಿಸ್ ಕೇಂದ್ರ ಮುಚ್ಚಿದ್ದು, 4 ದಿನಗಳಿಂದ ಹಿಂದೆ ಡಯಾಲಿಸಿಸ್ ಮಾಡಿದ್ದು, ಇಂದು ನಾವು ಡಯಾಲಿಸಿಸ್ ಮಾಡಿಸಬೇಕಿತ್ತು. ಈ ದಿನ ಮಾಡದಿದ್ದರೆ ನಮ್ಮಗಳ ಪ್ರಾಣಕ್ಕೆ ತೊಂದರೆಯಾಗುವ ಭಯವಿದೆ. ಆದ್ದರಿಂದ ಡಯಾಲಿಸಿಸ್ ಮಾಡಿಸಬೇಕು ಎಂದು ಆಳಲು ತೋಡಿಕೊಂಡರಲ್ಲದೆ, ಡಿಎಚ್‌ಓ ಡಾ.ವಿಶ್ವೇಶ್ವರಯ್ಯ ಅವರಿಗೆ ಮನವಿ ಸಲ್ಲಿಸಿದರು.

ಸಿದ್ದಯ್ಯನಪುರ ನಾಗರಾಜು ಮಾತನಾಡಿ, 55 ಮೂತ್ರಪಿಂಡ ರೋಗಿಗಳು ಇದ್ದು ಸರ್ಕಾರಿ ಜಿಲ್ಲಾಸ್ಪತ್ರೆಯ ಡಯಾಲಿಸಿಸ್ ವಿಭಾಗದಲ್ಲಿ ಡಯಾಲಿಸಿಸ್ ಮಾಡಿಸಿಕೊಳ್ಳುತ್ತಿದ್ದೇವೆ. ಹಿಂದೆ ಇದ್ದಂತಹ ಬಿಆರ್‌ಎಸ್ ಸಂಸ್ಥೆಯವರು ತುಂಬಾ ಚೆನ್ನಾಗಿ ನಮ್ಮನ್ನು ನೋಡುಕೊಳ್ಳುತ್ತಿದ್ದರು. ಈಗಿನ ಸಂಜೀವಿನಿ ಸಂಸ್ಥೆಯವರು ಹಣ ಮಾಡುವುದರಲ್ಲಿ ತೊಡಗಿದ್ದಾರೆ. ಎಲ್ಲವನ್ನು ಬದಲಾವಣೆ ಮಾಡಿ ಡಯಾಲೈಸರ್‌ಗಳನ್ನು 10 ರಿಂದ 12 ಬಾರಿ ಉಪಯೋಗಿಸುತ್ತಿದ್ದಾರೆ. ಇದರಿಂದ ರೋಗಿಗಳಿಗೆ ಸರಿಯಾದ ರೀತಿಯಾಗಿ ಡಯಾಲಿಸಿಸ್ ಆಗದೆ ತೊಂದರೆ ಆಗುತ್ತಿದೆ ಎಂದು ದೂರಿದರು.

ಹಾಸಿಗೆ ಮೇಲಿನ ಹೊದಿಕೆಗಳನ್ನು ದಿನಕ್ಕೊಮ್ಮೆ ಬದಲಿಸುವುದು, ಸರ್ಕಾರದ ವತಿಯಿಂದ ರಕ್ತ ಹೆಚ್ಚುವ ಇಂಜೆಕ್ಷನ್‌ಗಳನ್ನು ನೀಡುವುದು, ಉತ್ತಮ ಗುಣಮಟ್ಟದ ಡಯಾಲೈಸರ್ ಮತ್ತು ಎಫರಿನ್ ಇಂಜೆಕ್ಷನ್‌ನನ್ನು ಉತ್ತಮವಾದ ಕಂಪನಿಗಳಿಂದ ನೀಡಬೇಕು. ಡಯಾಲೈಸರ್‌ಗಳನ್ನು 6 ರಿಂದ 7 ಬಾರಿ ಮಾತ್ರ ಬಳಸಲು ನಿರ್ದೇಶನ ನೀಡಬೇಕು. ರೋಗಿಗಳ ಸಂಖ್ಯೆ ಹೆಚ್ಚಾಗಿರುವ ಕಾರಣ ಡಯಾಲಿಸಿಸ್ ಯಂತ್ರಗಳನ್ನು ಹೆಚ್ಚು ಮಾಡಬೇಕು. ಆಕ್ಸಿಜನ್ ವೆಂಟಿಲೇಟರ್‌ಗಳನ್ನು ಅಳವಡಿಸಬೇಕು. ರೋಗಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆ, ಊಟ, ಉಪಾಹಾರ ವ್ಯವಸ್ಥೆ ಮಾಡಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಅಬ್ದುಲ್ ಲತೀಫ್, ಮೊಹಮ್ಮದ್ ಕಿಜರ್, ರಾಜಶೇಖರ್, ಮಹೇಂದ್ರ, ಸಫೀಉಲ್ಲಾ, ರಾಜೇಂದ್ರ, ಬೀರೇಗೌಡ, ಶಿವನಾಗಪ್ಪ ನಿಂಗರಾಜಶೆಟ್ಟಿ, ಮಹದೇವಸ್ವಾಮಿ, ಭಾರತೀಯ ವಿದ್ಯಾರ್ಥಿ ಸಂಘದ ಜಿಲ್ಲಾ ಸಂಯೋಜಕ ಪರ್ವತ್ ರಾಜ್, ಎಸ್ ಡಿಪಿಐ ಜಿಲ್ಲಾಧ್ಯಕ್ಷ ಅಬ್ರಾರ್ ಅಹಮದ್, ಉಪಾಧ್ಯಕ್ಷ ಸಿ.ಎಸ್.ಸೈಯದ್ ಆರೀಫ್ ಇತರರು ಭಾಗವಹಿಸಿದ್ದರು.

ಮೇಕೂರು ಹೊಸ್ಕೇರಿ ಒಂಟಿ ಮನೆ ಕಳ್ಳತನ ಪ್ರಕರಣ ಪತ್ತೆ

ಅಸ್ಸಾಂ ಮೂಲದ ಇಬ್ಬರ ಸೆರೆ, ಮತ್ತಿಬ್ಬರು ಪರಾರಿ



ಮಡಿಕೇರಿ, ಜೂ.24– ಸಿದ್ದಾಪುರ ಪೊಲೀಸ್ ಠಾಣಾ ವ್ಯಾಪ್ತಿಯ ಮೇಕೂರು ಹೊಸ್ಕೇರಿ ಗ್ರಾಮದ ಒಂಟಿ ಮನೆಯೊಂದರಲ್ಲಿ ನಡೆದಿದ್ದ ಕಳ್ಳತನ ಪ್ರಕರಣವನ್ನು ಬೇಧಿಸಲಾಗಿದ್ದು, ಅಸ್ಸಾಂ ಮೂಲದ ಇಬ್ಬರು ಆರೋಪಿಗಳನ್ನು ಮಾಲು ಸಮೇತ ಬಂಧಿಸಲಾಗಿದೆ.

ಅಸ್ಸಾಂ ಮೂಲದ ಪ್ರಸ್ತುತ ದುಬಾರೆ ಚೆಟ್ಟಿನಾಡು ಪ್ಲಾಂಟೇಷನ್‌ನಲ್ಲಿ ವಾಸವಿರುವ ಕುರ್ಬನ್ ಅಲಿ(20) ಹಾಗೂ ಮಹಿರುದ್ದೀನ್ ಅಲಿ(28) ಬಂಧಿತ ಆರೋಪಿಗಳು. ಆರೋಪಿಗಳಿಂದ 247.7 ಗ್ರಾಂ ಚಿನ್ನಾಭರಣ ಹಾಗೂ ಬೆಳ್ಳಿಯ ಪೀಚೆ ಕತ್ತಿ ಸೇರಿ ಒಟ್ಟು 11 ಲಕ್ಷದ 70 ಸಾವಿರ ರೂ. ಮೌಲ್ಯದ ವಸ್ತುಗಳನ್ನು ವಶಕ್ಕೆ ಪಡೆಯಲಾಗಿದೆ.

ಈ ಪ್ರಕರಣದ ಮತ್ತಿಬ್ಬರು ಆರೋಪಿಗಳಾದ ಸಫಿವುಲ್ ಇಸ್ಲಾಂ ಹಾಗೂ ಮೊಹಿಬುಲ್ ಇಸ್ಲಾಂ ಅವರುಗಳು ತಲೆ ಮರೆಸಿಕೊಂಡಿದ್ದು, ಅವರ ಬಂಧನಕ್ಕೆ ಕ್ರಮ ಕೈಗೊಳ್ಳಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಚೀರ ಎ.ಅಯ್ಯಪ್ಪ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಮೇಕೂರು ಹೊಸ್ಕೇರಿ ಗ್ರಾಮ ನಿವಾಸಿ ಕೂತಂಡ ಸುಬ್ಬಯ್ಯ ಅವರು ಜೂ.12 ರಂದು 11 ಗಂಟೆ ವೇಳೆಗೆ ತಮ್ಮ ಪತ್ನಿಯೊಂದಿಗೆ ದಿನ ಬಳಕೆ ವಸ್ತುಗಳನ್ನು ತರಲು ಪಾಲಿಬೆಟ್ಟ ಗ್ರಾಮಕ್ಕೆ ತೆರಳಿದ್ದರು. ಮಧ್ಯಾಹ್ನ 1 ಗಂಟೆಯ ವೇಳೆಗೆ ಮನೆಗೆ ಬಂದಾಗ ಮುಂಬಾಗಿಲು ತೆಗೆದಿದ್ದು, ಒಳ ಹೋಗಿ ನೋಡಿದಾಗ 10 ಲಕ್ಷ ರೂ. ಮೌಲ್ಯದ ಚಿನ್ನಾಭರಣಗಳು ಕಳುವಾಗಿರುವುದು ತಿಳಿಯಿತು. ಈ ಕುರಿತು ಕೂತಂಡ ಸುಬ್ಬಯ್ಯ ಅವರು ಸಿದ್ದಾಪುರ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕ್ಯಾಪ್ಟನ್ ಮಲ್ಚೀರ ಅಯ್ಯಪ್ಪ ಅವರು ಮಡಿಕೇರಿ ಡಿವೈಎಸ್‌ಪಿ, ಮಡಿಕೇರಿ ವೃತ್ತ ನಿರೀಕ್ಷಕರು, ಸಿದ್ದಾಪುರ ಠಾಣಾಧಿಕಾರಿ ಹಾಗೂ ಡಿಸಿಐಬಿ ವೃತ್ತ ನಿರೀಕ್ಷಕರ ಒಂದು ತಂಡ ರಚಿಸಿದ್ದರು.

ಆರೋಪಿಗಳ ಮಾಹಿತಿ ಪತ್ತೆ ಹಚ್ಚಲು ಕೆಲವು ಸಿಸಿ ಕ್ಯಾಮರಾ ದೃಶ್ಯಗಳನ್ನು ಪರಿಶೀಲಿಸಿದ ಪೊಲೀಸ್ ತನಿಖಾ ತಂಡ ಕೆಲವು ತಾಂತ್ರಿಕ ಸಾಕ್ಷ್ಯಗಳನ್ನು ಸಂಗ್ರಹಿಸಿ ಇಬ್ಬರು ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಆರೋಪಿಗಳು ದಂಪತಿ ಮನೆಯಿಂದ ಹೊರಹೋಗುವುದನ್ನು ಗಮನಿಸಿ, ನಂತರ ಬಾಗಿಲ ಬೀಗ ಮುರಿದು ಒಳನುಗ್ಗಿ ನಗ–ನಾಣ್ಯ ದೋಚಿ ಪರಾರಿಯಾಗಿದ್ದುದು ತನಿಖೆ ವೇಳೆ ಬಯಲಾಗಿದೆ.

ಕೊಡಗು ಜಿಲ್ಲೆಯಲ್ಲಿ ಇತ್ತೀಚೆಗೆ ಹೆಚ್ಚಾಗಿ ಅಪರಾಧ ಪ್ರಕರಣಗಳು ನಡೆಯುತ್ತಿದ್ದು, ಹೊರ ರಾಜ್ಯದ ಕೂಲಿ ಕಾರ್ಮಿಕರೇ ಹೆಚ್ಚಾಗಿ ಭಾಗಿಯಾಗುತ್ತಿರುವುದು ಕಂಡು ಬರುತ್ತಿದೆ. ಹೊರ ರಾಜ್ಯದ ಕೂಲಿ ಕಾರ್ಮಿಕರನ್ನು ಕೆಲಸಕ್ಕೆ ನೇಮಿಸಿಕೊಳ್ಳುವ ಸಂದರ್ಭ ತೋಟದ ಮಾಲೀಕರು ಕಡ್ಡಾಯವಾಗಿ ಕಾರ್ಮಿಕರ ಅಪರಾಧ ಹಿನ್ನೆಲೆಯನ್ನು ಪರಿಶೀಲಿಸಿ ಅವರ ಅಗತ್ಯ ದಾಖಲಾತಿಗಳನ್ನು ಪರಿಶೀಲಿಸಿ ಕೆಲಸಕ್ಕೆ ನೇಮಿಸಿಕೊಳ್ಳಬೇಕು. ಮಾತ್ರವಲ್ಲದೇ ಕಾರ್ಮಿಕರ ಇತ್ತೀಚಿನ ಭಾವಚಿತ್ರವನ್ನು ಪಡೆದುಕೊಳ್ಳಬೇಕು ಹಾಗೂ ತಮ್ಮ ವ್ಯಾಪ್ತಿಯ ಪೊಲೀಸ್ ಠಾಣೆಗೆ ಕೆಲಸಕ್ಕೆ ನೇಮಿಸಿಕೊಂಡ ಕಾರ್ಮಿಕರ ಮಾಹಿತಿಯನ್ನು ನೀಡುವಂತೆ ಪೊಲೀಸ್ ಇಲಾಖೆ ಸೂಚಿಸಿದೆ.

ಗಾಂಜಾ ಮಾರಾಟ: ಮೂವರ ಬಂಧನ



ಮಡಿಕೇರಿ,ಜೂ.24– ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಗಾಂಜಾ ಮಾರಾಟ ಮಾಡುತ್ತಿದ್ದ ಮೂವರು ಆರೋಪಿಗಳನ್ನು ಬಂಧಿಸುವಲ್ಲಿ ಮಡಿಕೇರಿ ಗ್ರಾಮಾಂತರ ಪೊಲೀಸರು ಯಶಸ್ವಿಯಾಗಿದ್ದಾರೆ. ನಗರದ ಹಿಲ್ ರಸ್ತೆ ನಿವಾಸಿ ಮಹಮದ್ ಮೊಹಿಸಿನ್(43), ತೊಂಬತ್ತು ಮನೆ ಹಾಕತ್ತೂರು ನಿವಾಸಿ ಕರುಣಾ ಕುಮಾರ(27) ಹಾಗೂ ಅಪ್ಪಂಗಳ ಹೆರವನಾಡು ನಿವಾಸಿ ಪ್ರತಾಪ್ ಕುಮಾರ್(28) ಎಂಬವರೇ ಬಂಧಿತ ಆರೋಪಿಗಳಾಗಿದ್ದಾರೆ. ಜೂ.24 ರಂದು ಈ ಮೂವರು ಮಡಿಕೇರಿ–ಮಂಗಳೂರು ರಸ್ತೆಯ ತಾಳತ್ತಮನೆ ಜಂಕ್ಷನ್ ಬಸ್ ಶೆಲ್ಟರ್ ಬಳಿ ಗಾಂಜಾ ಮಾರಾಟ ಮಾಡಲು ಯತ್ನಿಸುತ್ತಿರುವ ಬಗ್ಗೆ ಮಡಿಕೇರಿ ಗ್ರಾಮಾಂತರ ಪೊಲೀಸರಿಗೆ ಖಚಿತ ಮಾಹಿತಿ ಲಭಿಸಿತ್ತು. ಈ ಮಾಹಿತಿ ಆಧರಿಸಿ ದಾಳಿ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬಂಧಿತರಿಂದ 15 ಸಾವಿರ ರೂ. ಮೌಲ್ಯದ 680 ಗ್ರಾಂ ಗಾಂಜಾವನ್ನು ವಶಕ್ಕೆ ಪಡೆಯಲಾಗಿದೆ. ಆರೋಪಿಗಳ ವಿರುದ್ಧ ಎನ್.ಡಿ.ಪಿ.ಎಸ್ ಕಾಯಿದೆ ಅಡಿ ಪ್ರಕರಣ ದಾಖಲಿಸಿಕೊಂಡಿದ್ದು, ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ಯಮಕಪಾಡಿಯಲ್ಲಿ ಕಾಡಾನೆ ದಾಳಿ: ಬೆಳೆ ನಾಶ

ಗ್ರಾಮಸ್ಥರು, ಕೂಲಿ ಕಾರ್ಮಿಕರಲ್ಲಿ ಆತಂಕ



ನಾಪೋಕ್ಲು, ಜೂ.24– ಸಮೀಪದ ಯಮಕಪಾಡಿ ಗ್ರಾಮದಲ್ಲಿ ಕಾಡಾನೆಗಳ ಹಾವಳಿಯಿಂದ ತತ್ತರಿಸುವಂತಾಗಿದೆ. ಗ್ರಾಮದ ಕೆಟೋಳಿರ ಮಾಚಯ್ಯ ಎಂಬುವವರ ಮನೆಯ ಹಿತ್ತಲಲ್ಲಿ ಕಾಡಾನೆಗಳು ಬಾಳೆ. ತೆಂಗು. ಅಡಿಕೆ ಗಿಡಗಳನ್ನು ನಾಶ ಮಾಡಿದೆ. ಕೇಟೋಳಿರ ಮಾಚಯ್ಯ ಮನೆಯಲ್ಲಿ ಒಬ್ಬರೇ ವಾಸವಾಗಿದ್ದು ಕಾಡಾನೆಗಳ ಉಪಟಳದಿಂದ ಭಯಭೀತರಾಗಿದ್ದಾರೆ.

'ರಾತ್ರಿ ತೋಟಗಳಲ್ಲಿ ಅಡ್ಡಾಡಿದ ಕಾಡಾನೆಗಳು ಕಾಫಿ ತೆಂಗು ಮತ್ತಿತರ ಬೆಳೆಗಳನ್ನು ನಾಶಪಡಿಸಿದ್ದು ಅಪಾರ ನಷ್ಟ ಉಂಟುಮಾಡಿದೆ. ಬೆಳಗ್ಗಿನ ಜಾವ ಮನೆಯಂಗಳದಲ್ಲಿ ಆನೆಗಳು ಇದ್ದುದನ್ನು ಕಂಡು ಭಯಭೀತನಾಗಿದ್ದೆ ಎಂದು ಅವರು ತಿಳಿಸಿದ್ದಾರೆ.

ಕಾಡಾನೆಗಳ ಹಾವಳಿಯಿಂದ ಕಾರ್ಮಿಕರು ತೋಟಗಳಲ್ಲಿ ಕೆಲಸ ನಿರ್ವಹಿಸಲು ಹಿಂದೇಟು ಹಾಕುತ್ತಿದ್ದಾರೆ. ಕಾಡಾನೆಗಳಿಂದ ಉಂಟಾದ ನಷ್ಟಕ್ಕೆ ಸೂಕ್ತ ಪರಿಹಾರ ಕೊಡುವಂತೆಯೂ ಹಾಗೂ ಕಾಡಾನೆಗಳನ್ನು ಕಾಡಿಗಟ್ಟುವಲ್ಲಿ ಅರಣ್ಯ ಇಲಾಖೆ ಕ್ರಮಕೈಗೊಳ್ಳಬೇಕೆಂದು ಮಾಚಯ್ಯ ಒತ್ತಾಯಿಸಿದ್ದಾರೆ. ಸುಮಾರು ಸಮಯ ಬೆಳಗ್ಗಿನ ಜಾವ ಕಾಡಾನೆಗಳು ಮನೆಯ ಹತ್ತಿರ ಬಂದಿದ್ದು ನಾನು ಭಯ ಬೀತರಾಗಿದ್ದೆ ಎಂದು ಕೆಟೋಳಿರ ಮಾಚಯ್ಯ ಹೇಳುತ್ತಾರೆ. ಇದರಿಂದ ನಮಗೆ ಅಪಾರ ನಷ್ಟವಾಗಿ ಸರಕಾರ ಇದಕ್ಕೆ ಪರಿಹಾರವನ್ನು ಕೊಡಿಸಿಕೊಟ್ಟು ಈ ವಿಭಾಗದಿಂದ ಕಾಡಾನೆಗಳನ್ನು ಓಡಿಸಲು ಕ್ರಮಕೈಗೊಳ್ಳಬೇಕೆಂದು ಅವರು ಅರಣ್ಯ ಇಲಾಖೆಯವರನ್ನು ಒತ್ತಾಯಿಸಿದ್ದಾರೆ.

ಜು.1 ರಂದು ಪತ್ರಿಕಾ ದಿನಾಚರಣೆ

ಮಡಿಕೇರಿ, ಜೂ.24– ಕೊಡಗು ಪತ್ರಕರ್ತರ ಸಂಘದಿಂದ ಜು.1 ರಂದು ಪತ್ರಿಕಾ ದಿನ ಆಚರಿಸಲಾಗುವುದು. ನಗರದ ಪತ್ರಿಕಾ ಭವನದ ಸಭಾಂಗಣದಲ್ಲಿ ಬೆಳಗ್ಗೆ 10 ಗಂಟೆಗೆ ನಡೆಯುವ ಕಾರ್ಯಕ್ರಮವನ್ನು ಬೆಂಗಳೂರಿನ ಪತ್ರಕರ್ತ ಡಾ. ಸಿದ್ದನಗೌಡ ಪಾಟೀಲ್ ಉದ್ಘಾಟಿಸಲಿದ್ದು, ಅಧ್ಯಕ್ಷತೆಯನ್ನು ಕೊಡಗು ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಎ.ಮುರಳೀಧರ್ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಕನ್ನಡಪ್ರಭ ಪತ್ರಿಕೆಯ ಕಾರ್ಯ ನಿರ್ವಾಹಕ ಸಂಪಾದಕ ಅಂಶಿ ಪ್ರಸನ್ನ ಕುಮಾರ್, ಕೊಡಗು ಪತ್ರಿಕಾ ಭವನ ಮ್ಯಾನೇಜಿಂಗ್ ಟ್ರಸ್ಟಿ ಬಿ.ಎನ್. ಮನುಶೆಣೈ, ಮಡಿಕೇರಿ ತಹಸೀಲ್ದಾರ್ ಪಿ.ಎಸ್.ಮಹೇಶ್, ಮುಳಿಯ ಜ್ಯುವೆಲ್ಲರ್ಸ್ ವ್ಯವಸ್ಥಾಪಕ ನಿರ್ದೇಶಕ ಕೃಷ್ಣ ನಾರಾಯಣ ಮುಳಿಯ ಪಾಲ್ಗೊಳ್ಳಲಿದ್ದಾರೆ.

ಕಾರ್ಯಕ್ರಮದಲ್ಲಿ ಪತ್ರಿಕಾ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ ಹಿರಿಯ ಪತ್ರಕರ್ತರಿಗೆ ಸನ್ಮಾನ ಮಾಡಲಾಗುವುದು. ಕೊಡಗು ಪತ್ರಕರ್ತರ ಸಂಘದ ಗುರುತಿನ ಚೀಟಿ ಇದೇ ವೇಳೆ ವಿತರಿಸಲಾಗುತ್ತದೆ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಉಜ್ವಲ್ ರಂಜಿತ್ ಮಾಹಿತಿ ನೀಡಿದ್ದಾರೆ.

ರಾಷ್ಟ್ರಪತಿ ಅಭ್ಯರ್ಥಿಯಾಗಿ ದ್ರೌಪದಿ ಮುರ್ಮು

ಇದೊಂದು ಐತಿಹಾಸಿಕ ನಿರ್ಧಾರ



ವಿರಾಜಪೇಟೆ, ಜೂ.24– ರಾಷ್ಟ್ರಪತಿ ಚುನಾವಣೆಗೆ ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿಯಾಗಿ ದ್ರೌಪದಿ ಮುರ್ಮು ಆಯ್ಕೆ ಮಾಡಿರುವುದನ್ನು ಸ್ವಾಗತಿಸಿರುವ ಸಮಾಜ ಸೇವಕ ಮೇರಿಯಂಡ ಸಂಕೇತ್ ಪೂವಯ್ಯ ಬಿಜೆಪಿಯಲ್ಲಿ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳಿದ್ದರೂ ದೇಶದ ಅತ್ಯುನ್ನತ ಸ್ಥಾನಕ್ಕೆ ಬುಡಕಟ್ಟು ಸಮುದಾಯದ ದ್ರೌಪದಿ ಮುರ್ಮು ಅವರನ್ನು ಅಭ್ಯರ್ಥಿಯಾಗಿ ಆಯ್ಕೆ ಮಾಡಿರುವುದು ಐತಿಹಾಸಿಕ ನಿರ್ಧಾರ ಎಂದಿದ್ದಾರೆ.

ಕೊಡಗಿನಲ್ಲಿ ಆನೆ–ಮಾನವ ಸಂಘರ್ಷ ಹೋರಾಟದಲ್ಲಿ ತೊಡಗಿರುವ ನನಗೆ ಕಾಡಂಚಿನಲ್ಲಿರುವ ಬುಡಕಟ್ಟು ಜನಾಂಗಗಳಾದ ಜೇನು ಕುರುಬರು, ಪಂಜರಿಯರ, ಪಣಿಯರ, ಮಲೆಯರ ಬುಡಕಟ್ಟು ಜನಾಂಗಗಳು, ಅವರ ಕಷ್ಟಗಳು, ಅವರ ಮೂಲಭೂತ ಸಮಸ್ಯೆಗಳು ಕಣ್ಣ ಮುಂದೆ ಬರುತ್ತದೆ. ಈ ಸಂದರ್ಭದಲ್ಲಿ ದೇಶದ ಸರ್ವೋನ್ನತ ಹುದ್ದೆಗೆ ಅಭ್ಯರ್ಥಿಯಾಗಿ ಆಯ್ಕೆಯಾಗಿರುವ ಬುಡಕಟ್ಟು ಸಮುದಾಯದ ಹೆಣ್ಣು ಮಗಳು ದ್ರೌಪದಿ ಮುರ್ಮು ಇವರೆಲ್ಲರ ಧ್ವನಿಯಂತೆ ಕಾಣಲಾರಂಭಿಸಿದ್ದಾರೆ ಎಂದು ಅವರು ತಮ್ಮ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಈ ಆಯ್ಕೆ ಪ್ರಜಾತಂತ್ರದ ಹಬ್ಬದಂತೆ ಭಾಸವಾಗುತ್ತಿದೆ. ದೇಶದ ಅತೀ ದೊಡ್ಡ ಮತ್ತು ಪ್ರಬಲವಾಗಿರುವ ಪಕ್ಷದಲ್ಲಿ ದಶಕಗಳಿಂದ ಪಕ್ಷಕ್ಕಾಗಿ ದುಡಿದ ಘಟಾನುಘಟಿ ನಾಯಕರುಗಳ ದಂಡೇ ರಾಷ್ಟ್ರಪತಿ ಸ್ಥಾನಕ್ಕೆ ಕ್ಯೂನಲ್ಲಿ ನಿಂತಿದ್ದಾರೆ. ಕೆಲವು ರಾಜ್ಯಗಳನ್ನು, ಜನಾಂಗಗಳನ್ನು, ಜಾತಿಯನ್ನು ಓಲೈಕೆ ಮಾಡಲು ತಮಗಿಷ್ಟ ಬಂದ ಅಭ್ಯರ್ಥಿಯನ್ನು ಎನ್ ಡಿ ಎ ಘೋಷಣೆ ಮಾಡಬಹುದಿತ್ತು. ಆದರೆ ಇಂಥ ಒಂದು ಅಚ್ಚರಿಯನ್ನು ದೇಶಕ್ಕೆ, ಪ್ರಜಾತಂತ್ರ ವ್ಯವಸ್ಥೆಗೆ ನೀಡುತ್ತಿರುವುದು ಒಂದು ಸಾಧನೆಯೇ ಸರಿ. ಇದು ಪಕ್ಷದ ಬದ್ಧತೆಯನ್ನು ತೋರಿಸುತ್ತಿದೆ ಎಂದು ಅವರು ಹೇಳಿದ್ದಾರೆ.

ರಾಷ್ಟ್ರಪತಿ ಸ್ಥಾನಕ್ಕೆ ಅಭ್ಯರ್ಥಿಯನ್ನಾಗಿ ಈ ದೇಶದ ತಳಸ್ತರದ ಬುಡಕಟ್ಟು ಸಮುದಾಯದ ಹೆಣ್ಣು ಮಗಳನ್ನು ಆಯ್ಕೆ ಮಾಡಿದಾಗ ಆ ನಡೆಯನ್ನು ಪಕ್ಷಾತೀತವಾಗಿ ಒಬ್ಬ ಭಾರತೀಯನಾಗಿ ಪ್ರಶಂಸಿಸಬೇಕು ಎಂದು ಅನ್ನಿಸಿ ಈ ಪ್ರತಿಕ್ರಿಯೆ ನೀಡುತ್ತಿದ್ದೇನೆ. ಜೊತೆಗೆ ಇದು ನನ್ನ ಜವಾಬ್ದಾರಿ ಎಂದು ಕೂಡಾ ಭಾವಿಸಿದ್ದೇನೆ ಎಂದಿದ್ದಾರೆ.

ಮಾರ್ಗೊಲ್ಲಿ ಕಾಫಿ ತೋಟದಲ್ಲಿ ಹುಲಿ ಪ್ರತ್ಯಕ್ಷ

ಅರಣ್ಯ ಇಲಾಖೆಯ ಕ್ಯಾಮೆರಾದಲ್ಲಿ ಸೆರೆ



ಸಿದ್ದಾಪುರ, ಜೂ.24– ಕಳೆದ ಕೆಲ ದಿನಗಳಿಂದ ನಿರಂತರವಾಗಿ ಕಾಣಿಸಿಕೊಳ್ಳುವ ಮೂಲಕ ಕಾರ್ಮಿಕರು ಮತ್ತು ಬೆಳೆಗಾರರಲ್ಲಿ ಆತಂಕ ಮೂಡಿಸಿದ್ದ ಹುಲಿಯೊಂದು ಅರಣ್ಯ ಇಲಾಖೆ ಅಳವಡಿಸಿದ ಸಿಸಿ ಕ್ಯಾಮೆರಾದಲ್ಲಿ ಕಾಣಿಸಿಕೊಂಡಿದೆ. ವಿರಾಜಪೇಟೆ ತಾಲೂಕಿನ ಮಾಲ್ದಾರೆ ಸಮೀಪದ ಮಾರ್ಗೊಲ್ಲಿ ಕಾಫಿ ತೋಟದಲ್ಲಿ ಐದು ದಿನಗಳ ಹಿಂದೆ ಜಾನುವಾರುವೊಂದನ್ನು ಬಲಿ ತೆಗೆದುಕೊಂಡಿತ್ತು.

ಸ್ಥಳಕ್ಕೆ ಅರಣ್ಯಾಧಿಕಾರಿಗಳಾದ ಎಸಿಎಫ್ ಉತ್ತಪ್ಪ, ವಲಯ ಅರಣ್ಯಾಧಿಕಾರಿ ಅಶೋಕ್ ಮತ್ತು ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿದ್ದರು. ನಂತರ ಹುಲಿಯ ಚಲನವಲನ ಪತ್ತೆ ಹಚ್ಚಲು 2 ಕ್ಯಾಮೆರಾಗಳನ್ನು ಅಳವಡಿಸಲಾಗಿತ್ತು. ಗುರುವಾರ ರಾತ್ರಿ 9.12 ಗಂಟೆ ಸುಮಾರಿಗೆ ಜಾನುವಾರು ಬಲಿ ತೆಗೆದುಕೊಂಡಿದ್ದ ಸ್ಥಳಕ್ಕೆ ಬಂದ ಭಾರೀ ಗಾತ್ರದ ಹುಲಿಯೊಂದು ಅರಣ್ಯಇಲಾಖೆಯಿಂದ ಅಳವಡಿಸಲಾಗಿದ್ದ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಮಾಲ್ದಾರೆ, ಬಾಡಗ ಬಾಣಂಗಾಲ, ಪಾಲಿಬೆಟ್ಟ, ಕರಡಿಗೋಡು, ಮೈಲಾಪುರ ಸೇರಿದಂತೆ ಗ್ರಾಮ ವ್ಯಾಪ್ತಿಯಲ್ಲಿ ಕೆಲ ತಿಂಗಳಿಂದ ಕಾಣಿಸಿಕೊಳ್ಳುವ ಮೂಲಕ ಆತಂಕ ಮೂಡಿಸಿದೆ ಅಲ್ಲದೆ, 6 ತಿಂಗಳಲ್ಲಿ ಹುಲಿಯು 10ಕ್ಕೂ ಹೆಚ್ಚು ಜಾನುವಾರುಗಳು 4 ಹಂದಿಗಳನ್ನು ಬೇಟೆಯಾಡಿ ಬಲಿ ತೆಗೆದುಕೊಂಡಿದೆ. ಮಾರ್ಗೊಲ್ಲಿ ಕಾಫಿ ತೋಟದಲ್ಲಿ 2 ತಿಂಗಳ ಹಿಂದೆ ಕಾರ್ಮಿಕರ ಕಣ್ಣಿಗೆ ನೇರವಾಗಿ ಕಾಣಿಸಿಕೊಂಡಿತ್ತು.

ಕಾಡಾನೆ ಹಾವಳಿಯಿಂದ ಭಯಬೀತರಾಗಿದ್ದ ಕಾರ್ಮಿಕರು, ಬೆಳೆಗಾರರು, ಶಾಲಾ ವಿದ್ಯಾರ್ಥಿಗಳಿಗೆ ಈಗ ಹುಲಿಯ ಭೀತಿಯೂ ಎದುರಾಗಿ ಜೀವಭಯದಲ್ಲಿ ಓಡಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಕೂಡಲೇ ಹುಲಿ ಸೆರೆ ಹಿಡಿಯಬೇಕೆಂದು ಕಾರ್ಮಿಕರ ಸಂಘಟನೆ ಒತ್ತಾಯಿಸಿದೆ.

ರಸ್ತೆ ಬದಿ ನಿಂತಿರುವ ರೋಡ್ ರೋಲರ್ ತೆರವಿಗೆ ಮನವಿ



ಮಡಿಕೇರಿ,ಜೂ.24: ಮಡಿಕೇರಿಯಿಂದ ಮಂಗಳೂರಿಗೆ ತೆರಳುವ ಕಾಟಕೇರಿ ಗ್ರಾಮದ ಸಮೀಪದ ರಸ್ತೆ ಬದಿಯಲ್ಲಿ ರೋಡ್ ರೋಲರ್ (ಇಂಜಿನ್) ನಿಂತಿದ್ದು, ತಕ್ಷಣ ತೆರವುಗೊಳಿಸುವಂತೆ ಸ್ಥಳೀಯರು ಒತ್ತಾಯಿಸಿದ್ದಾರೆ.

ಸುಮಾರು ನಾಲ್ಕು ತಿಂಗಳುಗಳಿಂದ ರಸ್ತೆ ಬದಿಯಲ್ಲಿ ನಿಲ್ಲಿಸಲಾಗಿದ್ದು, ವಾಹನಗಳು ಹಾಗೂ ವಿದ್ಯಾರ್ಥಿಗಳ ಓಡಾಟಕ್ಕೆ ತೊಂದರೆ ಉಂಟಾಗುತ್ತಿದೆ. ಅಲ್ಲದೆ ಪಕ್ಕದಲ್ಲೇ ಬಸ್ಸು ತಂಗುದಾಣ, ಅಂಗಡಿ, ನರ್ಸರಿಗಳಿದ್ದು, ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತಿದೆ ಎಂದು ಸ್ಥಳೀಯರು ಆರೋಪಿಸಿದರು.

ವಾಹನದ ಮೇಲೆ ಅಸ್ಲಾಂ ಎಂಬಾ ಹೆಸರಿನೊಂದಿಗೆ ಮೊಬೈಲ್ ಸಂಖ್ಯೆಯೊಂದನ್ನು ಬರೆದಿದ್ದು ಆ ಸಂಖ್ಯೆಗೆ ಕರೆ ಮಾಡಿದರೆ ಯಾವುದೇ ಕರೆಗಳನ್ನು ಸ್ವೀಕರಿಸುತ್ತಿಲ್ಲ ಎಂದರು. ಆದ್ದರಿಂದ ಸಂಬಂಧಪಟ್ಟವರು ಕೂಡಲೇ ಕ್ರಮ ಕೈಗೊಂಡು ವಾಹನ ತೆರವುಗೊಳಿಸುವಂತೆ ಮನವಿ ಮಾಡಿದರು.

ವಾಹನಕ್ಕೆ ಸಿಲುಕಿ ಜಿಂಕೆ ಸಾವು



ಗೋಣಿಕೊಪ್ಪ, ಜೂ.24– ವಿರಾಜಪೇಟೆ ಮುಖ್ಯರಸ್ತೆಯ ಹಾತೂರು ಬಳಿ ವಾಹನಕ್ಕೆ ಸಿಲುಕಿ ಹೆಣ್ಣು ಜಿಂಕೆಯೊಂದು ಸಾವನ್ನಪ್ಪಿದೆ. ಸುಮಾರು 3 ವರ್ಷದ ಈ ಜಿಂಕೆ ರಸ್ತೆ ದಾಟುವ ವೇಳೆ ವಾಹನಕ್ಕೆ ಸಿಲುಕಿ ಸಾವನ್ನಪ್ಪಿದ್ದು, ಪೊನ್ನಂಪೇಟೆ ವಲಯ ಅರಣ್ಯ ಇಲಾಖೆ ಅಧಿಕಾರಿಗಳು ವಶಕ್ಕೆ ಪಡೆದು ಶವ ಪರೀಕ್ಷೆ ನಡೆಸಿ, ಕಚೇರಿ ಆವರಣದಲ್ಲಿ ಅಂತ್ಯ ಸಂಸ್ಕಾರ ನೆರವೇರಿಸಿದ್ದಾರೆ.

ಪೊನ್ನಂಪೇಟೆ ಪಶು ವೈದ್ಯ ಡಾ. ಶಾಂತೇಶ್ ಶವ ಪರೀಕ್ಷೆ ನಡೆಸಿದರು.

ಒಂದನೇ ಪುಟದಿಂದ

ಕೆಲವೇ ಗಂಟೆಯಲ್ಲಿ ಸುಖಾಂತ್ಯ

ಮೈಸೂರು– ಬೆಂಗಳೂರು, ಮೈಸೂರು–ಹುಣಸೂರು, ಮಾನಂದ ವಾಡಿ ರಸ್ತೆ ತಿ.ನರಸೀಪುರ ರಸ್ತೆ ಸೇರಿದಂತೆ ಮೈಸೂರು ನಿಂದ ಹೊರ ಹೋಗುವ ಎಲ್ಲಾ ರಸ್ತೆಗಳನ್ನು ಬಂದ್ ಮಾಡಿ ಪೊಲೀಸರು ವಾಹನಗಳ ತಪಾಸಣೆ ತೀವ್ರ ಗೊಳಿಸಿದರು. ಮತ್ತೊಂದೆಡೆ ಸೆನ್ ಠಾಣೆ ಪೊಲೀಸರು ಬೆಮೆಲ್‌ನಗರದ ಮೊಬೈಲ್ ಟವರ್‌ಗಳಲ್ಲಿ ಕಾರ್ಯ ನಿರ್ವಹಿಸಿರುವ ಮೊಬೈಲ್ ಸಂಖ್ಯೆಗಳ ಮಾಹಿತಿ ಕಲೆ ಹಾಕಲಾರಂಭಿಸಿದರು. ಅದೇ ರೀತಿ ಸದರಿ ಟವರ್‌ನಲ್ಲಿ ಕಾರ್ಯ ನಿರ್ವಹಿಸಿದ ಮೊಬೈಲ್‌ಗಳಲ್ಲಿ ಬಾಲಕನ ಅಪಹರಣದ ನಂತರ ಬೇರೆ ಟವರ್‌ಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬಗ್ಗೆಯೂ ಕೂಡ ಗಮನಹರಿಸಿ ಅನುಮಾನ ಬಂದ ನಂಬರ್‌ಗಳನ್ನು ಪಟ್ಟಿ ಮಾಡಲಾರಂಭಿಸಿದರು. ಅದು ಮಾತ್ರವಲ್ಲದೇ ಮೈಸೂರು ಜಿಲ್ಲಾ ಪೊಲೀಸರ ನೆರವನ್ನೂ ಕೂಡ ನಗರ ಪೊಲೀಸರು ಪಡೆದಿದ್ದು, ಶ್ರೀರಂಗಪಟ್ಟಣ, ಹುಣಸೂರು, ತಿ.ನರಸೀಪುರ ಮುಂತಾದೆಡೆ ಜಿಲ್ಲಾ ಪೊಲೀಸರು ವಾಹನ ತಪಾಸಣೆಯನ್ನು ತೀವ್ರಗೊಳಿಸಿದ್ದರು.

ಬಾಲಕನ ಅಪಹರಣವಾದ ಕೆಲವೇ ನಿಮಿಷಗಳಲ್ಲಿ ನಗರದಾದ್ಯಂತ ಎಲ್ಲಾ ಸಂಪರ್ಕ ರಸ್ತೆಗಳಲ್ಲಿ ಪೊಲೀಸರ ಚಲನವಲನ ಕಂಡು ಬೆಚ್ಚಿಬಿದ್ದ ಅಪಹರಣಕಾರರು, ಘಟನೆ ನಡೆದು ಐದು ಗಂಟೆ ನಂತರ ಸರಿರಾತ್ರಿ ಮೈಸೂರು–ಗದ್ದಿಗೆ ರಸ್ತೆಯಲ್ಲಿ ಬಾಲಕನನ್ನು ಬಿಟ್ಟು ಪರಾರಿಯಾಗಿದ್ದಾರೆ. ಮೈಸೂರಿನಿಂದ ಹೊರ ಹೋಗುವ ರಸ್ತೆಗಳಲ್ಲಿ ಮಫ್ತಿಯಲ್ಲಿ, ಖಾಸಗಿ, ಪೊಲೀಸ್ ಹಾಗೂ ಇತರೆ ಇಲಾಖೆಗಳ ವಾಹನಗಳಲ್ಲಿ ಗಸ್ತು ತಿರುಗುತ್ತಿದ್ದ ಪೊಲೀಸರಿಗೆ ರಾತ್ರಿ 12 ಗಂಟೆ ಸುಮಾರಿನಲ್ಲಿ ಬಾಲಕ ಪತ್ತೆಯಾಗಿದ್ದಾನೆ. ರಸ್ತೆಯಲ್ಲಿ ನಿಂತು ಮಫ್ತಿಯಲ್ಲಿ ದ್ವಿಚಕ್ರ ವಾಹನದಲ್ಲಿ ಬರುತ್ತಿದ್ದ ಪೊಲೀಸರಲ್ಲಿ ಡ್ರಾಪ್ ಕೇಳಿದ ಬಾಲಕನ ಬಗ್ಗೆ ವಿಚಾರಿಸಿದಾಗ ಆತನೇ ಅಪಹರಿಸಲ್ಪಟ್ಟ ಬಾಲಕ ಎಂಬುದು ಖಚಿತವಾಯಿತು. ತಕ್ಷಣವೇ ಪೊಲೀಸರು ಆತನನ್ನು ತಮ್ಮ ದ್ವಿಚಕ್ರ ವಾಹನದಲ್ಲೇ ಕೂರಿಸಿಕೊಂಡು ನಗರದತ್ತ ಬರುತ್ತಾ ವೈರ್‌ಲೆಸ್‌ನಲ್ಲಿ ಕಂಟ್ರೋಲ್ ರೂಂ ಮತ್ತು ನಗರ ಪೊಲೀಸ್ ಆಯುಕ್ತರಿಗೆ ಮಾಹಿತಿ ರವಾನಿಸಿದ್ದಾರೆ. ನಂತರ ಕುವೆಂಪುನಗರ ಠಾಣೆಗೆ ಬಾಲಕನ ಕರೆ ತಂದು, ಅಲ್ಲಿಗೆ ಪೋಷಕರನ್ನು ಕರೆಸಿ, ಆತನನ್ನು ಒಪ್ಪಿಸುವ ಮೂಲಕ ಒಂದು ಹಂತದ ಪ್ರಮುಖ ಕಾರ್ಯಾಚರಣೆಯನ್ನು ಯಶಸ್ವಿಯಾಗಿ ಅಂತ್ಯಗೊಳಿಸಿದ ಪೊಲೀಸರು, ಅಪಹರಣಕಾರರ ಪತ್ತೆಗಾಗಿ 2ನೇ ಹಂತದ ಕಾರ್ಯಾಚರಣೆಯಲ್ಲಿ ತೊಡಗಿದ್ದಾರೆ.

ಹಣಕ್ಕಾಗಿ ಅಪಹರಣ: ವೈದ್ಯ ದಂಪತಿಗೆ ಯಾರೂ ವಿರೋಧಿಗಳಿಲ್ಲ. ಅವರ ಮೇಲೆ ಯಾರಿಗೂ ದ್ವೇಷವೂ ಇಲ್ಲ. ದಂಪತಿ ವೈದ್ಯರಾಗಿರುವುದರಿಂದ ಅವರ ಪುತ್ರನನ್ನು ಅಪಹರಿಸಿದರೆ ಅಪಾರ ಹಣ ದೊರೆಯುತ್ತದೆ ಎಂದು ಅಪಹರಣಕಾರರು ಬಾಲಕನನ್ನು ಅಪಹರಿಸಿರಬಹುದು ಎಂದು ಶಂಕಿಸಲಾಗಿದೆ. ವೈದ್ಯ ದಂಪತಿಯ ಬಗ್ಗೆ ಸಂಪೂರ್ಣ ಮಾಹಿತಿ ಅರಿತಿರುವವರೇ ಈ ಅಪಹರಣ ಪ್ರಕರಣದಲ್ಲಿ ಭಾಗಿಯಾಗಿರಬಹುದು. ಬಾಲಕನ ಚಲನವಲನವನ್ನು ಕೆಲ ದಿನಗಳಿಂದ ಗಮನಿಸಿರುವ ಅಪಹರಣಕಾರರು, ಸಂಜೆ ವೇಳೆ ಆತ ಸೈಕಲ್ ಹೊಡೆಯುತ್ತಾನೆ ಎಂಬುದನ್ನು ಖಚಿತಪಡಿಸಿಕೊಂಡು ಮನೆ ಬಳಿಯ ತಿರುವಿನಲ್ಲಿ ಕಾರನ್ನು ನಿಲ್ಲಿಸಿಕೊಂಡು ಬಾಲಕನಿಗಾಗಿ ಕಾದಿದ್ದಾರೆ. ಆತ 2–3 ರೌಂಡ್ ಹೊಡೆದು ಮತ್ತೆ ಅತ್ತ ಬರುತ್ತಿದ್ದಂತೆಯೇ ಕಾರಿನ ಹಿಂಬಾಗಿಲನ್ನು ತೆರೆದಿಟ್ಟುಕೊಂಡಿದ್ದ ಅಪಹರಣಕಾರರು, ಹತ್ತಿರ ಬರುತ್ತಿದ್ದಂತೆಯೇ ಬಾಲಕನನ್ನು ಎಳೆದು ಕಾರಿನಲ್ಲಿ ಹಾಕಿಕೊಂಡಿದ್ದಾರೆ. ಕಿರುಚಾಡುತ್ತಾ ಬಾಲಕ ಒದ್ದಾಡುತ್ತಿದ್ದಾಗ ಯಾರಾದರೂ ಸಾರ್ವಜನಿಕರು ಬಂದುಬಿಡಬಹುದು ಎಂದು ಹೆದರಿದ ಅಪಹರಣಕಾರರು, ಹಿಂಬಾಗಿಲು ತೆರೆದಿದ್ದಂತೆಯೇ ಕಾರನ್ನು ಚಾಲನೆ ಮಾಡಿಕೊಂಡು ಹೋಗಿದ್ದಾರೆ. ನಂತರ ಸಂಪೂರ್ಣವಾಗಿ ಬಾಲಕನನ್ನು ಕಾರಿನೊಳಗೆ ಎಳೆದುಕೊಂಡು ನಂತರ ಹಿಂಬಾಗಿಲನ್ನು ಮುಚ್ಚಿದ್ದಾರೆ ಎನ್ನಲಾಗಿದೆ. ಅಪಹರಣಕಾರರು ಮೈಸೂರಿನ ರಸ್ತೆಗಳ ಅದರಲ್ಲೂ ಪ್ರಮುಖವಾಗಿ ವೈದ್ಯ ದಂಪತಿ ವಾಸವಿರುವ ಬೆಮೆಲ್‌ನಗರದ ಸಂಪರ್ಕ ರಸ್ತೆಗಳನ್ನು ಚೆನ್ನಾಗಿ ಅರಿತವರಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ.

ಸಾಮಾಜಿಕ ಜಾಲತಾಣದ ಸಹಾಯ: ಬಾಲಕ ಸಂಜೆ 7 ಗಂಟೆ ಸುಮಾರಿನಲ್ಲಿ ಅಪಹರಣವಾದರೆ, ರಾತ್ರಿ 8 ಗಂಟೆ ವೇಳೆಗಾಗಲೇ ಫೋಟೋ ಸಮೇತವಾಗಿ ಬಾಲಕನ ಅಪಹರಣದ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಲಾರಂಭಿಸಿತು. ಹಲವಾರು ಈ ಬಾಲಕನ ಬಗ್ಗೆ ಮಾಹಿತಿ ದೊರೆತ ತಕ್ಷಣವೇ ಪೊಲೀಸರಿಗೆ ತಿಳಿಸುವಂತೆ ಸಂದೇಶಗಳನ್ನು ಹರಿಬಿಟ್ಟಿದ್ದರು. ನಗರದ ಹಲವೆಡೆ ಯುವಕರು ರಸ್ತೆಗಳಲ್ಲಿ ನಿಂತು ಅನುಮಾನಾಸ್ಪದ ವಾಹನಗಳ ಸಂಚಾರದ ಬಗ್ಗೆ ನಿಗಾ ವಹಿಸಿದ್ದರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮಾಧ್ಯಮಗಳ ಸಾಮಾಜಿಕ ಜವಾಬ್ದಾರಿ: ಯಾವುದೇ ಕ್ರೈಂ ಸುದ್ದಿ ಸಿಕ್ಕಿದರೂ ಸ್ವಲ್ಪವೂ ತಡಮಾಡದೇ ಮಾಧ್ಯಮಗಳಲ್ಲಿ ಪ್ರಸಾರ ಮಾಡುವುದು ಸಹಜ. ಆದರೆ, ಬಾಲಕ ಅಪಹರಣವಾದ ಸುದ್ದಿಯನ್ನು ಪ್ರಸಾರ ಮಾಡಿದರೆ ಅಥವಾ ಮುದ್ರಿಸಿದರೆ ತಾವು ಅಪಹರಿಸಿ ರುವುದು ಬಯಲಾಗಿದೆ ಎಂಬ ಸಿಟ್ಟಿನಲ್ಲಿ ಅಪಹರಣಕಾರರು ಬಾಲಕನ ಜೀವಕ್ಕೆ ಅಪಾಯ ತಂದೊಡ್ಡಬಹುದು ಎಂಬ ಭಾವನೆಯಿಂದ ಸುದ್ದಿವಾಹಿನಿಗಳು, ಪತ್ರಿಕೆಗಳು ಅಪಹರಣ ಸುದ್ದಿಯನ್ನು ಪ್ರಸಾರ ಮಾಡದೇ ಸಾಮಾಜಿಕ ಜವಾಬ್ದಾರಿ ಪ್ರದರ್ಶಿಸಿವೆ. ಅದೇ ವೇಳೆ ನಗರ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ ಅವರು ಮಾಧ್ಯಮ ಪ್ರತಿನಿಧಿಗಳನ್ನು ಸಂಪರ್ಕಿಸಿ ಸುದ್ದಿ ಪ್ರಸಾರ ಮಾಡದಂತೆ ಕೋರಿಕೊಂಡಿದ್ದರು. ಇಂದು ಮುಂಜಾನೆ 2.14ರ ವೇಳೆಯಲ್ಲಿ ಬಾಲಕನನ್ನು ರಕ್ಷಿಸಲಾಗಿದೆ ಎಂಬ ಸಂದೇಶವನ್ನು ಮಾಧ್ಯಮ ಪ್ರತಿನಿಧಿಗಳ ಮೊಬೈಲ್‌ಗಳಿಗೆ ನಗರ ಪೊಲೀಸ್ ಆಯುಕ್ತ ಚಂದ್ರಗುಪ್ತ ಅವರೇ ರವಾನಿಸಿದರು.

ವದಂತಿ: ಈ ಬಗ್ಗೆ ಬಾಲಕನ ಬಿಡುಗಡೆಗೆ ಅಪಹರಣಕಾರರಿಗೆ ಭಾರೀ ಹಣ ನೀಡಲಾಗಿದೆ ಎಂಬ ವದಂತಿಯೂ ವ್ಯಾಪಕವಾಗಿ ಹರಡಿದೆ. ಆದರೆ ಈ ಬಗ್ಗೆ ಬಾಲಕನ ಪೋಷಕರಾಗಲೀ, ಪೊಲೀಸರಾಗಲೀ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಎತ್ತಾಕಿಕೊಂಡು ಹೋಗಿ ಕೊಲ್ತೇವೆ...

ನನ್ನನ್ನು ಕಾರಿನೊಳಗೆ ಎಳೆದು ಹಾಕಿಕೊಂಡು ಬಿಟ್ಟರು. ಕಾರಿನ ಒಳಗೆ ಮುಂಭಾಗದಲ್ಲಿ ಶೂಟಿಂಗ್ ಟಾರ್ಗೆಟ್ ಸ್ಟಿಕ್ಕರ್ ಇತ್ತು ಹಿಂಭಾಗ ನೋಡಲು ಅವರು ನನಗೆ ಅವಕಾಶ ನೀಡಲಿಲ್ಲ. ಅಪಹರಣ ಮಾಡಿದ ತಕ್ಷಣ ಲಿಂಗಾಬುದಿ ಕೆರೆ ರಸ್ತೆ ಮೂಲಕ ರಿಂಗ್ ರಸ್ತೆ ತಲುಪಿದರು. ರಿಂಗ್ ರಸ್ತೆಯ ಒಂದು ಸರ್ಕಲ್‌ನಲ್ಲಿ ನಾಲ್ಕೈದು ಸುತ್ತು ಹಾಕಿದ ನಂತರ ಹಳ್ಳಿ ಕಡೆ ಕಾರನ್ನು ಚಾಲನೆ ಮಾಡಿ ಯಾವುದೋ ಒಂದು ಜಮೀನಿಗೆ ಹೋಗಿ ನಿಂತರು ಎಂದು ಬಾಲಕ ವಿವರಿಸಿದ. ಕಾರಿನಿಂದ ಒಮ್ಮೆ ಮಾತ್ರ ನಾನು ಇಳಿದಿದ್ದೆ. ಆಗ ಕುಂಟುತ್ತಿದ್ದ ವ್ಯಕ್ತಿ ಹಾಗೂ ತನ್ನನ್ನು ಕಾರಿಗೆ ಎಳೆದುಕೊಂಡಾತ ಮಾತ್ರ ಇದ್ದರು. ಪಕ್ಕದಲ್ಲೇ ಬೀಡಿ ಸಿಗರೇಟ್ ಅಂಗಡಿ ಇದೆ ಎಂದು ಹೇಳುತ್ತಿದ್ದ ಅವರು ಸುಮಾರು 5 ನಿಮಿಷದಲ್ಲಿ ಬೀಡಿ ತೆಗೆದುಕೊಂಡು ಬಂದರು. ಆ ಸಂದರ್ಭದಲ್ಲಿ ವ್ಯಕ್ತಿಯೋರ್ವ ಅವರಲ್ಲಿಗೆ ಬಂದು ಮಾತನಾಡಿದ್ದ. ನಿದ್ದೆಯ ಮಂಪರಿನಲ್ಲಿದ್ದ ಕಾರಣ ಆತನ ಮುಖ ಸರಿಯಾಗಿ ನೋಡಲು ಸಾಧ್ಯವಾಗಲಿಲ್ಲ. ಇನ್ನು 5 ಕಿಮೀ ಮಾತ್ರ ಹೋಗಲು ಪೆಟ್ರೋಲ್ ಇದೆ ಎಂದು ಮಾತನಾಡಿಕೊಳ್ಳುತ್ತಿದ್ದರು. ನನ್ನನ್ನು ಇಳಿಸಿದ ನಂತರ ಅವರು ಪೆಟ್ರೋಲ್ ಹಾಕಿಸಿರುವುದು ಅನ್ನಿಸುತ್ತದೆ ಎಂದು ಆತ ಹೇಳಿದ. ಮೈಸೂರು ನಗರ ಹಾಗೂ ಹೊರವಲಯದ ಸುಮಾರು 20 ಕಿಮೀ ವ್ಯಾಪ್ತಿಯಲ್ಲಿ ನಾವು ಇದ್ದೆವು. ಬಹಳ ದೂರವೇನೂ ಹೋಗಿರಲಿಲ್ಲ ಎಂದು ಬಾಲಕ ಸುದ್ದಿಗಾರರಿಗೆ ತಿಳಿಸಿದ್ದಾನೆ.

ಪೊಲೀಸರಿಗೆ ಮಹತ್ವದ ಸುಳಿವು

ರಸ್ತೆಗಳಲ್ಲಿನ ಸಿಸಿ ಕ್ಯಾಮರಾ ಫುಟೇಜ್‌ಗಳನ್ನು ಪರಿಶೀಲಿಸುತ್ತಿದ್ದಾರೆ. ಅಪಹರಣ ನಡೆದ ಸ್ಥಳ ಸಮೀಪದಲ್ಲಿ ಮನೆಯೊಂದಕ್ಕೆ ಅಳವಡಿಸಿರುವ ಸಿಸಿ ಕ್ಯಾಮರಾ ಫುಟೇಜ್ ಅನ್ನು ಪೊಲೀಸರು ಪರಿಶೀಲಿಸಿದ್ದಾರೆ.

ಬಾಲಕನಿಂದ ಮಾಹಿತಿ ಸಂಗ್ರಹ: ಅಪಹೃತ ಬಾಲಕನನ್ನು ಸಮವಸ್ತ್ರ ಧರಿಸಿದ ಪೊಲೀಸರು ವಿಚಾರಣೆ ನಡೆಸಬಾರದು ಎಂಬ ಸುಪ್ರೀಂಕೋರ್ಟ್ ಆದೇಶದ ಹಿನ್ನೆಲೆಯಲ್ಲಿ ಇಂದು ಬಾಲಕನ ಮನೆಗೆ ಮಫ್ತಿಯಲ್ಲಿ ತೆರಳಿದ ಪೊಲೀಸರು, ಆತನೊಂದಿಗೆ ಅನೌಪಚಾರಿಕವಾಗಿ ಮಾತನಾಡುತ್ತಾ ತಮಗೆ ಬೇಕಾದ ಮಾಹಿತಿ ಸಂಗ್ರಹಿಸಿದರು. ಬಳಿಕ ಆತನ ಪೋಷಕರೊಂದಿಗೂ ಮಾಹಿತಿ ಸಂಗ್ರಹಿಸಿದ್ದು, ಪೊಲೀಸರಿಗೆ ಮಹತ್ವದ ಸುಳಿವು ದೊರೆತಿದೆ ಎನ್ನಲಾಗಿದ್ದು, ನಾಳೆ (ಶನಿವಾರ) ಈ ಪ್ರಕರಣ ಸಂಬಂಧ ನಗರ ಪೊಲೀಸ್ ಆಯುಕ್ತ ಚಂದ್ರಗುಪ್ತ ಸುದ್ದಿಗೋಷ್ಠಿ ನಡೆಸಿ, ವಿವರ ನೀಡಲಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಕಾಂಗ್ರೆಸ್ ಚಿತ್ತ

ಅಂತಹ ಕ್ಷೇತ್ರಗಳಲ್ಲಿ ಯಾವ ರೀತಿ ಜನಪರ ಹೋರಾಟ ನಡೆಸಬೇಕು, ಮತದಾರರನ್ನು ಮನವೊಲಿಸಲು ಏನು ಮಾಡಬೇಕು, ಪಕ್ಷದ ವರ್ಚಸ್ಸು ಹೆಚ್ಚಿಸಲು ಯಾವ ಕಾರ್ಯಕ್ರಮ ರೂಪಿಸಬೇಕು ಎಂಬ ಮಾಹಿತಿಯನ್ನು ನೀಡುತ್ತಿದ್ದಾರೆ. ಶಿವಕುಮಾರ್ ನಡೆಸುತ್ತಿರುವ ಸಮೀಕ್ಷೆಗೂ ವಿಧಾನಸಭೆಯ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಅವರಿಗೂ ಸಂಬಂಧವಿಲ್ಲ. ಅಧ್ಯಕ್ಷರು ಸ್ವತಂತ್ರವಾಗಿ ಈ ಸಮೀಕ್ಷೆ ನಡೆಸುತ್ತಿದ್ದಾರೆ. ಬಿಜೆಪಿ ಸರ್ಕಾರದ ವಿರುದ್ಧ ರಾಜ್ಯ ಮಟ್ಟದಲ್ಲಿ ಯಾವ ರೀತಿ ಹೋರಾಟ ಮಾಡಬೇಕೆಂಬುದರ ಬಗ್ಗೆಯೂ ಸಮಿತಿ ಸದಸ್ಯರು ನೀಡುವ ಸಲಹೆಯಂತೆ ಶಿವಕುಮಾರ್ ಸಂಘಟನೆ ಮತ್ತು ಹೋರಾಟ ನಡೆಸುತ್ತಿದ್ದಾರೆ.

ಬರಿಗೈಲಿ ಬಂದ ಸಿಎಂ ಬೊಮ್ಮಾಯಿ

ಮಹಾರಾಷ್ಟ್ರ ವಿದ್ಯಮಾನಗಳ ಬಗ್ಗೆಯೂ ಬ್ಯುಸಿ ಇರುವ ಕಾರಣ ಯಾರನ್ನೂ ಭೇಟಿ ಮಾಡಲಿಲ್ಲ ಎಂದು ತಿಳಿಸಿ ಬಂದಿದೆ. 'ನಾನು ಪ್ರತಿ ಬಾರಿ ದೆಹಲಿಗೆ ಭೇಟಿ ನೀಡುವ ಸಂದರ್ಭದಲ್ಲಿ ಈ ರೀತಿ ಮಾಧ್ಯಮ ಗಳಲ್ಲಿ ಸುದ್ದಿ ಬಂದಿರುತ್ತದೆ. ಸಚಿವ ಸಂಪುಟ ವಿಸ್ತರಣೆ ಬಗ್ಗೆ ನನಗಿಂತ ಅಧಿಕೃತವಾಗಿ ಹೇಳುವವರೇ ಏನೂ ಇರುವುದಿಲ್ಲ. ಪಕ್ಷದ ವರಿಷ್ಠರನ್ನು ಭೇಟಿಯಾಗಿಲ್ಲ' ಎಂದರು. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆಪಿ ನಡ್ಡಾ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರು ಇತ್ತೀಚೆಗೆ ರಾಜ್ಯಕ್ಕೆ ಭೇಟಿ ನೀಡಿದ್ದರು. ಪಕ್ಷ ಹೈಕಮಾಂಡ್ ರಾಷ್ಟ್ರಪತಿ ಚುನಾವಣೆಯಲ್ಲಿ ನಿರತವಾಗಿರುವುದರಿಂದ ಸಂಪುಟ ವಿಸ್ತರಣೆ ಬಗ್ಗೆ ಚರ್ಚಿಸಲು ಇದು ಒಂದು ಸಂದರ್ಭವಲ್ಲ ಎಂದು ಹೇಳಿದ್ದಾರೆ ಎಂದರು.

ತ್ರಿಚಕ್ರ ಸ್ಕೂಟರ್ ಡಿಕ್ಕಿ: ಇಬ್ಬರ ಸಾವು

ನಡೆಯುತ್ತಿದ್ದ ಪೂಜೆಯಲ್ಲಿ ಪಾಲ್ಗೊಂಡು, ಹಿಂತಿರುಗುತ್ತಿದ್ದಾಗ, ಶಾಂತಿನಗರದ ಹತ್ತಿರ ನಿಯಂತ್ರಣ ತಪ್ಪಿದ ವಾಹನ ರಸ್ತೆ ಬದಿಯ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದಿದೆ. ಇದರಿಂದ ನಾಗಮ್ಮ ಸ್ಥಳದಲ್ಲೇ ಸಾವನ್ನಪ್ಪಿದರೆ, ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯೆ ವಿಜಯರಂಗ ಪ್ರಾಣಬಿಟ್ಟರು ಎಂದು ಪೊಲೀಸರು ತಿಳಿಸಿದ್ದಾರೆ. ವಿಷಯ ತಿಳಿದ ಕಲ್ಲಹಳ್ಳಿ ಹಾಡಿಯಲ್ಲಿ ಮೃತರ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿತು. ಗ್ರಾಮದಲ್ಲಿ ನೀರವ ಮೌನ ಆವರಿಸಿದೆ. ನಾಗಮ್ಮ ಅವರ ಸಂಬಂಧಿ ಮಧ್ಯ ಎಂಬುವರು ಈ ಸಂಬಂಧ ಸರಗೂರು ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ವಿಷಯ ತಿಳಿದ ಸರಗೂರು ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಶ್ರೀನಿವಾಸ್ ರೆಡ್ಡಿ ಅವರು ತಮ್ಮ ಸಿಬ್ಬಂದಿಯೊಂದಿಗೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಸರಗೂರು ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಮುಡಾದಿಂದ 377.60 ಕೋಟಿ ವೆಚ್ಚದ ಕಾಮಗಾರಿಗಳಿಗೆ ಚಾಲನೆ

● ಒನ್ ಟೈಂ ಡೆವಲಪ್‌ಮೆಂಟ್‌ಗೆ ಸರ್ಕಾರದ ಅನುಮೋದನೆ
● ವಿಜಯನಗರ 1,2,3,4ನೇ ಹಂತದಲ್ಲಿ ಅಧಿಕ ಅಭಿವೃದ್ಧಿ ಕಾರ್ಯ



ಮೋಹನ್ ಕಾಯಕ

ಮೈಸೂರು, ಜೂ.24– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ವತಿಯಿಂದ 377.60 ಕೋಟಿ ರೂ. ವೆಚ್ಚದಲ್ಲಿ 107 ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ.

ಒನ್ ಟೈಂ ಡೆವಲಪ್‌ಮೆಂಟ್ ಯೋಜನೆಯಡಿ ಅಭಿವೃದ್ಧಿಗೆ ಅನುಮೋದನೆ ನೀಡುವಂತೆ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿತ್ತು. ಇದಕ್ಕೆ ಸ್ಪಂದಿಸಿರುವ ರಾಜ್ಯ ಸರ್ಕಾರ 377.60 ಕೋಟಿ ರೂ.ವೆಚ್ಚದಲ್ಲಿ ಕಾಮಗಾರಿಗಳನ್ನು ನಡೆಸಲು ಅನುಮೋದನೆ ನೀಡಿದೆ. ಅದರಂತೆ ಮುಡಾ ವತಿಯಿಂದ ಅಭಿವೃದ್ಧಿಪಡಿಸಿರುವ ಬಡಾವಣೆಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು 56 ಕಾಮಗಾರಿಗಳು, ತಾನೇ ಅಭಿವೃದ್ಧಿಪಡಿಸಿ ನಗರ ಪಾಲಿಕೆಗೆ ಹಸ್ತಾಂತರಿಸುವ ಸಂದರ್ಭದಲ್ಲಿ ಬಾಕಿ ಉಳಿದಿದ್ದ 35 ಕಾಮಗಾರಿಗಳು ಹಾಗೂ ಗ್ರಾಮ ವ್ಯಾಪ್ತಿಯಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ಪ್ರಮುಖ 16 ಕಾಮಗಾರಿಗಳು ಸೇರಿದಂತೆ 107 ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ.

ವಿಜಯನಗರಕ್ಕೆ ಬಹುಪಾಲು: ವಿಜಯನಗರ 1,2,3 ಮತ್ತು 4ನೇ ಹಂತಗಳಲ್ಲಿನ ರಸ್ತೆ, ಒಳಚರಂಡಿ, ಮಳೆ ನೀರು ಚರಂಡಿ, ಬೀದಿ ದೀಪಗಳನ್ನು ಅಳವಡಿಸುವ ಕಾಮಗಾರಿಗಳಿಗೆ ಹೆಚ್ಚಿನ ಅನುದಾನ ನೀಡಲಾಗಿದೆ. ಅಲ್ಲದೆ ದಟ್ಟಗಳ್ಳಿ, ನಾಚನಹಳ್ಳಿ–ಕುಪ್ಪಲೂರು, ವಸಂತನಗರ, ದೇವನೂರು, ಹಂಚ್ಯಾ–ಸಾತಗಳ್ಳಿ, ಲಾಲ್ ಬಹದ್ದೂರ್‌ಶಾಸ್ತ್ರಿ ನಗರ, ಶಾಂತವೇರಿ ಗೋಪಾಲಗೌಡ ನಗರ, ಲಲಿತಾದ್ರಿನಗರ, ಆರ್.ಟಿ.ನಗರ ಸೇರಿದಂತೆ ಮುಡಾದಿಂದ ಅಭಿವೃದ್ಧಿಯಾಗಿರುವ ಬಡಾವಣೆಗಳಿಗೆ ಮೂಲ ಸೌಕರ್ಯ ಕಲ್ಪಿಸಲು ಹಲವು ಕಾಮಗಾರಿಗಳನ್ನು ರೂಪಿಸಲಾಗಿದೆ. ಹಂತ ಹಂತವಾಗಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಪ್ಯಾಕೇಜ್ ಮಾದರಿಯಲ್ಲಿ ಕಾಮಗಾರಿ ವೆಚ್ಚಗಳನ್ನು ವಿಂಗಡಣೆ ಮಾಡಲಾಗಿದೆ.

ಮುಡಾ ಬಡಾವಣೆಗಳ 56 ಕಾಮಗಾರಿ: ನಾಚನಹಳ್ಳಿ ಕುಪ್ಪಲೂರು 3ನೇ ಹಂತದ ಬಡಾವಣೆಯ ರಸ್ತೆ ಅಭಿವೃದ್ಧಿಗೆ 2.50 ಕೋಟಿ ರೂ., ವಿಜಯನಗರ 3ನೇ ಹಂತದಲ್ಲಿ 24 ಮೀಟರ್ ಅಗಲದ ರಸ್ತೆ ಅಭಿವೃದ್ಧಿಗೆ 10 ಕೋಟಿ ರೂ.(ಪ್ಯಾಕೇಜ್ 6–7ರಲ್ಲಿ ತಲಾ 5 ಕೋಟಿ ರೂ.), ವಿಜಯನಗರ 3ನೇ ಹಂತದ ವಿವಿಧ ಬ್ಲಾಕ್‌ಗಳಲ್ಲಿನ ರಸ್ತೆ, ಚರಂಡಿ, ಅಡ್ಡ ಮೋರಿ, ಆಯ್ದ ಮಳೆ ನೀರು ಚರಂಡಿ ಅಭಿವೃದ್ಧಿಗೆ 14.75 ಕೋಟಿ ರೂ. (ಪ್ಯಾಕೇಜ್ 9ರಲ್ಲಿ 2 ಕೋಟಿ ರೂ. ಹಾಗೂ ಪ್ಯಾಕೇಜ್ 8ರಲ್ಲಿ 5 ಕೋಟಿ ರೂ. ಪ್ಯಾಕೇಜ್ 10ರಲ್ಲಿ 3.75 ಕೋಟಿ ರೂ. ಹಾಗೂ ಪ್ಯಾಕೇಜ್ 11 ರಲ್ಲಿ 4 ಕೋಟಿ ರೂ.), ವಿಜಯನಗರ 4ನೇ ಹಂತದ ವಿವಿಧ ಘಟ್ಟಗಳಲ್ಲಿನ ಆಯ್ದ ಭಾಗಗಳಲ್ಲಿ ಮಳೆ ನೀರು ಚರಂಡಿ ನಿರ್ಮಾಣ, ನಿವೇಶನಗಳ ರಸ್ತೆ, ಚರಂಡಿ ಹಾಗೂ ಅಡ್ಡ ಮೋರಿ ನಿರ್ಮಾಣಕ್ಕೆ 7 ಕೋಟಿ ರೂ.(ಪ್ಯಾಕೇಜ್ 12ರಲ್ಲಿ 4 ಕೋಟಿ ರೂ. ಹಾಗೂ ಪ್ಯಾಕೇಜ್ 13ರಲ್ಲಿ 3 ಕೋಟಿ ರೂ.) ನಿಗದಿಯಾಗಿದೆ.

ವಿಜಯನಗರ 4ನೇ ಹಂತದ 2ನೇ ಘಟ್ಟದಲ್ಲಿ 24 ಮೀಟರ್ ರಸ್ತೆ ನಿರ್ಮಾಣ, 18 ಮೀಟರ್ ರಸ್ತೆ ನಿರ್ಮಾಣ, ಮರು ಡಾಂಬರೀಕರಣ, ಚರಂಡಿ ಹಾಗೂ ಅಡ್ಡ ಮೋರಿ ನಿರ್ಮಾಣಕ್ಕೆ 34 ಕೋಟಿ ರೂ.(ಪ್ಯಾಕೇಜ್ 14ರಲ್ಲಿ 5 ಕೋಟಿ ರೂ., ಪ್ಯಾಕೇಜ್ 15ರಲ್ಲಿ 4 ಕೋಟಿ ರೂ., ಪ್ಯಾಕೇಜ್ 16 ರಲ್ಲಿ 5 ಕೋಟಿ ರೂ., ಪ್ಯಾಕೇಜ್ 17ರಲ್ಲಿ 5 ಕೋಟಿ ರೂ., ಪ್ಯಾಕೇಜ್ 18ರಲ್ಲಿ 5 ಕೋಟಿ ರೂ., ಪ್ಯಾಕೇಜ್ 19ರಲ್ಲಿ 5 ಕೋಟಿ ರೂ. ಹಾಗೂ ಪ್ಯಾಕೇಜ್ 20ರಲ್ಲಿ 5 ಕೋಟಿ ರೂ.) 3ನೇ ಘಟ್ಟದ ನಿವೇಶನಗಳ ರಸ್ತೆ, ಮರು ಡಾಂಬರೀಕರಣ, ಚರಂಡಿ ಹಾಗೂ ಅಡ್ಡ ರಸ್ತೆ ನಿರ್ಮಾಣಕ್ಕೆ ಪ್ಯಾಕೇಜ್ 22ರಲ್ಲಿ 4 ಕೋಟಿ ರೂ. ಹಾಗೂ 1ನೇ ಘಟ್ಟದ ನಿವಾಸ ಸಂಖ್ಯೆ–1091 ರಿಂದ 1407ರ ಮುಂಭಾಗದಲ್ಲಿರುವ 24 ಮೀಟರ್ ಅಗಲದ ರಸ್ತೆ ಅಭಿವೃದ್ಧಿ ಮತ್ತು 2ನೇ ಘಟ್ಟದ ಬಸವನಹಳ್ಳಿ ಮುಖ್ಯ ರಸ್ತೆಯ ತೇಜು ಕಾರ್ನರ್‌ನಿಂದ ಬಸವನಹಳ್ಳಿ ವರೆಗಿನ ರಸ್ತೆಯನ್ನು 'ದ್ವಿಪಥ' ರಸ್ತೆಯನ್ನಾಗಿ ಪರಿವರ್ತನೆ ಮಾಡಿ ಅಭಿವೃದ್ಧಿಪಡಿಸುವುದಕ್ಕೆ 4 ಕೋಟಿ ರೂ. ನೀಡಲಾಗಿದೆ.

ದೇವನೂರು 3ನೇ ಹಂತದ ವಿವಿಧ ನಿವೇಶನಗಳ ರಸ್ತೆ ಮರು ಡಾಂಬರೀಕರಣ, ನಿವೇಶನ ಸಂಖ್ಯೆ 2273 ರಿಂದ 3797ರವರೆಗಿನ ರಸ್ತೆ ಅಭಿವೃದ್ಧಿ ಹಾಗೂ ಹಂಚ್ಯಾ ಸಾತಗಳ್ಳಿ 'ಎ' ವಲಯದಲ್ಲಿನ ಅಡ್ಡ ರಸ್ತೆಗಳ ಅಭಿವೃದ್ಧಿಗೆ 12.95 ಕೋಟಿ ರೂ.(ಪ್ಯಾಕೇಜ್ 26ರಲ್ಲಿ 4.95 ಕೋಟಿ ರೂ., ಪ್ಯಾಕೇಜ್ 4.75 ಕೋಟಿ ರೂ., ಪ್ಯಾಕೇಜ್ 28ರಲ್ಲಿ 3.25 ಕೋಟಿ ರೂ.) ನಿಗದಿಯಾಗಿದ್ದರೆ, ಲಾಲ್ ಬಹದ್ದೂರ್ ಶಾಸ್ತ್ರಿ ನಗರ ಬಡಾವಣೆ ಅಭಿವೃದ್ಧಿಗೆ 7 ಕೋಟಿ ರೂ.(ಪ್ಯಾಕೇಜ್ 30ರಲ್ಲಿ 3.50 ಕೋಟಿ ರೂ. ಹಾಗೂ ಪ್ಯಾಕೇಜ್ 31ರಲ್ಲಿ 3.50 ಕೋಟಿ ರೂ.) ನೀಡಲಾಗಿದೆ. ಪಕ್ಕದ ಶಾಂತವೇರಿ ಗೋಪಾಲಗೌಡ ನಗರ ಬಡಾವಣೆ ಅಭಿವೃದ್ಧಿಗೆ ಪ್ಯಾಕೇಜ್ 32ರಲ್ಲಿ 3 ಕೋಟಿ ರೂ. ಮೀಸಲಿಡಲಾಗಿದೆ. ಲಲಿತಾದ್ರಿನಗರ ದಕ್ಷಿಣ ಬಡಾವಣೆ ಹಾಗೂ ಲಲಿತಾದ್ರಿಪುರ ಗ್ರಾಮ, ಚೋರನಹಳ್ಳಿ, ಮೂಕನಹುಂಡಿ ಹಾಗೂ ಹಡಜನ ಗ್ರಾಮಗಳಲ್ಲಿ ಮೂಲಭೂತ ಸೌಕರ್ಯ ಕಾಮಗಾರಿಗಾಗಿ 15.50 ಕೋಟಿ ರೂ.(ಪ್ಯಾಕೇಜ್ 33ರಲ್ಲಿ 3.50 ಕೋಟಿ ರೂ., ಪ್ಯಾಕೇಜ್ 34ರಲ್ಲಿ 3.50 ಕೋಟಿ ರೂ., ಪ್ಯಾಕೇಜ್ 35ರಲ್ಲಿ 4 ಕೋಟಿ ರೂ. ಹಾಗೂ ಪ್ಯಾಕೇಜ್ 37ರಲ್ಲಿ 4.50 ಕೋಟಿ ರೂ.) ನಿಗದಿಪಡಿಸಲಾಗಿದೆ.

ಬನ್ನೂರು ಮುಖ್ಯ ರಸ್ತೆಯ ಸಮೀಪದಲ್ಲಿರುವ ವಸಂತನಗರ ಬಡಾವಣೆಯ ಪ್ರಮುಖ ಹಾಗೂ ಅಡ್ಡ ರಸ್ತೆಗಳ ಅಭಿವೃದ್ಧಿಗೆ 9.59 ಕೋಟಿ ರೂ.(ಪ್ಯಾಕೇಜ್ 40ರಲ್ಲಿ 4.95 ಕೋಟಿ ರೂ. ಹಾಗೂ ಪ್ಯಾಕೇಜ್ 41ರಲ್ಲಿ 4.64 ಕೋಟಿ ರೂ.) ನೀಡಿದ್ದು, ಹಂಚ್ಯಾ ಸಾತಗಳ್ಳಿ 'ಬಿ'ವಲಯ ಬಡಾವಣೆ ಅಭಿವೃದ್ಧಿ ಹಾಗೂ ಹೊರ ವರ್ತುಲ ರಸ್ತೆಯಿಂದ 24 ಮೀಟರ್ ರಸ್ತೆವರೆಗೆ ಚರಂಡಿ ನಿರ್ಮಾಣಕ್ಕೆ 8.97 ಕೋಟಿ ರೂ.(ಪ್ಯಾಕೇಜ್ 43ರಲ್ಲಿ 4.62 ಕೋಟಿ ರೂ ಹಾಗೂ ಪ್ಯಾಕೇಜ್ 44ರಲ್ಲಿ 4.35 ಕೋಟಿ ರೂ.) ನೀಡಲಾಗಿದೆ. ವಿಜಯನಗರ 4ನೇ ಹಂತದ 1,2 ಮತ್ತು 3ನೇ ಘಟ್ಟದ ವಿದ್ಯುತ್ ಕಂಬಗಳು, ವಿದ್ಯುತ್ ಪರಿವರ್ತಕಗಳು, ವಿದ್ಯುತ್ ವಾಹಕ, ಬೀದಿ ದೀಪಗಳು, ಮೋಟಾರ್ ಪಂಪುಗಳು ಹಾಗೂ ಉದ್ಯಾನವನಗಳಿಗೆ ಬೀದಿ ದೀಪಗಳನ್ನು ಅಳವಡಿಸಲು ಪ್ಯಾಕೇಜ್ 47ರಲ್ಲಿ 4.60 ಕೋಟಿ ರೂ. ನಿಗದಿಯಾಗಿದೆ.

ಪ್ರಾಧಿಕಾರದ ವಿವಿಧ ಬಡಾವಣೆಗಳಲ್ಲಿ ವಿದ್ಯುತ್ ಸಂಪರ್ಕಕ್ಕೆ ಪ್ಯಾಕೇಜ್ 48ರಲ್ಲಿ 4.40 ಕೋಟಿ ರೂ., ಹೊರವರ್ತುಲ ರಸ್ತೆ ಬೀದಿ ದೀಪಗಳನ್ನು ಅಳವಡಿಸುವುದಕ್ಕೆ ಪ್ಯಾಕೇಜ್ 48ರಲ್ಲಿ 50 ಲಕ್ಷ ರೂ., ನಾಚನಹಳ್ಳಿ–ಕುಪ್ಪಲೂರು 3ನೇ ಹಂತ 'ಎ' ವಲಯ ಬಡಾವಣೆಯ ಬಾಕಿ ಯುಜಿಸಿ ಅಭಿವೃದ್ಧಿಗೆ ಪ್ಯಾಕೇಜ್ 50ರಲ್ಲಿ 1.99 ಕೋಟಿ ರೂ., ವಿಜಯನಗರ 3ನೇ ಹಂತದ ಒಳಚರಂಡಿ ಕೊಳವೆ ಮಾರ್ಗ ಹಾಗೂ ಮ್ಯಾನ್‌ಹೋಲ್ ನಿರ್ಮಾಣ ಕಾಮಗಾರಿಗೆ ಪ್ಯಾಕೇಜ್ 54ರಲ್ಲಿ 2 ಕೋಟಿ ರೂ., 4ನೇ ಹಂತ 1ನೇ ಘಟ್ಟದ ನಿ.ಸಂ.1ರಿಂದ 1450 ರವರೆಗೆ ಒಳಚರಂಡಿ ನಿರ್ಮಾಣಕ್ಕೆ ಪ್ಯಾಕೇಜ್ 55ರಲ್ಲಿ 1 ಕೋಟಿ ರೂ., 2ನೇ ಘಟ್ಟದ ನಿ.ಸಂ.1ರಿಂದ 6000 ವರೆಗೆ ಒಳಚರಂಡಿ ನಿರ್ಮಾಣಕ್ಕೆ ಪ್ಯಾಕೇಜ್ 56ರಲ್ಲಿ 4.50 ಕೋಟಿ ರೂ. ಹಾಗೂ ನಿ.ಸಂ.6001 ರಿಂದ 12522 ರವರೆಗೆ ಒಳಚರಂಡಿ ನಿರ್ಮಾಣ ಕಾಮಗಾರಿಗೆ ಪ್ಯಾಕೇಜ್ 57ರಲ್ಲಿ 4 ಕೋಟಿ ರೂ.ನೀಡಲಾಗಿದೆ. ಹಾಗೂ ಮ್ಯಾನ್‌ಹೋಲ್ ನಿರ್ಮಾಣ ಕಾಮಗಾರಿಗೆ ಪ್ಯಾಕೇಜ್ 54ರಲ್ಲಿ 2 ಕೋಟಿ ರೂ., 4ನೇ ಹಂತ 1ನೇ ಘಟ್ಟದ ನಿ.ಸಂ.1ರಿಂದ 1450 ರವರೆಗೆ ಒಳಚರಂಡಿ ನಿರ್ಮಾಣಕ್ಕೆ ಪ್ಯಾಕೇಜ್ 55ರಲ್ಲಿ 1 ಕೋಟಿ ರೂ., 2ನೇ ಘಟ್ಟದ ನಿ.ಸಂ.1ರಿಂದ 6000 ವರೆಗೆ ಒಳಚರಂಡಿ ನಿರ್ಮಾಣಕ್ಕೆ ಪ್ಯಾಕೇಜ್ 56ರಲ್ಲಿ 4.50 ಕೋಟಿ ರೂ. ಹಾಗೂ ನಿ.ಸಂ.6001 ರಿಂದ 12522 ರವರೆಗೆ ಒಳಚರಂಡಿ ನಿರ್ಮಾಣ ಕಾಮಗಾರಿಗೆ ಪ್ಯಾಕೇಜ್ 57ರಲ್ಲಿ 4 ಕೋಟಿ ರೂ.ನೀಡಲಾಗಿದೆ.

ದೇವನೂರು 3ನೇ ಹಂತದ ಒಳಚರಂಡಿ ದುರಸ್ತಿಗೆ ಪ್ಯಾಕೇಜ್ 58ರಲ್ಲಿ 1.81 ಕೋಟಿ ರೂ., ಲಾಲ್‌ಬಹದ್ದೂರ್ ಶಾಸ್ತ್ರಿ ನಗರ, ಶಾಂತವೇರಿ ಗೋಪಾಲ ಗೌಡ ನಗರ, ಲಲಿತಾದ್ರಿನಗರ ಉತ್ತರ ಮತ್ತು ದಕ್ಷಿಣ ಬಡಾವಣೆಯ ಒಳಚರಂಡಿ ಹಾಗೂ ಸೆಪ್ಟಿಕ್ ಟ್ಯಾಂಕ್ ದುರಸ್ತಿ ಕಾಮಗಾರಿಗೆ ಪ್ಯಾಕೇಜ್ 59ರಲ್ಲಿ 2.50 ಕೋಟಿ ರೂ. ನೀಡಲಾಗಿದೆ. ವಸಂತ ನಗರ, ಸಾತಗಳ್ಳಿ 2ನೇ ಹಂತ ಮತ್ತು ಹಂಚ್ಯಾ ಸಾತಗಳ್ಳಿ 'ಬಿ'ವಲಯದ ಒಳಚರಂಡಿ ಅಭಿವೃದ್ಧಿಗೆ ಪ್ಯಾಕೇಜ್ 60ರಲ್ಲಿ 4 ಕೋಟಿ ರೂ., ನಾಚನಹಳ್ಳಿ–ಕುಪ್ಪಲೂರು 3ನೇ ಹಂತದ 'ಎ' ವಲಯದಲ್ಲಿ ಕುಡಿಯುವ ನೀರು ಸರಬರಾಜು ವ್ಯವಸ್ಥೆಗೆ ಪ್ಯಾಕೇಜ್ 61ರಲ್ಲಿ 1 ಕೋಟಿ ರೂ., ವಿಜಯನಗರ 3ನೇ ಹಂತದಲ್ಲಿ ನೀರು ಸರಬರಾಜಿಗೆ ಪೈಪ್‌ಲೈನ್ ಅಳವಡಿಸಲು ಪ್ಯಾಕೇಜ್ 62ರಲ್ಲಿ 1.50 ಕೋಟಿ ರೂ., 1ನೇ ಘಟ್ಟದ ನಿ.ಸಂ.1ರಿಂದ 1450 ರವರೆಗೆ ಪೈಪ್‌ಲೈನ್ ಅಳವಡಿಸಲು ಪ್ಯಾಕೇಜ್ 63ರಲ್ಲಿ 75 ಲಕ್ಷ ರೂ., 2ನೇ ಘಟ್ಟದ ನಿ.ಸಂ.1ರಿಂದ 8000 ರವರೆಗೆ ಪೈಪ್‌ಲೈನ್ ಅಳವಡಿಸಲು ಪ್ಯಾಕೇಜ್ 64ರಲ್ಲಿ 4 ಕೋಟಿ ರೂ., 1,2 ಮತ್ತು 3ನೇ ಘಟ್ಟದಲ್ಲಿ ನೀರು ಸರಬರಾಜಿಗೆ ಪೈಪ್‌ಲೈನ್ ಅಳವಡಿಸಲು ಪ್ಯಾಕೇಜ್ 65ರಲ್ಲಿ 3.50 ಕೋಟಿ ರೂ. ಹಣ ಬಿಡುಗಡೆ ಮಾಡಲಾಗಿದೆ.

ದೇವನೂರು 3ನೇ ಹಂತದ ಬಡಾವಣೆಯಲ್ಲಿ ನೀರು ಸರಬರಾಜಿಗೆ ಪ್ಯಾಕೇಜ್ 66ರಲ್ಲಿ 1.27 ಕೋಟಿ ರೂ., ಲಾಲ್ ಬಹದ್ದೂರ್ ಶಾಸ್ತ್ರಿನಗರದಲ್ಲಿ ಪ್ಯಾಕೇಜ್ 67ರಲ್ಲಿ 2.60 ಕೋಟಿ ರೂ., ಲಲಿತಾದ್ರಿ ನಗರ ದಕ್ಷಿಣ ಬಡಾವಣೆಯಲ್ಲಿ ನೀರು ಸರಬರಾಜಿಗೆ 6 ಕೋಟಿ ರೂ.(ಪ್ಯಾಕೇಜ್ 68ರಲ್ಲಿ 3.50 ಕೋಟಿ ರೂ. ಹಾಗೂ ಪ್ಯಾಕೇಜ್ 69ರಲ್ಲಿ 2.50 ಕೋಟಿ ರೂ.), ಹಂಚ್ಯಾ ಸಾತಗಳ್ಳಿ 'ಬಿ' ವಲಯ, ಸಾತಗಳ್ಳಿ 2ನೇ ಹಂತ ಹಾಗೂ ವಸಂತನಗರ ಬಡಾವಣೆಯಲ್ಲಿ ನೀರು ಸರಬರಾಜಿಗೆ ಪ್ಯಾಕೇಜ್ 70ರಲ್ಲಿ 75 ಲಕ್ಷ ರೂ., ವಿಜಯನಗರ 4ನೇ ಹಂತ 2ನೇ ಘಟ್ಟದಲ್ಲಿ ಶಾರ್ಟ್ ಬೇಸ್‌ಮೆಂಟ್, ಗ್ರಿಲ್ಸ್, ಪಾತ್ ವೇ, ಬೆಂಚ್ ಮತ್ತು ಹಸಿರೀ ಕರಣಕ್ಕಾಗಿ 4 ಕೋಟಿ ರೂ.(ಪ್ಯಾಕೇಜ್ 71 ಮತ್ತು 72ರಲ್ಲಿ ತಲಾ 2 ಕೋಟಿ ರೂ.) ಹಾಗೂ ವಿಜಯನಗರ 1,2 ಮತ್ತು 3ನೇ ಘಟ್ಟದ ವಿವಿಧ ಉದ್ಯಾನವನಗಳ ಅಭಿವೃದ್ಧಿಗೆ ಪ್ಯಾಕೇಜ್ 73ರಲ್ಲಿ 2.40 ಕೋಟಿ ರೂ., ನೀಡಲಾಗಿದೆ.

ಬಹಳ ಕಾಲ ಜಾನಪದ ಕಲಾವಿದರಿಗೆ ನಾಗರಿಕ ಪ್ರಶಸ್ತಿ ಮರೀಚಿಕೆಯಾಗಿತ್ತು !

● ಸಂಗೀತ ವಿವಿ ಕುಲಪತಿ ನಾಗೇಶ ವಿ. ಬೆಟ್ಟಕೋಟೆ ವಿಷಾಧ
● ಜಾನಪದ ಪ್ರಕಾರಗಳ ತರಬೇತಿ ಶಿಬಿರಕ್ಕೆ ಚಾಲನೆ



ಮೈಸೂರು, ಜೂ.24(ಎಸ್‌ಪಿಎನ್)– ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರವೂ ಜಾನಪದ ಕಲಾವಿದರಿಗೆ ಹಲವು ಕಾರಣಗಳಿಗಾಗಿ ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿಗಳನ್ನು ನೀಡದೇ ಕಡೆಗಣಿಸಲಾಗಿತ್ತು ಎಂದು ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿವಿ ಕುಲಪತಿ ನಾಗೇಶ್ ವಿ ಬೆಟ್ಟಕೋಟೆ ಅಭಿಪ್ರಾಯಪಟ್ಟರು.

ಮೈಸೂರು ವಿವಿ ಮಾನಸಗಂಗೋತ್ರಿ ಆವರಣದ ಬಿಎಂಶ್ರೀ ಸಭಾಂಗಣದಲ್ಲಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಜಾನಪದ ವಿಭಾಗ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಏರ್ಪಡಿಸಿದ್ದ ಜನಪದ ಪ್ರಕಾರಗಳ ತರಬೇತಿ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕಾಲ ಬದಲಾದಂತೆ ರಾಷ್ಟ್ರ ಹಾಗೂ ರಾಜ್ಯಮಟ್ಟದ ಪ್ರಶಸ್ತಿಗಳನ್ನು ಜಾನಪದ ಕಲಾವಿದರಿಗೂ ರಾಜ್ಯ ಮತ್ತು ಕೇಂದ್ರ ಸರ್ಕಾರ ನೀಡಿ ಗೌರವಿಸುವ ಪರಿಸ್ಥಿತಿ ನಿರ್ಮಾಣವಾಗಿರುವುದು ಉತ್ತಮ ಸಂಗತಿ ಎಂದರು.

ಕರ್ನಾಟಕದಲ್ಲಿ ಮಾತ್ರ ವಿವಿಧ ಕ್ಷೇತ್ರದ ಕಲಾವಿದರನ್ನು ಗುರುತಿಸಿ ಪ್ರಶಸ್ತಿಗಳನ್ನು ನೀಡಲಾಗುತ್ತಿದೆ. ಅಲ್ಲದೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಡಿಯಲ್ಲಿ 15ಕ್ಕೂ ಹೆಚ್ಚು ಅಕಾಡೆಮಿಗಳನ್ನು ಸ್ಥಾಪಿಸಿ, ನಮ್ಮ ಸಂಸ್ಕೃತಿ, ಪರಂಪರೆ ಉಳಿಸುವ ಕಾರ್ಯವಾಗುತ್ತಿದೆ. ಅದರಲ್ಲಿ ಜಾನಪದ, ಯಕ್ಷಗಾನ, ನಾಟಕ, ರಂಗಭೂಮಿ, ಸಂಗೀತ, ನೃತ್ಯ, ಚಿತ್ರಕಲೆ ಸೇರಿದಂತೆ ವಿವಿಧ ಕಲಾ ಪ್ರಕಾರದ ಅಕಾಡೆಮಿಗಳನ್ನು ಸ್ಥಾಪಿಸಿ, ಆಯಾಯ ಕ್ಷೇತ್ರದ ಕಲಾವಿದರನ್ನು ಗುರುತಿಸುವ ಕೆಲಸವಾಗುತ್ತಿದೆ ಎಂದು ತಿಳಿಸಿದರು.

ಕಳೆದ ನಾಲ್ಕೈದು ವರ್ಷಗಳಿಂದ ಜಾನಪದ ಕಲಾವಿದರಿಗೂ ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿ 'ಪದ್ಮಶ್ರೀ' ಸೇರಿದಂತೆ ಇತರೆ ಪ್ರಶಸ್ತಿಗಳನ್ನು ನೀಡಲಾಗುತ್ತಿದೆ. ಇದರಿಂದ ಜಾಗತಿಕ ಮಟ್ಟದಲ್ಲಿ ಜಾನಪದ ಕ್ಷೇತ್ರದಲ್ಲಿ ಉತ್ತಮ ಸ್ಥಾನಮಾನ ದೊರಕುವಂತಾಗಿದೆ. ಅಲ್ಲದೆ, ಕರ್ನಾಟಕ ಸೇರಿದಂತೆ ದೇಶದ ವಿವಿಧ ರಾಜ್ಯಗಳಲ್ಲಿನ ಜಾನಪದ ಕಲೆಗಳ ಕುರಿತು ತಜ್ಞರಿಂದ ಸಮೀಕ್ಷೆ ನಡೆಸಿ 200ಕ್ಕೂ ಅಧಿಕ ಕಲಾ ಪ್ರಕಾರಗಳನ್ನು ಗುರುತಿಸಲಾಗಿದೆ. ಇದರಲ್ಲಿ ಕರ್ನಾಟಕದ ಜಾನಪದ ಕ್ಷೇತ್ರಕ್ಕೆ ವಿಶಿಷ್ಟ ಸ್ಥಾನಮಾನ ನೀಡಲಾಗಿದೆ. ಅದರಲ್ಲೂ ಮೈಸೂರು ಭಾಗದ ಜಾನಪದ ಕಲೆಗಳು ಜಾಗತಿಕ ಗಮನ ಸೆಳೆದಿರುವುದು ಹೆಮ್ಮೆಯ ಸಂಗತಿ ಎಂದು ತಿಳಿಸಿದರು.

ಸಂಗೀತ ವಿವಿಯಿಂದ ರಾಮನಗರ ಜಾನಪದ ಲೋಕದ ಆಡಳಿತ ಮಂಡಳಿಯೊಂದಿಗೆ ಇತ್ತೀಚೆಗೆ ಒಡಂಬಡಿಕೆ ಮಾಡಿಕೊಂಡಿದ್ದು, ಮುಂದಿನ ದಿನಗಳಲ್ಲಿ ಜಾನಪದ ಕಲೆ ಅಧ್ಯಯನ ಮಾಡುವವರಿಗೂ ಸರ್ಟಿಫಿಕೇಟ್ ನೀಡುವ ಕೆಲಸವಾಗುತ್ತಿದೆ. ಇದರಿಂದ ಜಾನಪದ ಕಲಾವಿದರು ವಿವಿಧ ಕ್ಷೇತ್ರದಲ್ಲಿ ಉದ್ಯೋಗ ಪಡೆಯಲು ಸಹಕಾರಿಯಾಗುತ್ತದೆ ಎಂದು ತಿಳಿಸಿದರು.

ಕಂಸಾಳೆ, ಕೋಲಾಟ, ದೇವರ ಕುಣಿತ, ರಂಗಕುಣಿತ ಹಾಗೂ ಡೊಳ್ಳು ಕಲಾವಿದರಿಗೂ ಇನ್ನು ಮುಂದೆ ವಿವಿಯಿಂದ ಮಾನ್ಯತೆ ಸಿಗುವಂತಾಗಿದೆ. ಅಂತೆಯೇ ಮೈಸೂರು ಮತ್ತು ಬೆಂಗಳೂರು ವಿವಿಯ ಜಾನಪದ ವಿಭಾಗದ ವಿದ್ಯಾರ್ಥಿಗಳಿಗೆ ಜಾನಪದ ಕಲೆಗಳ ಕುರಿತು ತರಬೇತಿ ಶಿಬಿರಗಳನ್ನು ಆಯೋಜಿಸುತ್ತಿರುವುದು ಹಾಗೂ ಈ ಕಾರ್ಯಕ್ಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಆರ್ಥಿಕ ಸಹಾಯ ನೀಡುತ್ತಿರುವುದು ಉತ್ತಮ ಸಂಗತಿ ಎಂದರು.

ಈ ವೇಳೆ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕಿ ಪ್ರೊ.ವಿಜಯಕುಮಾರಿ ಎಸ್.ಕರಿಕಲ್, ಜಾನಪದ ವಿಭಾಗದ ಮುಖ್ಯಸ್ಥ ಡಾ.ನಂಜಯ್ಯ ಹೊಂಗನೂರು, ವಿದ್ಯಾರ್ಥಿ ಕ್ಷೇಮಪಾಲನ ನಿರ್ದೇಶನಾಲಯದ ನಿರ್ದೇಶಕ ಪ್ರೊ.ಸಿ.ಗುರುಸಿದ್ದಯ್ಯ, ಕರ್ನಾಟಕ ಜಾನಪದ ಅಕಾಡೆಮಿ ಸದಸ್ಯ ಶ್ರೀವತ್ಸ, ಜನಪದ ಕಲಾವಿದ ಸಿ.ಸುಂದರೇಶ್, ಆರ್.ಸಿ.ಸಿದ್ದರಾಜು, ಡಾ.ಹೆಚ್.ಪಿ.ಮಂಜು, ಡಾ.ಮಹಾದೇವ ಮೂರ್ತಿ, ಡಾ.ಬಸವಣ್ಣ, ಸಂಶೋಧಕ ಕುಮಾರ್ ಕಲ್ಲಳ್ಳಿ ಇತರರಿದ್ದರು.

ಡಿಸೆಂಬರ್ ನಂತರ ಹಣದುಬ್ಬರ ಇಳಿಕೆ

ಆರ್‌ಬಿಐ ಡೆಪ್ಯುಟಿ ಗವರ್ನರ್ ಮೈಕೇಲ್ ಪಾತ್ರಾ

ನವದೆಹಲಿ: ದೇಶದಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಸತತ ಮೂರು ತ್ರೈಮಾಸಿಕಗಳಲ್ಲಿ ಶೇಕಡ 6ಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಇರುವ ಸಾಧ್ಯತೆ ಇದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಡೆಪ್ಯುಟಿ ಗವರ್ನರ್ ಮೈಕೇಲ್ ಪಾತ್ರಾ ಹೇಳಿದ್ದಾರೆ.

ಹಣದುಬ್ಬರವು ಗರಿಷ್ಠ ಮಟ್ಟವನ್ನು ತಲುಪಿರುವ ಸೂಚನೆಗಳು ಇವೆ ಎಂದೂ ಪಾತ್ರಾ ಅವರು ಶುಕ್ರವಾರ ಹೇಳಿದ್ದಾರೆ.

ಹಣದುಬ್ಬರ ಪ್ರಮಾಣವು ಸತತ ಮೂರು ತ್ರೈಮಾಸಿಕಗಳವರೆಗೆ ಗರಿಷ್ಠ ಮಿತಿಗಿಂತ ಹೆಚ್ಚಿದ್ದರೆ, ಆರ್‌ಬಿಐ ಕೇಂದ್ರ ಸರ್ಕಾರಕ್ಕೆ ವರದಿಯೊಂದನ್ನು ಸಲ್ಲಿಸಬೇಕು ಎಂದು ಕಾಯ್ದೆ ಹೇಳುತ್ತದೆ. ಹಣದುಬ್ಬರವನ್ನು ನಿಯಂತ್ರಿಸಲು ಏಕೆ ಆಗಲಿಲ್ಲ ಎಂಬುದನ್ನು ಆರ್‌ಬಿಐ ಆ ವರದಿಯಲ್ಲಿ ಹೇಳಬೇಕಾಗುತ್ತದೆ. ಹಣದುಬ್ಬರವು ಸತತ ಮೂರು ತ್ರೈಮಾಸಿಕಗಳವರೆಗೆ ಗರಿಷ್ಠ ಮಿತಿಗಿಂತ ಹೆಚ್ಚಿರುವ ಸಾಧ್ಯತೆ ಜಾಸ್ತಿ ಇದೆ ಎಂದು ಅವರು ಕಾರ್ಯಕ್ರಮವೊಂದರಲ್ಲಿ ಹೇಳಿದ್ದಾರೆ. ಏಪ್ರಿಲ್ ತಿಂಗಳಿನಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇ 7.79ಕ್ಕೆ ತಲುಪಿತ್ತು. ಮೇ ತಿಂಗಳಿನಲ್ಲಿ ಅದು ತುಸು ಕಡಿಮೆ ಆಯಿತು. ಸತತ ಐದು ತಿಂಗಳುಗಳಿಂದ ಹಣದುಬ್ಬರವು ಶೇ 6ಕ್ಕಿಂತ ಹೆಚ್ಚಿನ ಮಟ್ಟದಲ್ಲಿದೆ.

ಜಾಗತಿಕ ಮಟ್ಟದಲ್ಲಿ ಹಣದ ಹರಿವಿನ ಮೇಲೆ ಕೈಗೊಂಡಿರುವ ಬಿಗಿ ಕ್ರಮಗಳಿಗೆ ಹೋಲಿಸಿದರೆ, ಆರ್‌ಬಿಐ ಇನ್ನು ಮುಂದೆ ಕೈಗೊಳ್ಳಲಿರುವ ಕ್ರಮಗಳು ಹೆಚ್ಚು ಸೌಮ್ಯವಾಗಿರಲಿವೆ ಎಂದು ಪಾತ್ರಾ ಅವರು ಆಶಾಭಾವ ವ್ಯಕ್ತಪಡಿಸಿದ್ದಾರೆ.


ಕುವೆಂಪು, ಬಸವಣ್ಣ ವೈಚಾರಿಕ ಚಿಂತನೆಯ ಸಮುದಾಯವನ್ನೇ ಸೃಷ್ಟಿಸಿದರು

ಮೈಸೂರು, ಜೂ.24(ಎಸ್‌ಪಿಎನ್)– ಕುವೆಂಪು ಮತ್ತು ಬಸವಣ್ಣನವರ ಜೀವಿತಾವಧಿಯಲ್ಲಿ ಪ್ರಶ್ನಿಸುವ ಹಾಗೂ ವೈಚಾರಿಕ ಚಿಂತನೆಗೆ ತೆರೆದುಕೊಳ್ಳುವ ಸಮುದಾಯವನ್ನು ಸೃಷ್ಟಿಸಲು ಶ್ರಮಿಸಿದ್ದರು ಎಂದು ಕನ್ನಡ ವಿವಿಯ ನಿವೃತ್ತ ಪ್ರಾಧ್ಯಾಪಕ ಹಾಗೂ ಹಿರಿಯ ಸಾಹಿತಿ ಡಾ.ರಹಮತ್ ತರೀಕೆರೆ ಅಭಿಪ್ರಾಯಪಟ್ಟರು.

ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿವಿ ಆವರಣದ ಕಾವೇರಿ ಸಭಾಂಗಣದಲ್ಲಿ ಮುಕ್ತ ವಿವಿ ಪ್ರಸಾರಾಂಗದ ವತಿಯಿಂದ ಆಯೋಜಿಸಿದ್ದ ಪ್ರಚಾರೋಪನ್ಯಾಸ ಮಾಲೆ ಕಾರ್ಯಕ್ರಮದಲ್ಲಿ 'ಕುವೆಂಪು ಚಿಂತನೆಗಳಲ್ಲಿ ನಾಗರಿಕ ಸಮಾಜದ ಪರಿಕಲ್ಪನೆ' ಕುರಿತು ಮಾತನಾಡಿದರು.

ಕುವೆಂಪು ಮತ್ತು ಬಸವಣ್ಣನವರ ಬರಹಗಳಲ್ಲಿ ಪ್ರಾದೇಶಿಕತೆಗೂ ಹೆಚ್ಚಿನ ಒತ್ತು ನೀಡಿ, ವಿಶ್ವಮಾನವ ಚಿಂತನೆಗೂ ಅವಕಾಶ ಕಲ್ಪಿಸಿದ್ದರು. ಇತ್ತೀಚೆಗೆ ಕೆಲ ಚಿಂತಕರು ತಮ್ಮ ಬರಹಗಳಲ್ಲಿ ಪ್ರಾದೇಶಿಕತೆಗೆ ಒತ್ತು ನೀಡಿ, ಜಾಗತಿಕ ಅಂಶಗಳು ಬಂದಾಗ ಅದನ್ನು ಮರೆಯುತ್ತಾರೆ. ಆದರೆ, ಈ ಇಬ್ಬರು ದಾರ್ಶನಿಕರು ಎರಡಕ್ಕೂ ಎಲ್ಲಿಯೂ ಕುಂದು ಬಾರದಂತೆ ಆದ್ಯತೆ ನೀಡಿರುವುದು ಸೋಜಿಗದ ಸಂಗತಿ ಎಂದರು.

ನಿವೃತ್ತ ಪ್ರಾಧ್ಯಾಪಕ ಡಾ.ರಹಮತ್ ತರೀಕೆರೆ ಅಭಿಮತ



ಕುವೆಂಪು ಅವರಿಗೆ ಕನ್ನಡದ ಅಸ್ಮಿತೆ ವಿಚಾರ ಬಂದಾಗ 'ಜಯ ಭಾರತ ಜನನಿಯ ತನುಜಾತೆ, ಜಯಹೇ ಕರ್ನಾಟಕ ಮಾತೆ' ಕಾವ್ಯವನ್ನು ರಚಿಸಿ ಹಲವು ಗೊಂದಲಗಳಿಗೆ ತೆರೆ ಎಳೆದಿದ್ದರು. ಹಾಗೆಯೇ ಬಸವಣ್ಣನವರು ತಮ್ಮ ಜೀವಿತಾವಧಿಯಲ್ಲಿ ಓರ್ವ ವ್ಯಕ್ತಿಗೆ ತಾನು ಮಾಡುವ ಪ್ರತಿ ಕೆಲಸದಲ್ಲೂ ನಿಷ್ಠೆ ಇರಬೇಕು ಮತ್ತು ತಮ್ಮ ನಡೆ–ನುಡಿ ಎರಡೂ ನಾಗರಿಕ ಸಮಾಜ ಒಪ್ಪುವಂತಿರಬೇಕು ಎಂದು ಪ್ರತಿಪಾದಿಸಿದ್ದರಲ್ಲದೆ, ಹಾಗೆಯೇ ಅವರು ಜೀವಿಸಿ ಇತರರಿಗೂ ಮಾದರಿಯಾಗಿದ್ದ ಪ್ರಸಂಗಗಳನ್ನು ಎಳೆಎಳೆಯಾಗಿ ಬಿಡಿಸಿಟ್ಟರು.

ಕುವೆಂಪು ಪ್ರಕೃತಿ ವಿಚಾರ ಬಂದಾಗ 'ಮಲೆಗಳಲ್ಲಿ ಮದುಮಗಳು' ಹಾಗೂ 'ಕಾನೂರು ಹೆಗ್ಗಡತಿ' ಕಾದಂಬರಿಗಳನ್ನು ರಚಿಸಿ, ವಿಮರ್ಶಕರಿಗೆ ಉತ್ತರಿಸಿದ್ದರು. ಅದರಂತೆ ಬಸವಣ್ಣನವರು 'ಕಳಬೇಡ, ಕೊಲಬೇಡ ಹುಸಿಯ ನುಡಿಯಲು ಬೇಡ' ಎಂಬ ವಚನದ ಮೂಲಕ ವೈಚಾರಿಕ ಸಮಾಜ ನಿರ್ಮಾಣಕ್ಕೆ ಶ್ರಮಿಸಿದ್ದ ಪ್ರಸಂಗಗಳನ್ನು ವಿವರಿಸಿದರು.

ಕುವೆಂಪು ಅವರ ಹುಟ್ಟೂರು ಕವಿಶೈಲದಲ್ಲಿ ಇಂದಿಗೂ 12 ಜನ ಮುಖ್ಯಮಂತ್ರಿಗಳ ಜೊತೆ ಫೋಟೋ ತೆಗೆಸಿಕೊಂಡಿರುವ ಭಾವಚಿತ್ರಗಳನ್ನು ಸಂಗ್ರಹಿಸಲಾಗಿದೆ. ಆ ಪೋಟೋಗಳಲ್ಲಿ ಕುವೆಂಪು ಗಾಂಭೀರ್ಯದಿಂದ ಚೇರ್ ಮೇಲೆ ಕುಳಿತಿದ್ದಾರೆ. ಅವರ ಅಕ್ಕ–ಪಕ್ಕದಲ್ಲಿ ಆಯಾಯ ಕಾಲಘಟ್ಟದ ಮುಖ್ಯಮಂತ್ರಿಗಳು ನಿಂತು ಭಾವಚಿತ್ರ ತೆಗೆಸಿಕೊಂಡಿರುವ ದೃಶ್ಯ ಎಲ್ಲರನ್ನು ಆಕರ್ಷಿಸುತ್ತಿದೆ. ಇದು ಇಂದಿನ ಸಾಹಿತಿಗಳಿಂದ ಸಾಧ್ಯವೇ ಎಂದು ಪ್ರಶ್ನಿಸಿದರು.

ಕುವೆಂಪು ಅವರ ಬರಹಗಳಲ್ಲಿ ನಾಡು–ನುಡಿ, ನೆಲ–ಜಲ, ನಿಸರ್ಗ ಕುರಿತು ಹಲವು ಕಾವ್ಯ, ನಾಟಕಗಳನ್ನು ರಚಿಸಿ, ಯುವ ಜನತೆ ನಿಸರ್ಗದ ಸೌಂದರ್ಯವನ್ನು ಯಾವ ರೀತಿ ಅನುಭವಿಸಬೇಕು ಎಂಬುದರ ಕುರಿತು ಸ್ಪಷ್ಟ ಚಿತ್ರಣ ನೀಡಿದ್ದಾರೆ. ಅದರಲ್ಲಿ ನದಿಯನ್ನು ಜ್ಞಾನಕ್ಕೆ ಹೋಲಿಸಿ, ಆಯಾಯ ಕಾಲಘಟ್ಟದ ಪ್ರಭುತ್ವದ ವಿರುದ್ಧ ಪರಿಸ್ಥಿತಿಗೆ ಅನುಗುಣವಾಗಿ ಪ್ರಶ್ನಿಸುವಂತೆಯೂ ಕರೆ ನೀಡಿದ್ದಾರೆ. ಇಂತಹ ವಿಶ್ವ ಮಾನ್ಯ ಸಂದೇಶಗಳು ಬಸವಣ್ಣ ಮತ್ತು ಕುವೆಂಪುರವರ ಬರಹಗಳಲ್ಲಿ ಮಾತ್ರ ಕಾಣಲು ಸಾಧ್ಯ ಎಂದರು.

ಈ ವೇಳೆ ಕರ್ನಾಟಕ ರಾಜ್ಯ ಮುಕ್ತ ವಿವಿ ಕುಲಪತಿ ಪ್ರೊ.ಎಸ್.ವಿದ್ಯಾಶಂಕರ್, ಕುಲಸಚಿವ ಪ್ರೊ.ಆರ್.ರಾಜಣ್ಣ, ಪ್ರಸಾರಾಂಗ ಸಂಯೋಜನಾಧಿಕಾರಿ ಡಾ. ಆರ್. ಸಂತೋಷ್ ನಾಯಕ್ ಉಪಸ್ಥಿತರಿದ್ದರು.

ಚುನಾವಣೆಯಲ್ಲಿ ಜನಪರ, ಅಭಿವೃದ್ಧಿ ಪರರನ್ನು ಸೋಲಿಸಿದರೆ ಪ್ರಜಾಪ್ರಭುತ್ವಕ್ಕೆ ತುಂಬಲಾರದ ನಷ್ಟ

ಜೊತೆಯಲ್ಲಿದ್ದವರು ವಿಮರ್ಶೆ ಮಾಡಿಕೊಂಡು 'ಕೈ' ಬೆಂಬಲಿಸಿ: ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ

- ಬಿಜೆಪಿಯನ್ನು ಅಧಿಕಾರದಿಂದ ದೂರವಿಡದಿದ್ದರೆ ಪ್ರಜಾಪ್ರಭುತ್ವ, ಸಂವಿಧಾನಕ್ಕೆ ಉಳಿಗಾಲವಿಲ್ಲ.
- ಅಧಿಕಾರಕ್ಕೆ ಬರಲು ಹಾತೊರೆಯುತ್ತಿರುವ ಜೆಡಿಎಸ್‌ನದು ದ್ವಂದ್ವ ನಿಲುವು

ತಿ.ನರಸೀಪುರ, ಜೂ.24(ಎಸ್‌ಕೆ)– ಚುನಾವಣೆಯಲ್ಲಿ ಜನಪರ, ಅಭಿವೃದ್ಧಿಗೆ ಬದ್ಧರಾಗಿರುವವರನ್ನು ಸೋಲಿಸಿದರೆ ಪ್ರಜಾಪ್ರಭುತ್ವಕ್ಕೆ ತುಂಬಲಾರದ ನಷ್ಟ, ಸೋತ ನಂತರವಷ್ಟೇ ಜನರಿಗೆ ನಷ್ಟವಾದದ್ದು ಅರಿವಿಗೆ ಬರುತ್ತದೆ. ಜೊತೆಯಲ್ಲಿದ್ದುಕೊಂಡು ಸೋಲಿಸಿದವರು ವಿಮರ್ಶೆ ಮಾಡಿಕೊಂಡು ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿಸಬೇಕು ಎಂದು ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮನವಿ ಮಾಡಿದರು.

ಪಟ್ಟಣದ ಹಳೇ ಸಂತೇಮಾಳದ ರಾಷ್ಟ್ರೀಯ ಹೆದ್ದಾರಿ ಜಂಕ್ಷನ್ ಬಳಿ ವರುಣಾ ಹಾಗೂ ತಿ.ನರಸೀಪುರ ವಿಧಾನಸಭಾ ಕ್ಷೇತ್ರಗಳ ಕಾಂಗ್ರೆಸ್ ಕಚೇರಿ ಉದ್ಘಾಟಿಸಿ ಮಾತನಾಡಿದ ಅವರು, ನರಸೀಪುರ, ನಂಜನಗೂಡು, ಮೈಸೂರಷ್ಟೇ ಅಲ್ಲ ರಾಜ್ಯದ ಉದ್ದಗಲಕ್ಕೂ ಜನರ ಪ್ರೀತಿ ವಿಶ್ವಾಸ ಇರುವುದರಿಂದಲೇ ಅಧಿಕಾರ ಇಲ್ಲದಿದ್ದರೂ, ರಾಜಕೀಯದಲ್ಲಿದ್ದೇನೆ. ಜನರ ನಂಬಿಕೆ ಕಳೆದುಕೊಂಡ ಕೂಡಲೇ ರಾಜಕಾರಣದಿಂದಲೇ ನಿರ್ಗಮಿಸುತ್ತೇನೆ ಎಂದರು.

ಮುಂದಿನ ಚುನಾವಣೆಗಳಲ್ಲಿ ಬಿಜೆಪಿಯನ್ನು ಅಧಿಕಾರದಿಂದ ದೂರವಿಡದಿದ್ದರೆ ಪ್ರಜಾಪ್ರಭುತ್ವ ಮತ್ತು ಸಂವಿಧಾನಕ್ಕೆ ಉಳಿಗಾಲವಿಲ್ಲ. ಆಡಳಿತ ವೈಫಲ್ಯ ಮುಚ್ಚಿಕೊಳ್ಳಲು ಯುವ ಜನತೆ ತಲೆಗೆ ಧರ್ಮದ ಅಫೀಮನ್ನು ತುಂಬಲಾಗುತ್ತಿದೆ. ಜನ ವಿರೋಧಿ, ರೈತ ವಿರೋಧಿ ಕಾಯ್ದೆಗಳಿಗೆ



ವಿಧಾನಸಭೆ ಒಳಗೆ ಬೆಂಬಲ ಕೊಟ್ಟು, ಹೊರಗೆ ವಿರೋಧಿಸುವ ದ್ವಂದ್ವ ನಿಲುವನ್ನು ಹೊಂದಿರುವ ಜೆಡಿಎಸ್ ಪಕ್ಷ ಅಧಿಕಾರಕ್ಕೆ ಬರಲು ಹಾತೊರೆಯುತ್ತಿದೆ. ಆಡಳಿತ ಪಕ್ಷವನ್ನು ಎದುರಿಸುವುದನ್ನು ಬಿಟ್ಟು, ವಿಪಕ್ಷವಾಗಿ ವಿಪಕ್ಷವನ್ನೇ ಟೀಕಿಸುತ್ತದೆ ಎಂದು ಎರಡೂ ಪಕ್ಷಗಳ ವಿರುದ್ಧ ಹರಿಹಾಯ್ದರು.

ನರಸೀಪುರ ವಿಧಾನಸಭಾ ಕ್ಷೇತ್ರವೊಂದೆಯಲ್ಲ ಪಕ್ಕದ ವರುಣಾ, ನಂಜನಗೂಡು, ಗುಂಡ್ಲುಪೇಟೆ, ಕೊಳ್ಳೇಗಾಲ ಹೀಗೆ ನೆರೆ ಹೊರೆಯ ಜಿಲ್ಲೆ ಹಾಗೂ ರಾಜ್ಯದ ಪ್ರತಿಯೊಂದು ಕ್ಷೇತ್ರದಲ್ಲಿಯೂ ಕಾಂಗ್ರೆಸ್ ಗೆಲ್ಲುವ ಬಗ್ಗೆ ಕಾರ್ಯಕರ್ತರು ಧ್ವನಿಯಾಗಬೇಕು. ಅನುಮಾನ, ಅಪಸ್ವರದ ಮಾತುಗಳನ್ನು ಆಡಲೇಬಾರದು. ಸಂಘಟನೆ ಬಲಪಡಿಸುವ ಮೂಲಕ ಕಾಂಗ್ರೆಸ್ ಗೆಲ್ಲಿಸಿ ಮತ್ತೆ ರಾಜ್ಯದಲ್ಲಿ ಅಧಿಕಾರಕ್ಕೆ ತರಬೇಕೆಂದು ಕರೆ ನೀಡಿದರು.

ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಮಾತನಾಡಿ, ಪಕ್ಷ ಸಂಘಟನೆಗೆ ಸೂಕ್ತ ಕಚೇರಿಯ ಅಗತ್ಯವಿದೆ. ವರುಣಾ ಮತ್ತು ತಿ.ನರಸೀಪುರ ಕ್ಷೇತ್ರಗಳೆರಡನ್ನೂ ಕೇಂದ್ರೀಕರಿಸಿ ತೆರೆದಿರುವ ಕಚೇರಿಯಲ್ಲಿ ನಾನೂ ಕೂಡ ಇರುತ್ತೇನೆ. ಮುಂಬರುವ ದಿನಗಳು ಚುನಾವಣೆ ವರ್ಷ ಆಗಿರುವುದರಿಂದ ಕಾರ್ಯಕರ್ತರು ಹಾಗೂ ಮುಖಂಡರು ಸಂಘಟಿತರಾಗಬೇಕು. ಕಚೇರಿಯಲ್ಲಿ ನಿತ್ಯವೂ ಒಂದಲ್ಲ ಒಂದು ಕಾರ್ಯಕ್ರಮ ನಡೆಯುವಂತಿರಲಿ ಎಂದರು.

> 6 ರಾಜಕೀಯವಾಗಿ ವಿರೋಧಿಗಳು ಯಾರ ಕೈಗೂ ಸಿಗಲ್ಲವೆಂದು ನಮ್ಮ ಬಗ್ಗೆ ಅಪಪ್ರಚಾರ ಮಾಡುತ್ತಿದ್ದರು. ಇನ್ಮುಂದೆ ವಾರದಲ್ಲಿ ನಾಲ್ಕು ದಿನ ಕಚೇರಿಯಲ್ಲಿ ಬೆಳಗ್ಗೆಯಿಂದ ಸಂಜೆ 4 ಗಂಟೆವರೆಗೂ ಇರುತ್ತೇನೆ. ಸಂಘಟನೆ ವಿಚಾರದಲ್ಲಿ ಕಾರ್ಯಕರ್ತರು ಹಾಗೂ ಮುಖಂಡರ ಸಲಹೆ ಸೂಚನೆ ಆಲಿಸುತ್ತೇನೆ. ಕ್ಷೇತ್ರದ ಜನರ ಕಷ್ಟ ಸುಖಗಳಿಗೆ ಸ್ಪಂದಿಸುತ್ತೇನೆ. ಎಲ್ಲಾ ಚುನಾವಣೆಗಳಲ್ಲಿಯೂ ಕಾಂಗ್ರೆಸ್ ಪಕ್ಷ ಗೆಲ್ಲಿಸಲು ಎಲ್ಲರೊಂದಿಗೂ ದುಡಿಯುತ್ತೇನೆ.
>
> – ಸುನೀಲ್ ಬೋಸ್, ವಸತಿ ಯೋಜನೆ ಜಾಗೃತಿ ಸಮಿತಿಯ ಮಾಜಿ ಅಧ್ಯಕ್ಷ.

ಈ ವೇಳೆ ಪುರಸಭಾಧ್ಯಕ್ಷ ಮದನ್ ರಾಜ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಎಂ.ಡಿ.ಬಸವರಾಜು, ಬಿ.ಚನ್ನಕೇಶವ, ಕೆ.ಮುದ್ದೇಗೌಡ, ಜಿಪಂ ಮಾಜಿ ಸದಸ್ಯರಾದ ಎಂ.ಸುಧಾ, ಹೊನ್ನನಾಯಕ, ತಾಪಂ ಮಾಜಿ ಅಧ್ಯಕ್ಷರಾದ ಎಂ.ಮಲ್ಲಿಕಾರ್ಜುನಸ್ವಾಮಿ, ನಟರಾಜು, ಮಾಜಿ ಉಪಾಧ್ಯಕ್ಷ ಪ್ರಸನ್ನ, ಮಾಜಿ ಸದಸ್ಯ ರಾಮಲಿಂಗಯ್ಯ, ಗಣೇಶ್, ನಿವೃತ್ತ ಮುಖ್ಯ ಲೆಕ್ಕಾಧಿಕಾರಿ ಮಾಲಂಗಿ ಎಂ.ಜೆ.ಶಿವಸ್ವಾಮಿ, ಮುಖಂಡರಾದ ಎಂ.ಪಿ.ನಿಂಗಪ್ಪ, ಚಿದರವಳ್ಳಿ ಚಂದ್ರಶೇಖರ್, ಮಲ್ಲಾಜಮ್ಮ, ಟಿ.ಬೆಟ್ಟಹಳ್ಳಿ ಕೋಕಿಲ, ಕೇತಹಳ್ಳಿ ಮಹದೇವಸ್ವಾಮಿ, ಜೆ.ಅನೂಪ್‌ಗೌಡ ಹಾಗೂ ಇನ್ನಿತರರಿದ್ದರು.

ದ್ರೌಪದಿ ಮುರ್ಮು ಅವರನ್ನು ಅವಿರೋಧವಾಗಿ ಆಯ್ಕೆ ಮಾಡಿ

ನಂಜನಗೂಡು, ಜೂ. 24 (ಸುದರ್ಶನ್)– ದ್ರೌಪದಿ ಮುರ್ಮು ಅವರನ್ನು ರಾಷ್ಟ್ರಪತಿ ಚುನಾವಣೆಗೆ ಅಭ್ಯರ್ಥಿಯನ್ನಾಗಿಸುವಲ್ಲಿ ಭಾರತೀಯ ಜನತಾ ಪಾರ್ಟಿ ನೇತೃತ್ವದ ಎನ್‌ಡಿಎ ಸರಕಾರವು ಸೂಕ್ತವಾದ ಮತ್ತು ದೃಢವಾದ



ನಿರ್ಧಾರವನ್ನು ತೆಗೆದುಕೊಂಡಿದ್ದು, ಬಿಜೆಪಿಯ, ಸಬ್ ಕಾ ಸಾಥ್, ಸಬ್ ಕಾ ವಿಕಾಸ್ ಮತ್ತು ಸಬ್ ಕಾ ವಿಶ್ವಾಸ್ ತತ್ವಕ್ಕೆ ತಕ್ಕಂತೆ ಈ ಆಯ್ಕೆ ನಡೆದಿದೆ ಎಂದು ನಂಜನಗೂಡು ಶಾಸಕ ಬಿ.ಹರ್ಷವರ್ಧನ್ ಹೇಳಿದ್ದಾರೆ.

ಈ ಕುರಿತು ಹೇಳಿಕೆ ನೀಡಿರುವ ಅವರು, ಸ್ವಭಾವತಃ ಒಟ್ಟಾಭಿಪ್ರಾಯ ಹೊಂದಿರುವ ಪಕ್ಷವು ಮಾತ್ರ ಇಂತಹ ನಿರ್ಧಾರವನ್ನು ತೆಗೆದುಕೊಳ್ಳಲು ಸಾಧ್ಯ. ದ್ರೌಪದಿ ಮುರ್ಮು ಅವರು ಆಯ್ಕೆಯಾದರೆ ಸಾಂವಿಧಾನಿಕ ಉನ್ನತ ಹುದ್ದೆಯನ್ನು ಅಲಂಕರಿಸಿದ, ಬುಡಕಟ್ಟು ಸಮುದಾಯಕ್ಕೆ ಸೇರಿದ ಮೊದಲ ಮಹಿಳೆಯಾಗಲಿದ್ದಾರೆ. ಜೊತೆಗೆ ಭಾರತದ ಎರಡನೇ ಮಹಿಳಾ ರಾಷ್ಟ್ರಪತಿಯೂ ಆಗಲಿದ್ದಾರೆ. 75ನೇ ವರ್ಷದ ಅಮೃತ ಮಹೋತ್ಸವದ ಸಂದರ್ಭದಲ್ಲಿ ಇಂತಹ ನಿರ್ಧಾರ ತೆಗೆದುಕೊಂಡಿರುವ ಪ್ರಧಾನ ಮಂತ್ರಿಗಳಾದ ನರೇಂದ್ರ ಮೋದಿ ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಸ್ವತಂತ್ರ ಬಂದ ಮೇಲೆ ಆದಿವಾಸಿಗಳು ಅವಕಾಶ ವಂಚಿತರಾಗಿದ್ದರು. ಆದರೆ ಇಂದು ದ್ರೌಪತಿ ಮುರ್ಮು ಅವರಿಗೆ ಅವಕಾಶ ಮಾಡಿಕೊಟ್ಟಿರುವುದು ಬಹಳ ಸಂತೋಷವಾಗಿದೆ ಎಂದಿದ್ದಾರೆ.

ಜುಲೈ 18 ರಂದು ಅವರು ಅವಿರೋಧವಾಗಿ ಆಯ್ಕೆ ಯಾಗುವಂತಾಗಬೇಕು. ಇದು ಮಹಿಳೆಯೊಬ್ಬರ ಸಾಮರ್ಥ್ಯವನ್ನು ಒಪ್ಪಿಕೊಳ್ಳಲು ಮತ್ತು ಪ್ರಶಂಸಿಸಲು ಸರಿಯಾದ ಅವಕಾಶವಾಗಿದೆ. ಸಾರ್ವಜನಿಕ ಜೀವನದಲ್ಲಿ ಅವರ ಅನುಭವವು ತುಂಬಾ ಪ್ರಭಾವಶಾಲಿಯಾಗಿದೆ. ಒಡಿಶಾ ಮೂಲದ ಅವರು ರಾಜಕೀಯಕ್ಕೆ ಪ್ರವೇಶಿಸುವ ಮೊದಲು ಶಿಕ್ಷಕಿಯಾಗಿದ್ದರು. ನಂತರ ಪಂಚಾಯತ್ ಸದಸ್ಯರಾಗಿದ್ದರು. ಬಿಜೆಪಿ ಟಿಕೆಟ್ ಪಡೆದು ಎರಡು ಭಾರಿ ಶಾಸಕರಾಗಿದ್ದರು. ಬಿಜೆಪಿ –ಬಿಜೆಡಿ ಸಮ್ಮಿಶ್ರ ಸರ್ಕಾರದಲ್ಲಿ ಸಚಿವರಾಗಿದ್ದರು. ಮತ್ತು ನಂತರ ಜಾರ್ಖಂಡ್ ಮೊದಲ ಮಹಿಳಾ ರಾಜ್ಯಪಾಲರಾದರು. ಅವರ ವೈಯಕ್ತಿಕ ಜೀವನದ ದುರಂತಗಳು ಅವರನ್ನು ಸಾರ್ವಜನಿಕ ಸೇವೆಯಿಂದ ಎಂದೂ ಹಿಂದೆಗೆಯುವಂತೆ ಮಾಡಲಿಲ್ಲ ಎಂದು ಹರ್ಷವರ್ಧನ್ ಪ್ರಶಂಸಿಸಿದ್ದಾರೆ.

ದೇಶದ ಸುರಕ್ಷತೆ, ಭದ್ರತೆಗಾಗಿ ಅಗ್ನಿಪಥ್ ಯೋಜನೆ ಹಿಂಪಡೆಯಿರಿ

ಕೆಪಿಸಿಸಿ ಕಾರ್ಯಾಧ್ಯಕ್ಷ ಈಶ್ವರ ಖಂಡ್ರೆ ಆಗ್ರಹ



ಹೆಚ್.ಡಿ.ಕೋಟೆ, ಜೂ.24(ಮಂಜು)– ದೇಶದ ಸುರಕ್ಷತೆ, ಭದ್ರತೆ ಹಿನ್ನೆಲೆಯಲ್ಲಿ ಅಗ್ನಿಪಥ್ ಯೋಜನೆ ಹಿಂಪಡೆಯಬೇಕು. ಇಲ್ಲದಿದ್ದರೆ ನಮ್ಮ ಹೋರಾಟ ನಿರಂತರವಾಗಿ ನಡೆಯುತ್ತದೆ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಈಶ್ವರ ಖಂಡ್ರೆ ತಿಳಿಸಿದರು.

ಪಟ್ಟಣದ ತಾಲೂಕು ಪತ್ರಕರ್ತರ ಕಚೇರಿಯಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿ ರಾಜ್ಯದಲ್ಲಿ 4 ವರ್ಷ, ಕೇಂದ್ರದಲ್ಲಿ 8 ವರ್ಷದಿಂದ ಆಡಳಿತದಲ್ಲಿದೆ. ಪ್ರಾರಂಭದಲ್ಲಿ ನಿರುದ್ಯೋಗ ಯುವಕರಿಗೆ 2 ಕೋಟಿ ಉದ್ಯೋಗ ಸೃಷ್ಟಿ ಮಾಡುತ್ತೇವೆ ಎಂದು ಆಡಳಿತಕ್ಕೆ ಬಂದ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ 8 ವರ್ಷಗಳಲ್ಲಿ ಹದಿನಾರು ಕೋಟಿ ಉದ್ಯೋಗ ನೀಡಬೇಕಾಗಿತ್ತು. ಆದರೆ ಅವರ ಭರವಸೆ ಹುಸಿಯಾಗಿದೆ ಎಂದರು.

ಕಳೆದ 2 ವರ್ಷದಿಂದ ಭೂ, ವಾಯು ಹಾಗೂ ಜಲ ಸೇನೆಗೆ ಯಾವುದೇ ನೇಮಕಾತಿ ನಡೆದಿಲ್ಲ. ಇದರಿಂದ ದೇಶ ಸೇವೆ ಮಾಡಬೇಕೆಂಬ ಆಕಾಂಕ್ಷೆ ಇಟ್ಟುಕೊಂಡ ಯುವಕರಿಗೆ ನಿರಾಸೆಯಾಗಿದೆ. ಕೇಂದ್ರ ಸರ್ಕಾರ ಅಗ್ನಿಪಥ್ ಯೋಜನೆಯನ್ನು ಜಾರಿಗೆ ತರುವುದಾಗಿ ಹೇಳಿದೆ. ಈ ಯೋಜನೆಯಲ್ಲಿ ಯುವಕರಿಗೆ ಕೇವಲ 4 ವರ್ಷ ಮಾತ್ರ ಸೇವೆ ಸಲ್ಲಿಸಬಹುದಾಗಿದ್ದು, 6 ತಿಂಗಳ ತರಬೇತಿ ನೀಡುತ್ತೇವೆ ಎಂದು ಹೇಳಿದ್ದಾರೆ. ಶೇ.75 ರಷ್ಟು ಯುವಕನನ್ನು 4 ವರ್ಷದ ನಂತರ ಸೇನೆಯಿಂದ ನಿವೃತ್ತಿ ಮಾಡುತ್ತಾರೆ. ಇದರಿಂದ ಅವರ ಭವಿಷ್ಯ ನಾಶ ಮಾಡಿದಂತಾಗುತ್ತದೆ ಎಂದು ಟೀಕಿಸಿದರು.

ಹೆಚ್.ಡಿ.ಕೋಟೆ ತಾಲೂಕು ಅರಣ್ಯ ಮತ್ತು ಜಲ ಸಂಪತ್ತಿನಿಂದ ಕೂಡಿದ್ದು, ಸಫಾರಿ ಕೇಂದ್ರಗಳನ್ನು ಒಳಗೊಂಡಿದ್ದು, ತಾಲೂಕನ್ನು ಪ್ರವಾಸೋದ್ಯಮ ಮಾಡಲು ಎಲ್ಲಾ ಅನುಕೂಲಗಳಿವೆ. ಆದರೆ ಸರ್ಕಾರ ನಿರ್ಲಕ್ಷ್ಯ ವಹಿಸಿದೆ. ಸರಗೂರು ತಾಲೂಕು ರಚನೆಯಾಗಿ 5 ವರ್ಷ ಕಳೆದರೂ ಕೂಡ ಅಲ್ಲಿಗೆ ಯಾವುದೇ ಮೂಲ ಸೌಕರ್ಯ ಕಲ್ಪಿಸಿಲ್ಲ. ಕೇಂದ್ರ ಮತ್ತು ರಾಜ್ಯ ಬಿಜೆಪಿ ಸರ್ಕಾರವು ಜನ ವಿರೋಧಿ ಹಾಗೂ ರೈತ ವಿರೋಧಿ ಸರ್ಕಾರ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಶಾಸಕ ಅನಿಲ್ ಚಿಕ್ಕಮಾದು, ಕೆಪಿಸಿಸಿ ಕಾರ್ಯದರ್ಶಿ ಗುರುಪಾದಸ್ವಾಮಿ, ಕೋಟೆ ಸರಗೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಏಜಾಜ್ ಪಾಷ, ಮನುಗನಹಳ್ಳಿ ಮಾದಪ್ಪ ಜಿಪಂ ಮಾಜಿ ಸದಸ್ಯ ಬಿ.ವಿ.ಬಸವರಾಜು, ಮುಖಂಡ ಮಂಜು ಇದ್ದರು.

ಕೆಂಪಯ್ಯನಹುಂಡಿಯಲ್ಲಿ ಜಿಲ್ಲಾಧಿಕಾರಿಗಳ ನಡೆ ಹಳ್ಳಿಗಳ ಕಡೆ

ತಿ.ನರಸೀಪುರ, ಜೂ.24(ಎಸ್‌ಕೆ)– ಸರ್ಕಾರಿ ಯೋಜನೆಗಳು ಸಕಾಲದಲ್ಲಿ ಸಾರ್ವಜನಿಕರಿಗೆ ತಲುಪಲು ಜಿಲ್ಲಾಡಳಿತ ಇಂತಹ ಕಾರ್ಯಕ್ರಮಗಳ ಮೂಲಕ ಗ್ರಾಮೀಣ ಭಾಗಗಳಿಗೆ ಬಂದು ಸೌಲಭ್ಯ ಒದಗಿಸುತ್ತಿರುವುದು ಉತ್ತಮ ಕಾರ್ಯ ಎಂದು ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ತಿಳಿಸಿದರು.

ತಾಲೂಕಿನ ಕೆಂಪಯ್ಯನಹುಂಡಿಯಲ್ಲಿ ಶುಕ್ರವಾರ ನಡೆದ ಜಿಲ್ಲಾಧಿಕಾರಿಗಳ ನಡೆ ಹಳ್ಳಿಗಳ ಕಡೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸರ್ಕಾರಿ ಯಾವುದೇ ಯೋಜನೆ ಮಾಡಿದರೂ, ಅದು ಅರ್ಹರಿಗೆ ಸಿಗಬೇಕು. ಇಲ್ಲವಾದಲ್ಲಿ ಪ್ರಯೋಜನವಾಗಲ್ಲ. ಸಂಧ್ಯಾ ಸುರಕ್ಷಾ ಯೋಜನೆ, ವಿಧವಾ ವೇತನ ಸೇರಿದಂತೆ ಮಾಸಿಕ ಪಿಂಚಣಿ ಯೋಜನೆಗಳು ಅರ್ಹ ಹಿರಿಯರಿಗೆ ತಲುಪಬೇಕು ಎಂದರು.

ಕಂದಾಯ ಇಲಾಖೆಯಲ್ಲಿ ರೈತರಿಗೆ, ನಾಗರಿಕರಿಗೆ ಆಗುತ್ತಿರುವ ಸಮಸ್ಯೆಗಳಿಗೆ ಪರಿಹಾರ ದೊರಕಬೇಕು. ಯಾವುದೇ ಸಮಸ್ಯೆಗಳ ಬಗ್ಗೆ ಜನರು ಇಲ್ಲಿಗೆ ಬಂದಿರುವ ಅಧಿಕಾರಿಗಳಿಗೆ ತಿಳಿಸಿದರೆ ಕೂಡಲೇ ಅಗತ್ಯ ಕ್ರಮ ವಹಿಸಲಾಗುತ್ತಿದೆ. ತೊಂದರೆ ಇದ್ದಲ್ಲಿ ಕ್ರಮ ಕೈಗೊಳ್ಳುವಂತೆ ಸೂಚಿಸುತ್ತೇವೆ. ನಿಮ್ಮ ಅಹವಾಲುಗಳನ್ನು ಸ್ವೀಕರಿಸಿ ಮುಂದಿನ ಕ್ರಮ ವಹಿಸುವ ಭರವಸೆ ನೀಡಿದರು.

ಇದೇ ವೇಳೆ ಅರ್ಹ ಫಲಾನುಭವಿಗಳಿಗೆ ಮಂಜೂರಾತಿ ಆದೇಶ ಪತ್ರಗಳನ್ನು ಶಾಸಕರು ವಿತರಿಸಿದರು. ಕಾರ್ಯಕ್ರಮದಲ್ಲಿ ತಾಪಂ ಇಓ ಸಿ.ಕೃಷ್ಣ, ತಹಸೀಲ್ದಾರ್ ಬಿ.ಗಿರಿಜಾ, ಕಂದಾಯಾಧಿಕಾರಿ ದೇವಣ್ಣ, ಸರ್ವೇಶ್, ಜಿಪಂ ಮಾಜಿ ಸದಸ್ಯ ಕೆ.ಮಹದೇವ್,



ವರುಣಾ ಬ್ಲಾಕ್ ಅಧ್ಯಕ್ಷ ಮುದ್ದೇಗೌಡ, ಸಿಡಿಪಿಓ ಬಸವರಾಜು, ಗ್ರಾಪಂ ಅಧ್ಯಕ್ಷ ಆನಂದ್, ಉಪಾಧ್ಯಕ್ಷೆ ಚೆನ್ನಮ್ಮ, ಸದಸ್ಯರಾದ ಗಂಗಾಧರ್, ನಾಗರಾಜು, ಜನಕಮ್ಮ, ನಾಗರಾಜು, ಕಾವ್ಯ, ಶೋಭಾ, ಮುಖಂಡರಾದ ರಾಜೇಂದ್ರ ಮಂಜುನಾಥ್, ಬಾಬು, ಮಹದೇವಸ್ವಾಮಿ, ಕೆ.ಎಸ್.ಮಹೇಶ್.ದೊಡ್ಡಯ್ಯ, ಲೋಕೇಶ್, ಪಿಎಸಿಸಿ ಅಧ್ಯಕ್ಷ ಮಸ್ರೂರ್ ಅಹಮದ್, ಮಾಜಿ ಅಧ್ಯಕ್ಷ ನಾಗರಾಜು, ಕೃಷಿ ಸಹಾಯಕ ನಿರ್ದೇಶಕಿ ಸುಹಾಸಿನಿ, ಎಸ್‌ಐ ತಿರುಮಲ್ಲೇಶ್, ಪಿಡಿಓ ಅಮ್ಜದ್ ಪಾಷ ಮತ್ತಿತರರಿದ್ದರು.

ನಿಧನ

ಟಿ.ಎನ್.ಗೋಪಾಲಕೃಷ್ಣ

ತಿ.ನರಸೀಪುರ, ಜೂ.24– ತಾಲೂಕಿನ ಮುಡುಕುತೊರೆ ಭ್ರಮರಾಂಬ ಮಲ್ಲಿಕಾರ್ಜುನಸ್ವಾಮಿ ದೇವಸ್ಥಾನದ ನಿವೃತ್ತ ಶಾನುಭೋಗರಾದ ಟಿ.ಎನ್.ಗೋಪಾಲಕೃಷ್ಣ (67) ಅವರು ಇಂದು ಮೈಸೂರಿನ ಖಾಸಗಿ ಆಸ್ಪತೆಯಲ್ಲಿ ನಿಧನರಾದರು.



ತಲಕಾಡಿನ ನಿವಾಸಿಗಳಾದ ದಿವಂಗತರು ಪತ್ನಿ, ಓರ್ವ ಪುತ್ರ ಮತ್ತು ಪುತ್ರಿ, ಅಕ್ಕಂದಿರು, ಅಣ್ಣಂದಿರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ತಲಕಾಡಿನ ಕಾವೇರಿನದಿ ದಡದಲ್ಲಿ ದಿವಂಗತರ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಟಿ.ಪಿ.ಶಿವಕುಮಾರಸ್ವಾಮಿ

ತಲಕಾಡಿನ ವರ್ತಕರಾದ ಟಿ.ಪಿ. ಶಿವಕುಮಾರಸ್ವಾಮಿ (ಭಗವಂತಪ್ಪ) ಅವರು ತಲಕಾಡಿನ ತಮ್ಮ ಸ್ವಗೃಹದಲ್ಲಿ ನಿಧನರಾದರು. ಅವರಿಗೆ 71 ವರ್ಷ ವಯಸ್ಸಾಗಿತ್ತು. ದಿವಂಗತರು ಪತ್ನಿ, ಮೂವರು ಪುತ್ರಿಯರು, ಅಕ್ಕ, ತಮ್ಮ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ.

ತಲ ಕಾಡಿನ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹೆಚ್.ಪಿ. ಸುರೇಶ್

ಹುಣಸೂರು, ಜೂ.24(ಕೆಕೆ)– ನಗರದ ಸ್ಟೋರ್ ಬೀದಿ ನಿವಾಸಿ ಹೆಚ್.ಪಿ. ಸುರೇಶ್ (52) ಶುಕ್ರವಾರ ನಿಧನರಾದರು.



ಮೃತರು ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಹುಣಸೂರಿನ ರುದ್ರಭೂಮಿಯಲ್ಲಿ ಶನಿವಾರ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬಿಳಿಗೆರೆ ಗ್ರಾಪಂ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ನಂಜನಗೂಡು, ಜೂ.24 (ಸುದರ್ಶನ್)– ನಂಜನಗೂಡು ತಾಲೂಕಿನ ಬಿಳಿಗೆರೆ ಗ್ರಾಪಂ ನೂತನ ಅಧ್ಯಕ್ಷರಾಗಿ ರಾಜಮ್ಮ, ಉಪಾಧ್ಯಕ್ಷರಾಗಿ ಮಂಜುಳ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ತೆರವಾಗಿದ್ದ ಅಧ್ಯಕ್ಷ, ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಬಿಳಿಗೆರೆ ಗ್ರಾಪಂ ಆವರಣದಲ್ಲಿ ಚುನಾವಣೆ ನಡೆಸಲಾಯಿತು. ಅಧ್ಯಕ್ಷರ ಸ್ಥಾನಕ್ಕೆ ರಾಜಮ್ಮ, ಉಪಾಧ್ಯಕ್ಷರ ಸ್ಥಾನಕ್ಕೆ ಮಂಜುಳಾ ನಾಮಪತ್ರ ಸಲ್ಲಿಸಿದರು. ಬೇರೆ ಯಾರೂ ನಾಮ ಪತ್ರ ಸಲ್ಲಿಸದ ಕಾರಣದ ಅಧ್ಯಕ್ಷರಾಗಿ ರಾಜಮ್ಮ, ಉಪಾಧ್ಯಕ್ಷರಾಗಿ ಮಂಜುಳ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಅಶೋಕ್ ಘೋಷಣೆ ಮಾಡಿದರು.

ಹಳೆ ಪಠ್ಯಪುಸ್ತಕ ಮುಂದುವರೆಸಲು ಒತ್ತಾಯಿಸಿ ಪ್ರತಿಭಟನೆ

ಹುಣಸೂರು, ಜೂ.24(ಕೆಕೆ)– ರೋಹಿತ್ ಚಕ್ರತೀರ್ಥ ನೇತೃತ್ವದ ಪಠ್ಯ ಪರಿಷ್ಕರಣಾ ಸಮಿತಿ ಶಿಫಾರಸ್ಸು ಮಾಡಿರುವ ಪಠ್ಯಗಳನ್ನು ರದ್ದುಪಡಿಸಿ ಹಳೆ ಪಠ್ಯಪುಸ್ತಕಗಳನ್ನೇ ಮುಂದುವರೆಸಲು ಒತ್ತಾಯಿಸಿ ದಸಂಸ ಹಾಗೂ ಪ್ರಗತಿಪರ ಸಂಘಟನೆಗಳು ಪ್ರತಿಭಟನೆ ನಡೆಸಿದವು.

ನಗರದ ಸಂವಿಧಾನ ಸರ್ಕಲ್‌ನಲ್ಲಿ ಜಮಾಯಿಸಿದ ಹುಣಸೂರು ತಾಲೂಕು ದಸಂಸ ಮತ್ತು ದಲಿತ ನವ ನಿರ್ಮಾಣ ವೇದಿಕೆ, ಮೂಲ ಆದಿವಾಸಿ ಸಂಘ, ಅಲ್ಪಸಂಖ್ಯಾತ ಸಂಘಟನೆ ಮತ್ತು ಪ್ರಗತಿಪರ ಸಂಘಟನೆಗಳ ಕಾರ್ಯಕರ್ತರು ಕೆಲಕಾಲ ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.



ಈ ವೇಳೆ ಮಾತನಾಡಿದ ಪ್ರತಿಭಟನಾಕಾರರು, ರಾಜ್ಯ ಸರ್ಕಾರ ರೋಹಿತ್ ಚಕ್ರತೀರ್ಥ ನೇತೃತ್ವದ ಪಠ್ಯ ಪರಿಷ್ಕರಣಾ ಸಮಿತಿ ರಚಿಸಿದ್ದು, ಈ ಸಮಿತಿಯು ಹೊಸ ಪಠ್ಯಪುಸ್ತಕಗಳಲ್ಲಿ ಹಿಂದುತ್ವ, ಕೋಮು, ದ್ವೇಷದ ಭಾವನೆಗಳನ್ನು ಬಿತ್ತುವ ಪಠ್ಯಗಳನ್ನು ಸೇರಿಸಿ ಮಕ್ಕಳ ಮನಸ್ಸಿನ ಮೇಲೆ ಜಾತಿ ಧರ್ಮದ ಹೆಸರಿನಲ್ಲಿ ಕೋಮು ಭಾವನೆಯನ್ನುಂಟು ಮಾಡಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ದಲಿತ ಮುಖಂಡ ಹರಿಹರ ಆನಂದಸ್ವಾಮಿ ಮಾತನಾಡಿದರು. ಪ್ರತಿಭಟನೆಯಲ್ಲಿ ಪುಟ್ಟಸ್ವಾಮಿ, ದೇವೇಂದ್ರ, ಡೇವಿಡ್, ಕೆಂಪರಾಜು, ಗಜೇಂದ್ರ, ದರ್ಶನ್, ಡಿ.ಕುಮಾರ, ಬಿ.ಶಿವಣ್ಣ, ನಾಗೇಶ್, ಬಸವಲಿಂಗಯ್ಯ, ಹೊನ್ನಪ್ಪ, ಮುಸ್ಲಿಂ ಮುಖಂಡರಾದ ಖಾಲೀದ್, ಅಜೀಜ್, ರಾಜು, ಎಂ.ಕೃಷ್ಣಯ್ಯ, ಇತರೆ ಪ್ರಗತಿಪರ ಸಂಘಟನೆಗಳ ಪದಾಧಿಕಾರಿಗಳು ಭಾಗವಹಿಸಿದ್ದರು.

ಎಲೆಮುದ್ದನಹಳ್ಳಿಯಲ್ಲಿ ಜಿಲ್ಲಾಧಿಕಾರಿಗಳ ನಡೆ ಹಳ್ಳಿ ಕಡೆ ಮತ್ತು ಜನಸಂಪರ್ಕ ಸಭೆ

ಒತ್ತುವರಿಯಾಗಿರುವ ಕೆರೆ ಕಟ್ಟೆ ತೆರವಿಗೆ ಕ್ರಮ ಕೈಗೊಳ್ಳಿ: ಸಾರಾ ಸೂಚನೆ

ಭೇರ್ಯ, ಜೂ.24– ಸಾಲಿಗ್ರಾಮ ಮತ್ತು ಕೆ.ಆರ್.ನಗರ ತಾಲೂಕು ವ್ಯಾಪ್ತಿಯ ಗ್ರಾಮಗಳಲ್ಲಿ ಒತ್ತುವರಿಯಾಗಿರುವ ಕೆರೆ ಕಟ್ಟೆಗಳನ್ನು ಅಳತೆ ಮಾಡಿಸಿ ತೆರವುಗೊಳಿಸಲು ಕ್ರಮ ಕೈಗೊಳ್ಳಬೇಕು ಎಂದು ಶಾಸಕ ಸಾ.ರಾ.ಮಹೇಶ್ ಸೂಚಿಸಿದರು.

ಸಾಲಿಗ್ರಾಮ ತಾಲೂಕಿನ ಎಲೆಮುದ್ದನಹಳ್ಳಿಯಲ್ಲಿ ಶುಕ್ರವಾರ ನಡೆದ 'ಜಿಲ್ಲಾಧಿಕಾರಿಗಳ ನಡೆ ಹಳ್ಳಿ ಕಡೆ ಮತ್ತು ಜನಸಂಪರ್ಕ ಸಭೆಯಲ್ಲಿ ಸಾರ್ವಜನಿಕರ ಅಹವಾಲು ಆಲಿಸಿ ಮಾತನಾಡಿದ ಅವರು, ಕೂಡಲೇ ಈ ಬಗ್ಗೆ ಕಾರ್ಯ ಪ್ರವೃತ್ತರಾಗಿ ತಮಗೆ ವರದಿ ನೀಡುವಂತೆ ಜಲಸಂಪನ್ಮೂಲ ಇಲಾಖೆ ಕಾರ್ಯಪಾಲಕ ಇಂಜಿನಿಯರ್ ಜಿ.ಜೆ.ಈರಣ್ಣ ಅವರಿಗೆ ತಿಳಿಸಿದರು.

ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ಇದ್ದು, ಇದನ್ನು ಕೂಡಲೇ ಬಗೆಹರಿಸಬೇಕೆಂದು ಗ್ರಾಮಸ್ಥರು ಮನವಿ ಮಾಡಿದಾಗ ಇದಕ್ಕೆ ಸ್ಪಂದಿಸಿದ ಶಾಸಕರು ಇನ್ನೆರಡು ದಿನಗಳಲ್ಲಿ ಗ್ರಾಮ ಪರಿಮಿತಿಯಲ್ಲಿ 2 ಕೊಳವೆ ಬಾವಿ ಕೊರೆಸಿ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವುದಾಗಿ ಭರವಸೆ ನೀಡಿದರು.

ಗ್ರಾಮದಲ್ಲಿ ಶಿಥಿಲಗೊಂಡಿರುವ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರ ವಸತಿ ಗೃಹದ ದುರಸ್ತಿಗೆ 8 ಲಕ್ಷ ಹಣ ಬಿಡುಗಡೆ ಮಾಡುವುದರ ಜೊತೆಗೆ ತ್ವರಿತವಾಗಿ ಕಾಮಗಾರಿ ಆರಂಭಿಸುವುದಾಗಿ ಭರವಸೆ ನೀಡಿದ ಶಾಸಕರು ಇಲ್ಲಿ ಬಸ್ ನಿಲ್ದಾಣ ನಿರ್ಮಾಣ ಮಾಡಲು ಅಗತ್ಯವಿರುವ ಅನುದಾನ ನೀಡುವುದಾಗಿ ಘೋಷಿಸಿದರು.

ಎರಡೂ ತಾಲೂಕು ವ್ಯಾಪ್ತಿಯ ಗ್ರಾಮಗಳಲ್ಲಿ ಮಳೆಯಿಂದ ಹಾನಿಗೀಡಾಗಿರುವ ಮನೆಗಳ ಮಾಲೀಕರಿಗೆ ಕೂಡಲೇ ಪರಿಹಾರ ನೀಡಲು ಕ್ರಮ ಕೈಗೊಳ್ಳಬೇಕೆಂದು ತಹಸೀಲ್ದಾರ್ ಎಸ್.ಸಂತೋಷ್ ಅವರಿಗೆ ಸೂಚನೆ ನೀಡಿದ ಸಾ.ರಾ.ಮಹೇಶ್ ಈ ವಿಚಾರದಲ್ಲಿ ನಿರ್ಲಕ್ಷ್ಯ ವಹಿಸಿದರೆ ಕಠಿಣ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಕೆ ನೀಡಿದರು.



ಜನಸ್ಪಂದನಾ ಸಭೆಯಲ್ಲಿ ನಾಗರಿಕರು ನೀಡಿದ ದೂರುಗಳನ್ನು ತ್ವರಿತವಾಗಿ ಪರಿಹರಿಸಿ ಫಲಾನುಭವಿಗಳ ಮನೆ ಬಾಗಿಲಿಗೆ ಸವಲತ್ತು ತಲುಪಿಸಬೇಕೆಂದು ಕಟ್ಟಾಜ್ಞೆ ಹೊರಡಿಸಿದ ಅವರು, ಕಂದಾಯ ಇಲಾಖೆ ಅಧಿಕಾರಿಗಳು ಜನಪರವಾಗಿ ಕೆಲಸ ಮಾಡಬೇಕೆಂದರು. ಭೂ ಮಾಪನ ಇಲಾಖೆ ಅಧಿಕಾರಿಗಳು ಭ್ರಷ್ಟಾಚಾರದಲ್ಲಿ ತೊಡಗಿದ್ದು ರೈತರನ್ನು ಅನಗತ್ಯವಾಗಿ ಕಚೇರಿಗೆ ಅಲೆಸುವುದರ ಜತೆಗೆ ಸುಲಿಗೆ ಮಾಡುತ್ತಿದ್ದು, ಈ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಸಾಲಿಗ್ರಾಮದ ಯುವ ಮುಖಂಡ ದಿಲೀಪ್ ಶಾಸಕರಿಗೆ ದೂರಿದಾಗ ಕೆಂಡಾಮಂಡಲರಾದ ಅವರು ಮುಂದೆ ಇಂತಹ ದೂರುಗಳು ಕೇಳಿ ಬಂದರೆ ಸಾಮೂಹಿಕವಾಗಿ ವರ್ಗಾವಣೆ ಮಾಡಿಸುವುದಾಗಿ ಹೇಳಿದ ಅವರು ತಪ್ಪು ತಿದ್ದಿಕೊಳ್ಳದಿದ್ದರೆ ಅಮಾನತು ಮಾಡಲು ಶಿಫಾರಸು ಮಾಡುವುದಾಗಿ ಹೇಳಿದರು.

ಆನಂತರ ಅವರು ಪಂಚಾಯ್ತಿ ವ್ಯಾಪ್ತಿಯ ಸಂಕನಹಳ್ಳಿ, ಕುರುಬಹಳ್ಳಿ ಮತ್ತು ಮೇಲೂರು ಗ್ರಾಮಗಳಿಗೆ ತೆರಳಿ ಜನಸ್ಪಂದನಾ ಸಭೆ ನಡೆಸಿ ಸಾರ್ವಜನಿಕರಿಂದ ಅಹವಾಲು ಆಲಿಸಿದರಲ್ಲದೆ ಕೆಲವು ಸಮಸ್ಯೆಗಳಿಗೆ ಸ್ಥಳದಲ್ಲಿಯೇ ಪರಿಹಾರ ಸೂಚಿಸಿದರು.

ಪಿಡಿಓಗೆ ತರಾಟೆ: ಸಮರ್ಪಕವಾಗಿ ಕಾರ್ಯ ನಿರ್ವಹಿಸದೆ ಸಾರ್ವಜನಿಕರಿಗೆ ತೊಂದರೆ ನೀಡುತ್ತಿರುವ ಪಿಡಿಓ ಸರಳಾ ಅವರ ಬಗ್ಗೆ ಸಂಕನಹಳ್ಳಿ ಗ್ರಾಮಸ್ಥರು ದೂರಿದಾಗ ಅವರನ್ನು ತರಾಟೆಗೆ ತೆಗೆದುಕೊಂಡ ಶಾಸಕ ಸಾ.ರಾ.ಮಹೇಶ್ ಮುಂದೆ ಈ ರೀತಿ ದೂರುಗಳು ಕೇಳಿ ಬಂದಲ್ಲಿ ಕಠಿಣ ಕ್ರಮ ಅನಿವಾರ್ಯ ಎಂದು ಎಚ್ಚರಿಕೆ ನೀಡಿದರಲ್ಲದೆ ನಾಗರಿಕರ ದೂರು ಆಲಿಸಿ ಇನ್ನೆರಡು ದಿನಗಳಲ್ಲಿ ಗ್ರಾಪಂಗೆ ಭೇಟಿ ನೀಡಿ ಪರಿಶೀಲಿಸಬೇಕೆಂದು ತಾಪಂ ಇಓ ಎಚ್.ಕೆ.ಸತೀಶ್ ಅವರಿಗೆ ಸೂಚನೆ ನೀಡಿದರು. ನಂತರ ಕುರುಬಹಳ್ಳಿ, ಮೇಲೂರು, ಸಂಕನಹಳ್ಳಿ, ಬಾಚಹಳ್ಳಿ ಗ್ರಾಮಗಳಿಗೆ ಭೇಟಿ ಜನರ ಕುಂದು ಕೊರತೆ ಆಲಿಸಿದ ಶಾಸಕರು ಸ್ಥಳದಲ್ಲಿ ಕೆಲವೊಂದು ಸಮಸ್ಯೆಗಳನ್ನು ಬಗೆಹರಿಸಿದರು.

ಸಾಲಿಗ್ರಾಮ ತಹಸೀಲ್ದಾರ್ ಮೋಹನ್, ಉಪತಹಸೀಲ್ದಾರ್ ಮಹೇಶ್, ತೋಟಗಾರಿಕೆ ಸಹಾಯಕ ನಿರ್ದೇಶಕ ಪ್ರಸನ್ನ, ಕೃಷಿ ಸಹಾಯಕ ನಿರ್ದೇಶಕ ಗುರು ಪ್ರಸಾದ್, ಸಿಡಿಪಿಓ ಪೂರ್ಣಿಮಾ, ಮೇಲೂರು ಗ್ರಾಪಂ ಅಧ್ಯಕ್ಷ ಎಂ.ಜಿ.ನರೇಂದ್ರ, ಉಪಾಧ್ಯಕ್ಷೆ ಭಾರತಿ, ಮಾಜಿ ಅಧ್ಯಕ್ಷ ತುಳಸಿರಾಮ, ಸದಸ್ಯರಾದ ಕುಮಾರ್, ಸಾ.ರಾ.ಯುವ ಸೇನೆ ರಾಜ್ಯಾಧ್ಯಕ್ಷ ಗೌತಮ್, ತಾಪಂ ಇಓ ಎಚ್.ಕೆ.ಸತೀಶ್, ತಾಲೂಕು ಆರೋಗ್ಯಾಧಿಕಾರಿ ಡಾ.ಕೆ.ಆರ್.ಮಹೇಂದ್ರಪ್ಪ, ತಂದ್ರೆ ಅಂಕನಹಳ್ಳಿ ಪಿಎಸಿಸಿ ಅಧ್ಯಕ್ಷ ಮಂಜೇಗೌಡ, ಪಿಡಿಓ ಸರಳ, ಜೆಡಿಎಸ್ ಮುಖಂಡರಾದ ಮಹೇಂದ್ರ ಆನಂದ ಮತ್ತಿತರರು ಹಾಜರಿದ್ದರು.

2002ರ ಗುಜರಾತ್ ಗಲಭೆ ಪ್ರಕರಣ: ಪ್ರಧಾನಿ ಮೋದಿಗೆ ಸುಪ್ರೀಂ ಕೋರ್ಟ್ ಕ್ಲೀನ್ ಚಿಟ್

ಜಾಕಿಯಾ ಜಾಫ್ರಿ ಅರ್ಜಿ ವಜಾ



ನವದೆಹಲಿ: 2002ರ ಗುಜರಾತ್ ಗಲಭೆ ಪ್ರಕರಣದಲ್ಲಿ ಅಂದಿನ ಮುಖ್ಯಮಂತ್ರಿಯಾಗಿದ್ದ ಪ್ರಧಾನ ಮಂತ್ರಿ ನರೇಂದ್ರ ಮೋದಿಗೆ ಕ್ಲೀನ್ ಚಿಟ್ ಸಿಕ್ಕಿದೆ. ಕಾಂಗ್ರೆಸ್ ಮಾಜಿ ಸಂಸದ ಎಹ್ಸಾನ್ ಜಾಫ್ರಿ ಅವರ ವಿಧವೆ ಪತ್ನಿ ಜಾಕಿಯಾ ಜಾಫ್ರಿ ಅವರು ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಶುಕ್ರವಾರ ವಜಾ ಮಾಡಿದೆ. ಪ್ರಕರಣದಲ್ಲಿ ಪಿಎಂ ಮೋದಿ ಸೇರಿದಂತೆ ಹಲವರಿಗೆ ವಿಶೇಷ ತನಿಖಾ ತಂಡ (SIT) ಈ ಹಿಂದೆ ಕ್ಲೀನ್ ಚಿಟ್ ನೀಡಿತ್ತು.

ಅದನ್ನು ಪ್ರಶ್ನಿಸಿ ಜಾಕಿಯಾ ಜಾಫ್ರಿ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು. ಆದರೆ ಅಲ್ಲಿ ಕೂಡ ಅಪಜಯವಾಗಿದೆ.

2002ರಲ್ಲಿ ಗುಜರಾತ್ ರಾಜ್ಯದಲ್ಲಿ ನಡೆದ ಗಲಭೆಯಲ್ಲಿ ಅಂದಿನ ಗುಜರಾತ್ ಮುಖ್ಯಮಂತ್ರಿ ನರೇಂದ್ರ ಮೋದಿ ಮತ್ತು ಇತರ 63 ಮಂದಿಗೆ ವಿಶೇಷ ತನಿಖಾ ತಂಡ (ಎಸ್‌ಐಟಿ) ನೀಡಿದ ಕ್ಲೀನ್ ಚಿಟ್ ಅನ್ನು ಸುಪ್ರೀಂ ಕೋರ್ಟ್ ಎತ್ತಿಹಿಡಿದಿದೆ. ಹತ್ಯೆಯಾದ ಕಾಂಗ್ರೆಸ್ ನಾಯಕ ಎಹ್ಸಾನ್ ಜಾಫ್ರಿ ಅವರ ಪತ್ನಿ ಜಾಕಿಯಾ ಜಾಫ್ರಿ ಅವರ ಮನವಿಯನ್ನು ವಜಾಗೊಳಿಸಿದೆ.

ನ್ಯಾಯಮೂರ್ತಿ ಎ ಎಂ ಖಾನ್ವಿಲ್ಕರ್ ನೇತೃತ್ವದ ತ್ರಿಸದಸ್ಯ ಪೀಠವು 2012 ರಲ್ಲಿ ಎಸ್‌ಐಟಿ ಸಲ್ಲಿಸಿದ ಮುಕ್ತಾಯ ವರದಿಯ ವಿರುದ್ಧ ಝಕಿಯಾ ಜಾಫ್ರಿ ಅವರ ಪ್ರತಿಭಟನಾ ಅರ್ಜಿಯನ್ನು ತಿರಸ್ಕರಿಸಿದ ಮ್ಯಾಜಿಸ್ಟ್ರೇಟ್ ಆದೇಶವನ್ನು ಸುಪ್ರೀಂ ಕೋರ್ಟ್ ಎತ್ತಿಹಿಡಿದಿದೆ. ನ್ಯಾಯಮೂರ್ತಿಗಳಾದ ದಿನೇಶ್ ಮಾಹೇಶ್ವರಿ ಮತ್ತು ಸಿಟಿ ರವಿಕುಮಾರ್ ಅವರನ್ನೊಳಗೊಂಡ ಪೀಠ, ಜಾಕಿಯಾ ಜಾಫ್ರಿ ಮನವಿಯು ಅರ್ಹತೆ ಹೊಂದಿಲ್ಲ ಎಂದು ಹೇಳಿದೆ.

2002ರ ಗುಜರಾತ್ ಗಲಭೆಯಲ್ಲಿ ದೊಡ್ಡ ಪಿತೂರಿ ನಡೆದಿದೆ ಎಂದು ಜಾಕಿಯಾ ಆರೋಪಿಸಿದ್ದರು. ಫೆಬ್ರವರಿ 28, 2002 ರಂದು ಗೋಧ್ರಾ ರೈಲು ದಹನದ ಒಂದು ದಿನದ ನಂತರ ಅಹಮದಾಬಾದ್‌ನ ಗುಲ್ಬರ್ಗ್ ಸೊಸೈಟಿ ಯಲ್ಲಿ ಹಿಂಸಾಚಾರದ ಸಂದರ್ಭದಲ್ಲಿ ಕೊಲ್ಲಲ್ಪಟ್ಟ 68 ಜನರಲ್ಲಿ ಕಾಂಗ್ರೆಸ್ ನಾಯಕ ಮತ್ತು ಮಾಜಿ ಸಂಸದ ಎಹ್ಸಾನ್ ಜಾಫ್ರಿ ಕೂಡ ಒಬ್ಬರು.

2002ರಲ್ಲಿ ಗುಜರಾತ್ ಮುಖ್ಯಮಂತ್ರಿಯಾಗಿದ್ದ ಮೋದಿ ಸೇರಿದಂತೆ 64 ಮಂದಿಗೆ ಎಸ್‌ಐಟಿ ಕ್ಲೀನ್ ಚಿಟ್ ನೀಡಿದ್ದರ ವಿರುದ್ಧ ಜಾಕಿಯಾ ಜಾಫ್ರಿ ಸವಾಲು ಹಾಕಿದ್ದರು.

ಕಳೆದ ವರ್ಷ ಡಿಸೆಂಬರ್ 9 ರಂದು ಸುಪ್ರೀಂಕೋರ್ಟ್ ಅರ್ಜಿಯ ತೀರ್ಪನ್ನು ಕಾಯ್ದಿರಿಸಿತ್ತು ಸುಪ್ರೀಂಕೋರ್ಟ್, ಝಾಕಿಯಾ ಜಾಫ್ರಿ ಅವರ ಅರ್ಜಿಯನ್ನು ಹೊರತು ಪಡಿಸಿ, 2002ರ ಗುಜರಾತ್ ಗಲಭೆಯಲ್ಲಿ ನಡೆಸಿದ ತನಿಖೆಗಾಗಿ ಯಾರೂ ಅದರ ವಿರುದ್ಧ ಬೆರಳು ತೋರಿಸಿಲ್ಲ ಎಂದು ವಿಚಾರಣೆ ಸಂದರ್ಭದಲ್ಲಿ ಹೇಳಿದೆ.

"ಅಧಿಕಾರಶಾಹಿ ನಿಷ್ಕ್ರಿಯತೆ, ಪೋಲೀಸರ ಸಹಭಾಗಿತ್ವ, ದ್ವೇಷಪೂರಿತ ಭಾಷಣಗಳು ಮತ್ತು ಹಿಂಸಾಚಾರದ ಅನಾವರಣ ಇರುವಲ್ಲಿ ದೊಡ್ಡ ಪಿತೂರಿ ನಡೆದಿದೆ ಎಂದು ಜಾಕಿಯಾ ತಮ್ಮ ಅರ್ಜಿಯಲ್ಲಿ ಆರೋಪಿಸಿದ್ದರು.

ಫೆಬ್ರವರಿ 27, 2002 ರಂದು, ಗೋಧ್ರಾದಲ್ಲಿ ಸಬರಮತಿ ಎಕ್ಸ್‌ಪ್ರೆಸ್‌ನ ಎಸ್-6 ಕೋಚ್ ಅನ್ನು ಸುಟ್ಟುಹಾಕಿದಾಗ 59 ಜನರು ದಾರುಣವಾಗಿ ಮೃತಪಟ್ಟಿದ್ದರು. ಇದರ ವಿರುದ್ಧ ನಂತರ ರಾಜ್ಯದಲ್ಲಿ ತೀವ್ರ ಗದ್ದಲ, ಗಲಭೆ ಉಂಟಾಗಿತ್ತು.

ಫೆಬ್ರವರಿ 8, 2012 ರಂದು, SIT ಪ್ರಸ್ತುತ ಪ್ರಧಾನಿ ಮೋದಿ ಮತ್ತು ಹಿರಿಯ ಸರ್ಕಾರಿ ಅಧಿಕಾರಿಗಳು ಸೇರಿದಂತೆ 63 ಇತರರಿಗೆ ಕ್ಲೀನ್ ಚಿಟ್ ನೀಡುವ ಮುಕ್ತಾಯ ವರದಿಯನ್ನು ಸಲ್ಲಿಸಿತು, ಅವರ ವಿರುದ್ಧ ಯಾವುದೇ ಪ್ರಾಸಿಕ್ಯೂಟಬಲ್ ಸಾಕ್ಷ್ಯಗಳಿಲ್ಲ ಎಂದು ಹೇಳಿತ್ತು. ಜಾಕಿಯಾ ಜಾಫ್ರಿ 2018 ರಲ್ಲಿ ಸುಪ್ರೀಂಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದರು.

ಜುಲೈ 1ಕ್ಕೆ ಶಿವಣ್ಣನ 'ಬೈರಾಗಿ' ತೆರೆಗೆ



ಮೈಸೂರು, ಜೂ.24(ಜಿಎ)– ಬೈರಾಗಿ ಚಿತ್ರವು ಜುಲೈ 1ಕ್ಕೆ ರಾಜ್ಯಾದ್ಯಂತ ಬಿಡುಗಡೆಯಾಗಲಿದ್ದು, ನಾಳೆ ಸಂಜೆ ಚಾಮರಾಜನಗರದಲ್ಲಿ ಪ್ರೀ ರಿಲೀಸ್ ಈವೆಂಟ್ ನಡೆಯಲಿದೆ ಎಂದು ನಟ ಡಾ. ಶಿವರಾಜ್‌ಕುಮಾರ್ ತಿಳಿಸಿದರು.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೈರಾಗಿ ಚಿತ್ರವು ಜುಲೈ 1ಕ್ಕೆ ಬಿಡುಗಡೆಯಾಗಲಿದ್ದು, ಈ ಹಿನ್ನೆಲೆ ಚಿತ್ರತಂಡ ಬೈರಾಗಿ ಪ್ರೀ ಯಾತ್ರೆ ಆರಂಭಿಸಿದ್ದು ಅದರಂತೆ ರಾಮನಗರ, ಬಿಡದಿ, ಮದ್ದೂರು, ಮಂಡ್ಯ ಹಾಗೂ ಇಂದು ಮೈಸೂರಿನಲ್ಲಿ ಯಾತ್ರೆ ನಡೆಸುತ್ತಿದ್ದೇವೆ. ನಾಳೆ ಸಂಜೆ ಚಾಮರಾಜನಗರದ ಖಾಸಗಿ ಬಸ್ ನಿಲ್ದಾಣದ ಬಳಿ ಇರುವ ಡಾ.ಬಿ.ಆರ್. ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಪ್ರಿ ಈವೆಂಟ್ ನಡೆಯಲಿದೆ ಎಂದು ತಿಳಿಸಿದರು.

> ಸಿದ್ದರಾಮಯ್ಯ ಅವರು ಮುಖ್ಯ ಮಂತ್ರಿ ಅವಧಿಯಲ್ಲಿ ಶಕ್ತಿ ಧಾಮದ ಆವರಣದಲ್ಲಿ ನಿರ್ಮಾಣವಾಗಿದ್ದ ಕೌಶಲ್ಯ ಭವನದಲ್ಲಿ ನರ್ಸರಿಯಿಂದ 8ನೇ ತರಗತಿವರೆಗೂ ಶಾಲೆ ಆರಂಭ ವಾಗಲಿದ್ದು, ರಾಜ್ಯ ಸರ್ಕಾರವೂ ಉತ್ತಮ ರೀತಿಯಲ್ಲಿ ಸ್ಪಂದಿಸುತ್ತಿದೆ. ಆಗಸ್ಟ್ ಅಂತ್ಯದಲ್ಲಿ ನೂತನ ಕಟ್ಟಡದ ಕಾಮಗಾರಿ ಆರಂಭವಾಗಲಿದೆ.
> -ಶಿವರಾಜ್‌ಕುಮಾರ್

ಬೈರಾಗಿ ಚಿತ್ರ ಅದ್ದೂರಿಯಾಗಿ ಮೂಡಿ ಬಂದಿದೆ. ಕೊರೊನಾದಿಂದ ಚಿತ್ರೀಕರಣಕ್ಕೆ ತೊಂದರೆಯಾದರೂ 65 ದಿನಗಳಲ್ಲಿಯೇ ಚಿತ್ರ ಪೂರ್ಣವಾಗಿದ್ದು, ಸಿನಿಮಾ ಕಥೆಯೇ ಸಿನಿಮಾದ ನಿಜವಾದ ಹೀರೋ ಆಗಿದೆ. ಮಾನವೀಯತೆಯ ಮೌಲ್ಯಗಳ ಬಗ್ಗೆ ತಿಳಿಸಲಾಗಿದೆ. ಚಿತ್ರದಲ್ಲಿ ಬರುವ ಎಲ್ಲಾ ಪಾತ್ರಗಳು ವಿಶೇಷವಾಗಿದ್ದು, ಶಶಿಕುಮಾರ್ ಮತ್ತು ವಿನೋದ್ ಆಳ್ವಾ ಚಿತ್ರದಲ್ಲಿ ನಟಿಸಿದ್ದಾರೆ ಎಂದರು.


ಚಿತ್ರವೂ 2 ಗಂಟೆ 12 ನಿಮಿಷ ಗಳಿದ್ದು, ಚಿತ್ರದಲ್ಲಿರುವ ಮೂರು ಹಾಡುಗಳು ಅದ್ಭುತವಾಗಿ ಮೂಡಿ ಬಂದಿವೆ. ಸಾಹಸ ದೃಶ್ಯಗಳು ಜನರಿಗೆ ಇಷ್ಟವಾಗುವ ರೀತಿ ಇದ್ದು, ನಿರ್ದೇಶಕರಾದ ವಿಜಯ್ ಮಿಲ್ಟನ್, ಉತ್ತಮ ವಾಗಿ ನಿರ್ದೇಶನ ಮಾಡಿದ್ದಾರೆ ಎಂದರು.

ರಜನಿಕಾಂತ್ ಅವರ ಮುಂದಿನ ಚಿತ್ರವಾದ ಜೈಲರ್‌ನಲ್ಲಿ ಅತಿಥಿ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದೇನೆ. ಅವರ ನಮ್ಮ ಬಾಂಧವ್ಯ ಅನೇಕ ವರ್ಷಗಳದ್ದು, ಅವರೊಂದಿಗೆ ನಟಿಸುವುದು ಒಂದು ಅದೃಷ್ಟ ಎಂದ ಅವರು, ಅಪ್ಪುವನ್ನು ಮರೆಯಲು ಸಾಧ್ಯವಿಲ್ಲ. ಪ್ರತಿನಿತ್ಯ ಒಂದಲ್ಲ ಒಂದು ವಿಷಯಕ್ಕೆ ನೆನಪಾಗುತ್ತಾನೆ. ಅವರ ಮಕ್ಕಳಲ್ಲಿ ಅಪ್ಪುವನ್ನು ನೋಡುತ್ತಿದ್ದೇನೆ ಎಂದು ಅಪ್ಪು ನೆನೆದರು.

ಶಿವಣ್ಣ ಅವರ ಜೊತೆ ನಟಿಸಿದ ಟಗರು ಚಿತ್ರದ ಮೂಲಕ ನಾನು ರಾಜ್ಯದ ಎಲ್ಲಾ ಭಾಗಗಳಿಗೆ ತಲುಪಲು ಸಾಧ್ಯವಾಯಿತು ಮತ್ತು ಚಿತ್ರರಂಗದಲ್ಲಿ ನನಗೆ ಮರು ಜೀವ ಬಂದಂತಾಯಿತ್ತು ಚಿತ್ರದಲ್ಲಿ ಉತ್ತಮ ಸಂದೇಶವಿದ್ದು, ಹಾಗಾಗಿ ನಾನು ಒಪ್ಪಿಕೊಂಡೆ ಇದು ಟಗರು ಚಿತ್ರಕ್ಕಿಂತ ವಿಭಿನ್ನವಾಗಿದೆ ಎಂದು ನಟ ಡಾಲಿ ಧನಂಜಯ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ನಟ ಅಂಬರ್ ಪೃಥ್ವೀ ಮತ್ತು ನಿರ್ಮಾಪಕ ಕೃಷ್ಣ ಸಾರ್ಥಕ್ ಉಪಸ್ಥಿತರಿದ್ದರು.

ಪರಮೇಶ್ವರನ್ ಅಯ್ಯರ್ ನೀತಿ ಆಯೋಗದ ನೂತನ ಸಿಇಓ



ನವದೆಹಲಿ: ನೀತಿ ಆಯೋಗದ ನೂತನ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿ ಪರಮೇಶ್ವರನ್ ಅಯ್ಯರ್ ಅವರನ್ನು ನೇಮಕ ಮಾಡಲಾಗಿದೆ. ಎರಡು ವರ್ಷಗಳ ಅವಧಿಗೆ ಅವರನ್ನು ನೀತಿ ಆಯೋಗದ ಸಿಇಓ ಹುದ್ದೆಗೆ ನೇಮಕಗೊಳಿಸಿರುವುದಾಗಿ ಕೇಂದ್ರ ಸಿಬ್ಬಂದಿ ಮತ್ತು ತರಬೇತಿ ಇಲಾಖೆ ಶುಕ್ರವಾರ ಪ್ರಕಟಿಸಿದೆ.

ಹಾಲಿ ಕಾರ್ಯನಿರ್ವಹಿಸುತ್ತಿರುವ ಸಿಇಓ ಅಮಿತಾಭ್ ಕಾಂತ್ ಅವರ ಅಧಿಕಾರವಧಿ ಜೂನ್ 30, 2022 ರಂದು ಅಂತ್ಯಗೊಳ್ಳಲಿದೆ. ತದನಂತರ ಅಯ್ಯರ್ ಅಧಿಕಾರ ಸ್ವೀಕರಿಸಲಿದ್ದಾರೆ.ನಿವೃತ್ತ ಐಎಎಸ್ ಅಧಿಕಾರಿಯಾಗಿರುವ ಪರಮೇಶ್ವರನ್ ಅಯ್ಯರ್ ಅವರ ನೇಮಕಕ್ಕೆ ಸಂಪುಟದ ನೇಮಕಾತಿ ಸಮಿತಿ ಅನುಮೋದನೆ ನೀಡಿದೆ.

ಮುಂದಿನ ಆದೇಶದವರೆಗೂ ಅವರು ನೀತಿ ಆಯೋಗದ ಸಿಇಓ ಆಗಿ ಕಾರ್ಯನಿರ್ವಹಿಸಲಿದ್ದು, ಅಮಿತಾಭ್ ಕಾಂತ್ ಅವರಿಗೆ ಅನ್ವಯಿಸಲಾದ ನಿಯಮಗಳು ಮತ್ತು ಷರತ್ತುಗಳು ಪರಮೇಶ್ವರನ್ ಅಯ್ಯರ್ ಅವರಿಗೂ ಅನ್ವಯವಾಗಲಿವೆ ಎಂದು ಸರ್ಕಾರದ ಅಧಿಕೃತ ಆದೇಶದಲ್ಲಿ ತಿಳಿಸಲಾಗಿದೆ.

ಅಮಿತಾಭ್ ಕಾಂತ್ ಫೆ.17, 2016 ರಂದು ನೀತಿ ಆಯೋಗದ ಸಿಇಓ ಆಗಿ ನೇಮಕವಾಗಿದ್ದರು. ತದನಂತರ ಜೂನ್ 30,2019ರವರೆಗೂ ಅವರ ಅಧಿಕಾರಾವಧಿಯನ್ನು ವಿಸ್ತರಿಸಲಾಗಿತ್ತು. 2019 ಜೂನ್ 30 ರಂದು ಮತ್ತೆ ಎರಡು ವರ್ಷ ಅಧಿಕಾರಾವಧಿ ವಿಸ್ತರಣೆಗೊಂಡಿತ್ತು. ಜೂನ್ 2021ರಲ್ಲಿ ಮತ್ತೆ ಒಂದು ವರ್ಷ ಕಾಲ ಕಾಂತ್ ಅವರ ಅಧಿಕಾರಾವಧಿ ವಿಸ್ತರಣೆಯಾಗಿತ್ತು.

ಎನ್‌ಡಿಎ ರಾಷ್ಟ್ರಪತಿ ಅಭ್ಯರ್ಥಿ ದ್ರೌಪದಿ ಮುರ್ಮುಗೆ ಜಗನ್ಮೋಹನ್ ರೆಡ್ಡಿ ಬೆಂಬಲ



ಹೈದರಾಬಾದ್: ಆಂಧ್ರಪ್ರದೇಶದ ಮುಖ್ಯಮಂತ್ರಿ ಜಗನ್ ಮೋಹನ್ ರೆಡ್ಡಿ ರಾಷ್ಟ್ರಪತಿ ಚುನಾವಣೆಯ ಎನ್‌ಡಿಎ ಅಭ್ಯರ್ಥಿ ದ್ರೌಪದಿ ಮುರ್ಮು ಅವರಿಗೆ ಬೆಂಬಲ ಸೂಚಿಸಿದ್ದಾರೆ. ಈ ಚುನಾವಣೆಯಲ್ಲಿ ಗೆದ್ದರೆ ರಾಷ್ಟ್ರಪತಿ ಸ್ಥಾನವನ್ನು ಅಲಂಕರಿಸುವ ಮೊದಲ ಬುಡಕಟ್ಟು ಮಹಿಳೆ ಎಂಬ ಖ್ಯಾತಿಗೆ ಅವರು ಒಳಗಾಗಲಿದ್ದಾರೆ. ರಾಜ್ಯ ಸರ್ಕಾರದ ಅಧಿಕೃತ ಹೇಳಿಕೆ ಪ್ರಕಾರ, ಎಸ್ ಸಿ, ಎಸ್ ಟಿ, ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತ ಸಮುದಾಯಗಳ ಪ್ರಾತಿನಿಧ್ಯಕ್ಕೆ ಅವರು ಯಾವಾಗಲೂ ನೀಡುತ್ತಿರುವ ಪ್ರಾಮುಖ್ಯತೆಗೆ ಅನುಗುಣವಾಗಿ ಈ ಗೌರವ ಬಂದಿದೆ ಎಂದು ಜಗನ್ ನಂಬಿದ್ದಾರೆ. ಕಳೆದ ಮೂರು ವರ್ಷಗಳಲ್ಲಿ ಜಗನ್ ಕೂಡಾ ಈ ಸಮುದಾಯಗಳ ಉನ್ನತಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿದ್ದಾರೆ. ಈ ಹಿಂದೆ ನಿಗದಿಯಾಗಿದ್ದ ಸಂಪುಟ ಸಭೆಯಿಂದಾಗಿ ದ್ರೌಪದಿ ಮುರ್ಮು ಅವರ ನಾಮಪತ್ರ ಸಲ್ಲಿಕೆಗೆ ಜಗನ್ ಮೋಹನ್ ರೆಡ್ಡಿ ಹಾಜರಾಗಲು ಸಾಧ್ಯವಾಗುತ್ತಿಲ್ಲ. ಬದಲಿಗೆ ರಾಜ್ಯಸಭಾ ಸದಸ್ಯ ವಿಜಯಸಾಯಿ ರೆಡ್ಡಿ ಹಾಗೂ ಲೋಕಸಭಾ ಸದಸ್ಯ ಮಿಥುನ್ ರೆಡ್ಡಿ ಹಾಜರಾಗಲಿದ್ದಾರೆ ಎಂದು ಪ್ರಕಟಿಸಲಾಗಿತ್ತು.



ಮೂರನೇ ವರ್ಷದ ಸವಿನೆನಪು

ನೀವು ನಮ್ಮನ್ನಗಲಿ ಇಂದಿಗೆ 3 ವರ್ಷ ಕಳೆದರೂ ಸದಾ ನೀವು ನಮ್ಮ ಮನಸ್ಸಿನಲ್ಲಿ ಹಸಿರಾಗಿದ್ದೀರಿ

ದುಃಖತಪ್ತರು: ಪತ್ನಿ ರತ್ನಮ್ಮ ಮಕ್ಕಳು, ಸೊಸೆ ಮತ್ತು ಅಳಿಯಂದಿರು ಹಾಗೂ ಮೊಮ್ಮಕ್ಕಳು, ಗಿರಿದರ್ಶಿನಿ ಬಡಾವಣೆ. ಮೈಸೂರು.

ಬಸವರಾಜು



5ನೇ ವರ್ಷದ ಸವಿನೆನಪು

ನೀವು ನಮ್ಮನ್ನಗಲಿ ಇಂದಿಗೆ 5 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ

ದುಃಖತಪ್ತರು: ತಂಗಿ ಸುಖಧ, ಮೊಮ್ಮಕ್ಕಳು ರಚನಾ ಹಾಗೂ ಕುಟುಂಬ ವರ್ಗದವರು ನೀಲಕಂಠನಗರ ನಂಜನಗೂಡು

ವಿ.ಚಿಕ್ಕತಾಯಮ್ಮ
ಆರೋಗ್ಯ ಇಲಾಖೆ (ನಿವೃತ್ತಿ)
ಮರಣ: 25.06.2017

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ಪಾಂಡವಪುರ ಟೌನ್, ತಾಲ್ಲೂಕು ಕಛೇರಿ ರಸ್ತೆ, ಟಿಎಂಸಿ ಕ್ವಾರ್ಟಸ್‌ನಲ್ಲಿ ವಾಸವಾಗಿರುವ ಶ್ರೀಮತಿ ರಾಣಿ ಕೋಂ ಎನ್.ಕೆ. ಮಂಜುನಾಥ (ಇನ್ನು ಮುಂದೆ ಅಡಮಾನ ಮಾಡುವವರು) ನನ್ನ ಕಕ್ಷಿದಾರರಾದ ಭಾರತೀಯ ಸ್ಟೇಟ್ ಬ್ಯಾಂಕ್, ಬಸ್ ಸ್ಟ್ಯಾಂಡ್ ರಸ್ತೆ, ಪಾಂಡವಪುರ ಶಾಖೆ, ಪಾಂಡವಪುರ ಟೌನ್ ರವರಲ್ಲಿ ಈ ಕೆಳಗಿನ ಅನುಸೂಚಿಯಲ್ಲಿರುವ ಸ್ವತ್ತನ್ನು ಅಡಮಾನ ಮಾಡಲು ಒಪ್ಪಿರುತ್ತಾರೆ. ಶ್ರೀಮತಿ ರಾಣಿ ಕೋಂ ಎನ್.ಕೆ. ಮಂಜುನಾಥ ರವರು (ಪಾಂಡವಪುರ ತಾಲ್ಲೂಕು, ಹಾರೋಹಳ್ಳಿ ಗ್ರಾಮದಲ್ಲಿ ವಾಸವಾಗಿರುವ ಶ್ರೀ ನಾರಯಣಗೌಡ ಬಿನ್ ಲಕ್ಷ್ಮೇಗೌಡ ಉ॥ ಬಚ್ಚೇಗೌಡ ರವರು ಪಾಂಡವಪುರ ಟೌನ್, ಶಾಂತಿನಗರ ಬಡಾವಣೆಯಲ್ಲಿ ವಾಸವಾಗಿರುವ ತಮ್ಮ 2ನೇ ಮಗಳು ಶ್ರೀಮತಿ ಅನಿತಾ ಕೋಂ. ಬಿ.ಕೆ. ಹರಿಕುಮಾರ ರವರಿಗೆ ದಿನಾಂಕ 16-5-2013 ರಂದು ದಾನವಾಗಿ ನೀಡಿರುವ 1ನೇ ಪುಸ್ತಕದ ಪಿಡಿ ನಂ. ಪಿಡಿಪಿಡಿ83 ರಲ್ಲಿ ಅಡಕವಾಗಿರುವ ನೋಂದಾಯಿತ ದಾನಪತ್ರದ ಸಂಖ್ಯೆ 472/2013-14ನ್ನು) ಪಾಂಡವಪುರ ತಾಲ್ಲೂಕು, ಕಸಬಾ ಹೋಬಳಿ, ಹಾರೋಹಳ್ಳಿ ಗ್ರಾಮದ ಸರ್ವೆ ನಂ. 102/1 ವಿಸ್ತೀರ್ಣ 0.02 ಗುಂಟೆ ಸ್ವತ್ತನ್ನು ಶ್ರೀಮತಿ ಅನಿತಾ ಕೋಂ. ಬಿ.ಕೆ. ಹರಿಕುಮಾರರವರಿಂದ ನೋಂದಾಯಿತ ದಾನಪತ್ರದ ಮೂಲಕ ಪಡೆದು ಮಂಡ್ಯ ಜಿಲ್ಲಾಧಿಕಾರಿಯವರಿಂದ ಅನ್ಯಕ್ರಾಂತ ಮಂಜೂರಾತಿ ಆದೇಶ ಸಂಖ್ಯೆ 173725 ದಿನಾಂಕ 5-11-2020 ರಂದು ಪಡೆದು ಪಾಂಡವಪುರ ಟೌನ್ ಕೌನ್ಸಿಲ್‌ನ ದಾಖಲಾತಿಯಲ್ಲಿ ಆಸ್ತಿ ಸಂಖ್ಯೆ: 6028 ಆಗಿ ನಮೂದಿಸಿರತಕ್ಕ ಆಸ್ತಿಯನ್ನು ಅಡಮಾನ ಮಾಡಲು ಇಚ್ಛಿಸಿರುತ್ತಾರೆ.

ಸದರಿ ದಾನಪತ್ರವನ್ನು ದಿನಾಂಕ 20-06-2022 ರಂದು ಅಂಬಿಕಾ ಸ್ಟೇಷನರೀಸ್, ಮಿನಿ ವಿಧಾನ ಸೌಧದ ಎದುರು ಜೆರಾಕ್ಸ್ ಮಾಡಿಸುವ ಸಂದರ್ಭದಲ್ಲಿ ಕಳೆದು ಕೊಂಡಿದ್ದು ಆ ಬಗ್ಗೆ ಪಾಂಡವಪುರ ಟೌನ್ ಪೋಲೀಸ್ ಠಾಣೆಯಲ್ಲಿ ದೂರನ್ನು ಸಹ ನೀಡಿ ಸ್ವೀಕೃತಿಯನ್ನು ಸಹ ಪಡೆದುಕೊಂಡಿರುತ್ತಾರೆ.

ಅಡಮಾನದಾರರು ಸದರಿ ಅನುಸೂಚಿ ಸ್ವತ್ತನ್ನು ಸಾಲದ ಸೌಲಭ್ಯಕ್ಕಾಗಿ ನನ್ನ ಕಕ್ಷಿದಾರರಿಗೆ ಅರ್ಜಿ ಸಲ್ಲಿಸಿರುತ್ತಾರೆ. ಯಾವುದೇ ವ್ಯಕ್ತ ಅಥವಾ ವ್ಯಕ್ತಿಗಳು ಕ್ರಯ, ಬದಲಾವಣೆ, ದಾನ, ಅಡಮಾನ, ಟ್ರಸ್ಟ್, ಅನುವಂಶಿಕವಾಗಿ, ಕುಟುಂಬದಲ್ಲಿನ ವ್ಯವಸ್ಥೆ, ಭತ್ಯೆ, ವಿಲ್, ಪಾಲುದಾರಿಕೆ, ಸ್ವಾಧೀನ, ಬಾಡಿಗೆ, ಒಳಬಾಡಿಗೆ, ಗೇಣಿ ರಹದಾರಿ, ವತ್ತೆ ಅಥವಾ ಇನ್ನಾವುದೇ ರೀತಿಯಲ್ಲಿ ಅನುಸೂಚಿ ಸ್ವತ್ತಿಗೆ ಸಂಬಂಧಿಸಿದಂತೆ ಹಕ್ಕು ಅಥವಾ ಆಸಕ್ತಿ ಹೊಂದಿದ್ದಲ್ಲಿ ಅಂತಹ ವ್ಯಕ್ತಿಯು ನನ್ನ ಈ ಕೆಳಗಿನ ವಿಳಾಸಕ್ಕೆ ದಾಖಲಾತಿಗಳೊಂದಿಗೆ ಈ ದಿನದಿಂದ 15 ದಿನಗಳ ಒಳಗಾಗಿ ಸಂಪರ್ಕಿಸಲು ತಿಳಿಸಿದೆ. ತಪ್ಪಿದಲ್ಲಿ ಯಾವುದೇ ವ್ಯಕ್ತಿಗಳಿಗೂ ಅನುಸೂಚಿ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ಹಕ್ಕು ಅಥವಾ ಆಸಕ್ತಿ ಇಲ್ಲವೆಂದು ಪರಿಗಣಿಸಿ ನನ್ನ ಕಕ್ಷಿದಾರರು ಅನುಸೂಚಿ ಸ್ವತ್ತನ್ನು ಅಡಮಾನ ಮಾಡಿಕೊಂಡು ಸಾಲದ ಹಣವನ್ನು ಶ್ರೀಮತಿ ರಾಣಿ ಕೋಂ ಎನ್.ಕೆ. ಮಂಜುನಾಥ ರವರಿಗೆ ಬಿಡುಗಡೆಗೊಳಿಸಲು ಮುಂದಾಗುತ್ತಾರೆ.

ಅನುಸೂಚಿ ಸ್ವತ್ತು

ಪಾಂಡವಪುರ ಟೌನ್, ಕೃಷ್ಣನಗರದಲ್ಲಿರುವ ಪಾಂಡವಪುರ ಟೌನ್ ಕೌನ್ಸಿಲ್‌ನ ದಾಖಲಾತಿಯಲ್ಲಿ ಆಸ್ತಿ ಸಂಖ್ಯೆ: 6028 ರಲ್ಲಿ ವಿಸ್ತೀರ್ಣ ಪೂರ್ವ-ಪಶ್ಚಿಮ: 11.34, 11.32, 2.00 ಮೀಟರ್ ಉತ್ತರ-ದಕ್ಷಿಣ: 20.00, 5.5, 5.37 ಮೀಟರ್. ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ ; ಪಶ್ಚಿಮಕ್ಕೆ: ಲೋಕೇಶ್‌ರವರ ಸ್ವತ್ತು ; ಉತ್ತರಕ್ಕೆ: ಎಸ್. ವೀಣಾರವರ ಸ್ವತ್ತು ; ದಕ್ಷಿಣಕ್ಕೆ: ರಸ್ತೆ.

Sd/- Uma L., B.A., LL.B., Advocate
E.No. KAR-1278/02 Mandya
S.M. Chamber of Law,
#8, Adichunchanagiri Building,
1st Cross, Subhash Nagar,
Mandya-571401. Mob: 9844609068

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

ಸಂಖ್ಯೆ:ಮೈನಪ್ರಾ/ವ.ಕ-6/107/2022-23 ದಿನಾಂಕ:23.06.2022

ಪತ್ರಿಕಾ ಪ್ರಕಟಣೆ

ಶ್ರೀ ಮಾದಯ್ಯ ರವರಿಗೆ ಕೆ.ಸಿ.ನಗರ ಬಡಾವಣೆಯಲ್ಲಿ ನಿವೇಶನ ಸಂಖ್ಯೆ325 ಅಳತೆ 12.00X18.00 ಮೀಟರ್ ನಿವೇಶನವು ಸಮಾಪನಾಧಿಕಾರಿ, ದಿ ಪ್ಯಾಲೇಸ್ ಸೆಂಟ್ರಲ್ ಕೋ-ಆಪರೇಟಿವ್ ಸೊಸೈಟಿ ಲಿ., ಮೈಸೂರು ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಮೈಸೂರು ಉಪವಿಭಾಗ, ಮೈಸೂರು ರವರಿಂದ ದಿ:28.11.1996 ರಂದು ಮಂಜೂರಾಗಿದ್ದು, ದಿ:07.11.1998 ರಂದು ಸ್ವಾಧೀನ ಪತ್ರ ಪಡೆದಿರುತ್ತಾರೆ. ನಂತರ ಮಂಜೂರಾತಿದಾರರಾದ ಶ್ರೀ ಮಾದಯ್ಯರವರು ಅವರ ಮಗನಾದ ಶ್ರೀ ಎಂ.ಬಸವರಾಜು ರವರಿಗೆ ದಿ: 18.12.2002 ರಂದು ನೊಂದಾಯಿತ ಧಾನಪತ್ರ ಮಾಡಿರುತ್ತಾರೆ. ದಿ: 27.02.2003 ರಂದು ರೂ.750/-ಗಳನ್ನು ಪಾವತಿಸಿಕೊಂಡು ಪ್ರಾಧಿಕಾರದಿಂದ ಶ್ರೀ ಎಂ.ಬಸವರಾಜು ವರ್ಗಾವಣೆ ಮಾಡಲಾಗಿರುತ್ತದೆ.

ಶ್ರೀ ಮೋಹನ್‌ರವರು ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಲಾಗಿ, ಖಾತಾದಾರರಾದ ಶ್ರೀಎಂ.ಬಸವರಾಜು ರವರು ದಿ: 23.09.2005 ರಂದು ಅವರ ಮಕ್ಕಳಾದ ಶ್ರೀ ಬಿ.ದೀಪಕ್ ಮತ್ತು ಶ್ರೀಬಿ.ಮೋಹನ್ ರವರುಗಳಿಗೆ ಮೈನರ್ ಗಾರ್ಡಿಯನ್ನಾಗಿ ಅವರ ತಾತ ಶ್ರೀ ಮಾದಯ್ಯರವರಿಗೆ ನೊಂದಾಯಿತ ದಾನಪತ್ರ ಮಾಡಿರುತ್ತಾರೆ. ಕುಟುಂಬ ಜೀವಿತ ಸದಸ್ಯರ ಪಟ್ಟಿಯ ಪ್ರಕಾರ ಶ್ರೀ ಎಂ.ಬಸವರಾಜು ರವರಿಗೆ ಶ್ರೀಮತಿ ನಾಗಮಣಿ ಮತ್ತು ಶ್ರೀಮತಿ ಶಿವಮ್ಮ ಎಂಬುದಾಗಿ ಇಬ್ಬರು ಪತ್ನಿಯರಿದ್ದು, ಇವರಲ್ಲಿ ಮೊದಲನೇ ಪತ್ನಿ ಶ್ರೀಮತಿ ನಾಗಮಣಿ ರವರು ಮೃತಿಯಾಗಿದ್ದು ಮತ್ತು ಇವರಮಗ ಶ್ರೀ "ದೀಪಕ್ ಮತ್ತು ಇವರ ಪತ್ನಿ ಶ್ರೀ ಎಂ.ಬಸವರಾಜು ಮರಣಹೊಂದಿರುವುದಾಗಿ, ಮರಣಸಮರ್ಥನಾ ಪತ್ರ, ಕುಟುಂಬ ಜೀವಿತ ಸದಸ್ಯರ ಪಟ್ಟಿ, ಪ್ರಮಾಣ ಪತ್ರ ಸಲ್ಲಿಸಿರುತ್ತಾರೆ.

ಮಂಜೂರಾತಿದಾರರಾದ ಶ್ರೀ ಮಾದಯ್ಯ ರವರು ಅವರ ಮಗನಾದ ಶ್ರೀ ಎಂ.ಬಸವರಾಜುರವರಿಗೆ ನೊಂದಾಯಿತ ದಾನಪತ್ರ ಮಾಡಿದ್ದು, ನಂತರ ಶ್ರೀ ಎಂ.ಬಸವರಾಜು ರವರ ಹೆಸರಿಗೆ ಪ್ರಾಧಿಕಾರದಿಂದ ವರ್ಗಾವಣೆ ಪತ್ರ ಪಡೆದು ನಂತರ ಅವರ ಮೈನರ್ ಮಕ್ಕಳಾದ ಶ್ರೀ ಬಿ.ಮೋಹನ್ ಮತ್ತು ಶ್ರೀ ಬಿ.ದೀಪಕ್ ರವರುಗಳ ಹೆಸರಿಗೆ ಅವರ ತಾತ ಶ್ರೀ ಮಾದಯ್ಯ ರವರ ಗಾರ್ಡಿಯನ್ನಾಗಿ ನೊಂದಾಯಿತ ದಾನಪತ್ರ ಮಾಡಿದ್ದು, ಈಗ ಇವರುಗಳ ಪೈಕಿ ಶ್ರೀ ಬಿ.ದೀಪಕ್ ರವರು ಮರಣ ಹೊಂದಿದ್ದು ಹಾಗೂ ಶ್ರೀ ಎಂ.ಬಸವರಾಜು ರವರಿಗೆ ಇಬ್ಬರು ಪತ್ನಿಯರಿದ್ದು ಈ ಪೈಕಿ ಮೊದಲನೇ ಪತ್ನಿ ಶ್ರೀಮತಿ ನಾಗಮಣಿ ರವರು ಮರಣಹೊಂದಿದ್ದು ಜೀವಿತ ಪತ್ನಿ ಶ್ರೀಮತಿ ಶಿವಮ್ಮ ರವರು ಹಾಗೂ ಅವರ ಮಗಳು ಶ್ರೀಮತಿ ಮನುಶ್ರೀ ರವರುಗಳು ಸೇರಿ' ಶ್ರೀ ಬಿ.ಮೋಹನ್ ರವರಿಗೆ ನೊಂದಾಯಿತ ದಾನಪತ್ರದ ಪ್ರಕಾರವರ್ಗಾವಣೆ ಮಾಡಬಹುದೆಂದು ಒಪ್ಪಿಗೆ ಪ್ರಮಾಣ ಪತ್ರ ಸಲ್ಲಿಸಿ ವರ್ಗಾವಣೆ ಮಾಡಿ ನಂತರ ಕ್ರಯಪತ್ರ ನೀಡುವಂತೆ ಕೋರಿರುತ್ತಾರೆ.

ಅರ್ಜಿದಾರರಾದ ಶ್ರೀ ಮೋಹನ್ ರವರು ವರ್ಗಾವಣೆ ಮಾಡಿ ಕ್ರಯಪತ್ರ ಕೋರಿ ಅರ್ಜಿ ಸಲ್ಲಿಸಿರುವುದರಿಂದ ಸದರಿಯವರ ಹೆಸರಿಗೆ ವರ್ಗಾವಣೆ ಮಾಡಿ ಕ್ರಯ ಪತ್ರ ನೀಡುವ ಸಂಬಂಧ ಯಾರಿಂದಾದರೂ ಆಕ್ಷೇಪಣೆ ಏನಾದರು ಇದ್ದಲ್ಲಿ ಈ ಪ್ರಕಟಣೆ ಹೊರಡಿಸಿದ 15 ದಿವಸಗಳೊಳಗೆ ಲಿಖಿತವಾಗಿ ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು ರವರಿಗೆ ಸಲ್ಲಿಸುವುದು. ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ನಿಯಮಾನುಸಾರ ಕ್ರಮ ವಹಿಸಲಾಗುವುದು.

– ವಿಶೇಷ ತಹಸೀಲ್ದಾರ್
ವಲಯ ಕಛೇರಿ-6 ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

ಕರ್ನಾಟಕ ಸರ್ಕಾರ
ತೋಟಗಾರಿಕೆ ಇಲಾಖೆ
ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರವರ ಕಛೇರಿ (ಜಿಲ್ಲಾ ಪಂಚಾಯತ್), ಪಿರಿಯಾಪಟ್ಟಣ

ಪ್ರಕಟಣೆ

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿಪಂ) ಪಿರಿಯಾಪಟ್ಟಣ ಕಛೇರಿ ವ್ಯಾಪ್ತಿಯ ಕಚೇರಿ ಕೆಲಸಗಳಿಗೆ ಬಾಡಿಗೆ ಆಧಾರದಲ್ಲಿ ಚಾಲಕ ಸಮೇತ ಒಂದು ಸಂಖ್ಯೆ ಲಘು ವಾಹನ (ಕಾರ್)ನ ಅವಶ್ಯಕತೆ ಇದ್ದು, ಚಾಲಕ ಸಮೇತ ಕಾರ್‌ನ್ನು ಬಾಡಿಗೆ ಆಧಾರದಲ್ಲಿ ಒದಗಿಸಲು ಕರ್ನಾಟಕ ಪಾರದರ್ಶಕತೆ ಸಾರ್ವಜನಿಕ ಸಂಗ್ರಹಣೆ ಅಧಿನಿಯಮ 2000 ರನ್ವಯ ಅರ್ಹತೆಯುಳ್ಳ ಹಾಗೂ ವಿವಿಧ ಅವಶ್ಯವಿರುವ ಕಾಯ್ದೆಗಳ ಕಾನೂನಿನ ಅಡಿಯಲ್ಲಿ ನೋಂದಣಿ ಮಾಡಿಕೊಂಡ ವ್ಯಕ್ತಿಗಳಿಂದ/ಸಂಸ್ಥೆಗಳಿಂದ ದ್ವಿಲಕೋಟೆಯಲ್ಲಿ ಟೆಂಡರ್ ಆಹ್ವಾನಿಸಿದೆ. ಟೆಂಡರ್‌ನಲ್ಲಿ ಭಾಗವಹಿಸಲು ಆಸಕ್ತಿಯುಳ್ಳ ಟೆಂಡರ್‌ದಾರರು ದಿ: 29.06.2022ರ ಸಂಜೆ 5.00 ರೊಳಗೆ ಟೆಂಡರ್‌ನ್ನು ಕಚೇರಿಯಲ್ಲಿ ಸಲ್ಲಿಸಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂ.ಸಂಖ್ಯೆ: 8310552021ರ ಮೂಲಕ ಅಥವಾ ಕೆಳಗಿನ ಸಹಿದಾರರನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/- ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು,
ಜಿಲ್ಲಾ ಪಂಚಾಯತ್, ಪಿರಿಯಾಪಟ್ಟಣ

DIPR/DDMYS/MCA/165/2022-23

ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ

ಅಪರ ನಿರ್ದೇಶಕರು, ಮೈಸೂರು ಪ್ರಾಂತೀಯ ಕಛೇರಿ,
ಮೈಸೂರು ವಿಭಾಗ, ಮೈಸೂರು. ಪರೀಕ್ಷಾ ಭವನ ಕಟ್ಟಡ,
ಕ್ರಾಫರ್ಡ್ ಹಾಲ್ ಹಿಂಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-05
ಇಮೇಲ್-adromys@gmail.com

ಸಂಖ್ಯೆ:ಆನಿ/ಪ್ರಾಕಮೈ/ಸಿಬ್ಬಂದಿ/ಹಿ.ಉ.ನಿ.ಉ.ನಿ.ವಾಟಾ/ಟೆಂಡರ್-1/2022-23 ದಿನಾಂಕ:23.06.2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ಈ ಕಛೇರಿಯ ಉಪಯೋಗಕ್ಕಾಗಿ ಒಂದು ಚಾಲಕ ಸಹಿತ ಕಾರನ್ನು(ಎ.ಸಿ) ಮಾಹೆಯಾನ 2500 ಸಾವಿರ ಕಿ.ಮೀ ಅಥವಾ 300 ಗಂಟೆಯವರೆಗೆ ಮಾಸಿಕ ಬಾಡಿಗೆ ಆಧಾರದಲ್ಲಿ (ಸರ್ಕಾರ ನಿಗಧಿಪಡಿಸಿರುವ ಗರಿಷ್ಠ ಮೊತ್ತ ರೂ.40,000/- + ತೆರಿಗೆ) ದಿನಾಂಕ:31.03.2023 ಅಥವಾ ಮುಂದಿನ ಆದೇಶವರೆಗೂ ಹೊರಗುತ್ತಿಗೆ ಆಧಾರದಲ್ಲಿ ಒದಗಿಸಲು ನೋಂದಾಯಿತ ಸಾರಿಗೆ ಸೇವೆ ಒದಗಿಸುವ ಸಂಸ್ಥೆಗಳಿಂದ ಟೆಂಡರನ್ನು ಆಹ್ವಾನಿಸಲಾಗಿದೆ.

ಟೆಂಡರ್ ಫಾರಂಗಳನ್ನು **ದಿನಾಂಕ:24.06.2022 ರಿಂದ 13.07.2022ರವರೆಗೆ ಸಂಜೆ. 4.00 ಗಂಟೆಯೊಳಗೆ** ಅರ್ಜಿ (ಟೆಂಡರ್ ದಸ್ತಾವೇಜು) ಶುಲ್ಕ ರೂ.400/- ಗಳನ್ನು ಪಾವತಿಸಿ ಈ ಕಛೇರಿಯಿಂದ ಪಡೆಯಬಹುದಾಗಿರುತ್ತದೆ. ಭರ್ತಿ ಮಾಡಿದ ಅರ್ಜಿ ನಮೂನೆಗಳನ್ನು ದ್ವಿ-ಲಕೋಟೆಯಲ್ಲಿ (ತಾಂತ್ರಿಕ ಮತ್ತು ಆರ್ಥಿಕ ಬಿಡ್ಡುಗಳ ಪ್ರತ್ಯೇಕ ಲಕೋಟೆಗಳು) **ದಿನಾಂಕ:14.07.2022ರ ಸಂಜೆ-4.00 ಗಂಟೆಯೊಳಗೆ** ರೂ.10,000/-ಗಳ ಇ.ಎಂ.ಡಿಯೊಡನೆ ಈ ಕಛೇರಿಗೆ ಸಲ್ಲಿಸುವುದು. **ದಿನಾಂಕ:16.07.2022ರಂದು ಸಂಜೆ 4.00 ಗಂಟೆಗೆ** ಉಪಸ್ಥಿತ ಟೆಂಡರ್‌ದಾರರ/ಪ್ರತಿನಿಧಿಗಳ ಸಮ್ಮುಖದಲ್ಲಿ ಟೆಂಡರ್ ತೆರೆಯಲಾಗುವುದು. ಹೆಚ್ಚಿನ ಮಾಹಿತಿಯನ್ನು ಹಿರಿಯ ಉಪನಿರ್ದೇಶಕರು, ಪ್ರಾಂತೀಯ ಕಛೇರಿ, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಪರೀಕ್ಷಾ ಭವನ ಕಟ್ಟಡ, ಕ್ರಾಫರ್ಡ್ ಹಾಲ್ ಹಿಂಭಾಗ, ಮೈಸೂರು ರವರಿಂದ ಪಡೆಯಬಹುದು.

ಸಹಿ/- ಹಿರಿಯ ಉಪನಿರ್ದೇಶಕರು,
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ,
ಪ್ರಾಂತೀಯ ಕಛೇರಿ, ಮೈಸೂರು ವಿಭಾಗ, ಮೈಸೂರು

DIPR/MYS/KAVITA/159/22-23

ಕರ್ನಾಟಕ ಸರ್ಕಾರ
ಜಲಸಂಪನ್ಮೂಲ ಇಲಾಖೆ

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ನಂ.1, ನೀರಾವರಿ ತನಿಖಾ ವಿಭಾಗ,
ಕಾವೇರಿ ಭವನ ಸಂಕೀರ್ಣ, ಗೋಕುಲಂ, 4ನೇ ಹಂತ, ಮೈಸೂರು-20. ಫೋನ್: 0821-2411420

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 03/2022-23 ದಿನಾಂಕ: 22.06.2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಇಂಜಿನಿಯರ್, ನಂ.1, ನೀರಾವರಿ ತನಿಖಾ ವಿಭಾಗ, ಮೈಸೂರು ಇವರು ರಾಜ್ಯಪಾಲರು, ಕರ್ನಾಟಕ ಸರ್ಕಾರ ಇವರ ಪರವಾಗಿ ಈ ಕೆಳಕಂಡ ಕಾಮಗಾರಿಗೆ ಕಾರ್ಮಿಕ ಇಲಾಖೆಯಲ್ಲಿ ನೋಂದಾಯಿಸಿದ ಅರ್ಹ ಏಜೆನ್ಸಿದಾರರು/ ಅರ್ಹ ಗುತ್ತಿಗೆದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಟೆಂಡರ್‌ದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **http://eproc.karnataka.gov.in** ಮೂಲಕ ತಮ್ಮ ಬಿಡ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬಹುದು.

ಕ್ರ ಸಂ.	ಸೇವೆಯ ಹೆಸರು	ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ (ರೂ.ಗಳಲ್ಲಿ)	ಅವಧಿ	ಇ.ಎಂ.ಡಿ ಮೊತ್ತ ರೂ.	ಟೆಂಡರ್ ಪ್ರೊಸೆಸಿಂಗ್ ಶುಲ್ಕ (ರೂ.ಗಳಲ್ಲಿ)
1	ಮೈಸೂರು ಜಿಲ್ಲೆ, ಟಿ.ನರಸೀಪುರ ತಾಲ್ಲೂಕಿನ ಕಾವೇರಿ-ಬನ್ನೂರು ಸಿ.ಎಂ.ಜಿ (ಬನ್ನೂರು) ಕೇಂದ್ರಕ್ಕೆ 01 ಮಾಪನಗಾರರು ಮತ್ತು 03 ಮಾಪನಗಾರರ ಸಹಾಯಕರು ಹಾಗೂ ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕಿನ ಲೋಕಪಾವನಿ-ಶ್ರೀನಿವಾಸ ಅಗ್ರಹಾರ ಸಿ.ಎಂ.ಜಿ (ಲೋಕಪಾವನಿ) ಕೇಂದ್ರಕ್ಕೆ 01 ಮಾಪನಗಾರರು ಮತ್ತು 01 ಮಾಪನಗಾರರ ಸಹಾಯಕರನ್ನು ಒದಗಿಸುವ ಕಾಮಗಾರಿ **KW-1**	8,69,000	10 ತಿಂಗಳು	21.800	ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನಲ್ಲಿ ಸೂಚಿಸಿರುವಂತೆ
2	ಮೈಸೂರು ಮತ್ತು ಕೊಡಗು ಜಿಲ್ಲೆಯಲ್ಲಿ ಬರುವ 05 ನದಿ ಮಾಪನ ಕೇಂದ್ರಗಳಿಗೆ ಅವಶ್ಯಕವಿರುವ ಮಾನವ ಸಂಪನ್ಮೂಲವನ್ನು ಒದಗಿಸುವ ಕಾಮಗಾರಿ **KW-1**	13,55,000	10 ತಿಂಗಳು	33,900	

ಟೆಂಡರ್ ದಾಖಲೆಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ನಲ್ಲಿ ದಿ: **23.06.2022 ರಂದು ಸಂಜೆ 4.00 ಗಂಟೆಯ** ನಂತರ ಪಡೆಯಬಹುದಾಗಿದೆ. ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಬಿಡ್ ಸಲ್ಲಿಸಲು ಕೊನೆ **ದಿ:30.06.2022, ಸಂಜೆ 4.00 ಗಂಟೆ,** ಬಿಡ್ ತೆರೆಯುವ **ದಿ: 01.07.2022, ಸಂಜೆ 4.30 ಗಂಟೆಗೆ,** ಹೆಚ್ಚಿನ ಮಾಹಿತಿಗಾಗಿ ಮೇಲ್ಕಾಣಿಸಿದ ವಿಳಾಸ ಸಂಪರ್ಕಿಸಬಹುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್,
ನಂ.1, ನೀರಾವರಿ ತನಿಖಾ ವಿಭಾಗ, ಮೈಸೂರು.

ವಾಸಾಸಂಇ/ಮೈಸೂರು/ಶಿರಡಿ ಸಾಯಿ/168/2022-23